ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 7

ಫೆಬ್ರವರಿ 15, 2009

ರೂ. 5/-



ಬದುಕುವ ಕನಿಷ್ಟ ಕೂಲಿಗಾಗಿ ಅಸಂಘಟಿತ ಕಾರ್ಮಿಕರ ಆಗ್ರಹ

ಕರ್ನಾಟಕ : ಮೂರನೆಯ ಶಕ್ತಿ ರಾಜಕೀಯ ಆಂದೋಲನದ ಚಿಂತನೆ



ಚುನಾವಣಾ ಆಯುಕ್ತರ ವಿವಾದ : ಸುಧಾರಣೆಯ ಅಗತ್ಯತೆ



ಬಳ್ಳಾರಿ : ಮತ್ತೊಂದು ವಿಮಾನ ನಿಲ್ದಾಣ ದೂರಾಲೋಚನೆಯೋ- ದುರಾಲೋಚನೆಯೋ ?

ಕೋಲಾರ : ಉದ್ಯೋಗ 'ಖಾತರಿ'ಗಾಗಿ ಸಂಘರ್ಷ

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಕಳೆದ ವಾರದಿಂದ

ಲೂಯಿ ಬೋನಾ ಪಾರ್ಟಿನಲ್ಲಿ ಮಾರ್ಕ್ಸ್:

"ಎಲ್ಲಾ ಸತ್ತ ಪೀಳಿಗೆಗಳ ಪರಂಪರೆಯು ಜೀವಿತ ಮನುಷ್ಯನ ಮನಸ್ಸಿನಲ್ಲಿ ಒಂದು ದುಃಸ್ವಪ್ನದಂತೆ ಸವಾರಿ ಮಾಡುತ್ತದೆ" ಎಂದಿದ್ದಾರೆ. ಇಂಥ ಪುನರಾವೃತ್ತಿ ಫ್ರಾನ್ಸಿನಲ್ಲಿ 1852ರಲ್ಲಿ ನಡೆದಿದ್ದರೆ ಹಿಂದುತ್ವದ ತ್ರಿಶೂಲಧಾರಿ ಬ್ರಿಗೇಡ್ 1992ರಲ್ಲಿ ಬಾಬರಿಮಸೀದಿ ಕೆಡಹಿದ ನಂತರ ಸಂಘಪರಿವಾರ ಬೆಳೆದ ಬಗೆ ಇದೇ ಬಗೆಯ ಇತಿಹಾಸದ ಪುನರಾವೃತ್ತಿ. ಇವೆಲ್ಲಾ ಅತೀತದ ಪ್ರೇತ–ಭೂತಭಾದೆಯಲ್ಲದೆ ಮತ್ತೇನು?

ಹಿಂದಿಯ ಪ್ರಖ್ಯಾತ ಲೇಖಕ ಹರಿಶಂಕರ ಪರಸಾಯಿಯವರು 'ಭೂತ್ ಕೇ ಪಾವ್ಞ್ ಪೀಚೆ' – ಲೇಖನ ಬರೆದಿದ್ದರು. ಅದರಲ್ಲಿ ಅವರು ಹೀಗೆನ್ನುತ್ತಾರೆ.

"ಕೆಲವು ಮನುಷ್ಯರ ಮಿದುಳಿನ ಕಾಲುಗಳು ಹಿಂಗಡೆಗೆ ಇರುತ್ತವೆ. ಇಂತಹವರಿಗೆ ಕಳೆದು ಹೋದುದೇ ಪರಮ ಶ್ರೇಷ್ಠ, ವರ್ತಮಾನ ಅತ್ಯಂತ ಹೇಯ." ನಮ್ಮದು ಋಷಿ ಪರಂಪರೆ! ನಾವು ಆರ್ಯರ ಸಂತಾನ! ಪ್ರಾಚೀನ ಕಾಲದಲ್ಲಿ ಹಾಲಿನ ನದಿಗಳು ಹರಿಯುತ್ತಿದ್ದವು. ಪ್ರಾಯಃ ಅವು ಕ್ಷೀರ–ಸಾಗರವನ್ನು ಸೇರುತ್ತಿದ್ದಿರಬೇಕು! ಇಲ್ಲಿ ಮುಖ್ಯ ಸಮಸ್ಯೆಯಿರುವುದು ಈ ಪ್ರೇತಭಾದೆಯನ್ನು ಬಿಡಿಸುವುದು. ಮಾರ್ಕ್ಸ್‌ರವರಂತೆ ಗೋರ್ಕಿಯವರೂ ಸಾಕಷ್ಟು ಈ ಭೂತೋಚ್ಚಾಟನಾ ಕಾರ್ಯವನ್ನು ಕೈಗೊಂಡಿದ್ದರು. ನಾವು ಕೂಡಾ ಅದನ್ನು ಮುಂದುವರಿಸಬೇಕಾಗಿದೆ.

ಕೊನೆಯಲ್ಲಿ ಎರಡು ಮಾತು:

ಇಂದು ಸಾಕಷ್ಟು ಜನ ತಿಳಿದ ವಿದ್ವಾಂಸರು ನಮಗೆ ಸಿಗುತ್ತಾರೆ. ಅವರ ಸಂಖ್ಯೆಯೂ ಅಪಾರವಿದೆ. ಆದರೆ, ಅವರು ಏನೂ ಮಾಡುವುದಿಲ್ಲ. ಮಾಡುವವನು ಇತಿಹಾಸ ನಿರ್ಮಾಣ ಮಾಡುತ್ತಾನೆ. ಕೇವಲ ಯೋಚಿಸುತ್ತಾ ಇರುವವನು ಇತಿಹಾಸ ಚಕ್ರದ ಗಾಲಿಯಡಿ ಹುಡಿಯಾಗಿ ಹೋಗುತ್ತಾನೆ. ಯಾರು ಯೋಚಿಸುತ್ತಾ ಕಾರ್ಯ ಪ್ರವೃತ್ತರಾಗುತ್ತಾರೊ ಅವರು ಮಾತ್ರ ಇತಿಹಾಸದ ರಥವನ್ನು ನಡೆಸಬಲ್ಲರು.

ಇಂಥ ಮಹಾ ಮಹಿಮರಲ್ಲಿ ಗೋರ್ಕಿಯವರು ಒಬ್ಬರು. ಅವರ 'ತಾಯಿ' ಕೋಟ್ಯಾಂತರ ಜನ ಸಮೂಹವನ್ನು ಪ್ರಭಾವಿಸಿತು. ನೂರಾರು ದೇಶಗಳಲ್ಲಿ ಅವರ ಪುಸ್ತಕ ಅನುವಾದಗೊಂಡಿತು. 1934ರಲ್ಲಿ ಗೋರ್ಕಿಯವರು 'ಪ್ರಗತಿಶೀಲ ಸೋವಿಯತ್ ಲೇಖಕ ಸಂಘವನ್ನು ಕಟ್ಟಿದರು. ಆ ಅಧಿವೇಶನಕ್ಕೆ ರೋಮ್ಯಾಂ ರೋಲಾಂ, ಆಂದ್ರೆ ಜೀದ್, ಹೆನ್ರಿ ಬಾರ್‌ಬೂಜ್, ಜಾರ್ಜ್ ಬಾರ್ನಾಡ್ ಶಾ ಮೊದಲಾದ ವಿಶ್ವವಿಖ್ಯಾತ ಲೇಖಕರು ಅಭಿನಂದನೆಗಳನ್ನು ಸಲ್ಲಿಸಿದರು. ಆನಂತರ 1935ರಲ್ಲಿ ಹೆನ್ರಿ ಬಾರ್‌ಬೂಸರ ನೇತೃತ್ವದಲ್ಲಿ ಪ್ಯಾರಿಸ್‌ನಲ್ಲಿ 'ಪ್ರಗತಿಶೀಲ ಲೇಖಕರ ಸಂಘ' ಸ್ಥಾಪನೆಯಾಯಿತು. ಅದೇ ವರ್ಷ ಜುಲೈಯಲ್ಲಿ 'World Congress of writers for the defence of culture' ಪಾರಿಸ್‌ನಲ್ಲಿ ನಡೆಯಿತು. ಆ ಅಧಿವೇಶನದ ಮುಖ್ಯ ಸಂಯೋಜಕರೂ ಗೋರ್ಕಿಯವರೇ ಆಗಿದ್ದರು. ಭಾರತೀಯ ಬುದ್ಧಿಜೀವಿಗಳು 1935ರಲ್ಲಿ ಇಂಗ್ಲೆಂಡಿನ ಚೀನೀ ರೆಸ್ಟೋರೆಂಟ್‌ನ ನೆಲಮಳಿಗೆಯಲ್ಲಿ 'Indian Progressive Writers Association' ಸ್ಥಾಪಿಸಿದರು. 'ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವ ಲೇಖಕರ ಅಧಿವೇಶನಕ್ಕೆ ಬೆಂಬಲ ಸೂಚಿಸಿದರು. ಅದರ ಮುಖ್ಯ ಪಾತ್ರದಾರಿಗಳು ಸಜ್ಜಾದ್ ಜಹೀರ್ ಮತ್ತು ಮುಲ್ಕ್‌ರಾಜ್ ಆನಂದ್. ಅವರು ತಮ್ಮ 'ಘೋಷಣಾ ಪತ್ರ'ವನ್ನು ಭಾರತಕ್ಕೆ ಕಳುಹಿಸಿದರು. ಪ್ರಾಸಂಗಿಕವಾಗಿ ಹೇಳುವುದಾದರೆ ಭಾರತದ ಗೋರ್ಕಿಯೆಂದು ಕರೆಯಬಹುದಾದ ಪ್ರೇಮ್‌ಚಂದ್ ಅದನ್ನು ತಮ್ಮ 'ಹಂಸ' ಪತ್ರಿಕೆಯಲ್ಲಿ ಪ್ರಕಟಿಸಿದರು. 1936ರಲ್ಲಿ ಭಾರತದಲ್ಲಿ ಸ್ಥಾಪನೆಗೊಂಡ ಪ್ರಗತಿಶೀಲ ಲೇಖಕ ಸಂಘದ ಮೊದಲ ಅಧ್ಯಕ್ಷರೂ ಆದ ಪ್ರೇಮ್‌ಚಂದ್ ಅವರು ಗೋರ್ಕಿ ಕುರಿತ ಶ್ರದ್ಧಾಂಜಲಿ ಸಭೆಯಲ್ಲಿ ದುಃಖ ತಪ್ತರಾಗಿ ಮಾತನಾಡಿದರು. ಎರಡೇ ತಿಂಗಳಲ್ಲಿ ಪ್ರೇಮ್‌ಚಂದ್ ಅವರೂ ತೀರಿಕೊಂಡರು. ಈ ಎರಡು ಅಮರ ಚೇತನಗಳು ತೀರಿಕೊಂಡುದು 1936ರಲ್ಲಿಯೇ.

ಇಂದು ನಮಗೆ ಗೋರ್ಕಿ ಅತ್ಯಂತ ಪ್ರಸ್ತುತ. ಏಕೆಂದರೆ, ಫ್ಯಾಸಿಸಮ್ ಬೇತಾಳನಂತೆ ಭಾರತವನ್ನು ಕಾಡುತ್ತಿದೆ. ಈ ಬೇತಾಳನ ಹುಟ್ಟಡಗಿಸಲು ನಮಗಿಂದು ಗೋರ್ಕಿಯವರಂತೆ ಬದ್ಧತೆ ಅಗತ್ಯ. ಹೋರಾಟ ಅಗತ್ಯ.

ಮುಗಿಯಿತು



ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಸಂಘಟಿತ ಕಾರ್ಮಿಕರಿಗಾಗಿ 'ಸಾಮಾಜಿಕ ಸುರಕ್ಷಾ ಕಾನೂನು' ಜಾರಿಗೊಳಿಸಬೇಕು ಎಂದು ಒತ್ತಾಯಿಸಿ, ರಾಜ್ಯದ ಐದು ಲಕ್ಷ ಹಮಾಲಿ ಕಾರ್ಮಿಕರಿಗಾಗಿ ಪ್ರತ್ಯೇಕ ಕಲ್ಯಾಣ ಮಂಡಳಿ ರಚನೆ ಹಾಗೂ ಕೂಲಿ ಹೆಚ್ಚಳಕ್ಕಾಗಿ, ಎಲ್ಲಾ ಹಮಾಲಿ ಕಾರ್ಮಿಕರಿಗೂ ಪಿಂಚಣಿ ಸೌಲಭ್ಯ, ಭವಿಷ್ಯ ನಿಧಿ, ಬೋನಸ್, ಕೂಲಿ ಹೆಚ್ಚಳ, ರಜಾ ಸೌಲಭ್ಯ, ಬಿಪಿಎಲ್ ಕಾರ್ಡ್, ನಿವೇಶನ ಮತ್ತು ವಸತಿ ಸೌಲಭ್ಯಕ್ಕಾಗಿ ರಾಜ್ಯ ಬಜೆಟ್‌ನಲ್ಲಿ ಹಣ ಮೀಸಲಿಡಲು ಒತ್ತಾಯಿಸಿ -

ಎಂಪಿಎಂಸಿ, ಗಿರಣಿ, ವೇರ್‌ಹೌಸ್, ಗೋಡೌನ್ ಹಾಗೂ ಬಜಾರ್ ಮತ್ತು ಗ್ರಾಮೀಣ ಪ್ರದೇಶದ ಸಾವಿರಾರು ಹಮಾಲರಿಂದ ಕರ್ನಾಟಕದ ರಾಜ್ಯ ಹಮಾಲಿ ಕಾರ್ಮಿಕ ಫೆಡರೇಷನ್ ನೇತೃತ್ವದಲ್ಲಿ ಫೆಬ್ರವರಿ 6, 2009 ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆ ಚಲೋ ನಡೆಸಲಾಯಿತು.

ಬಾಕಿ ವೇತನ ಬಿಡುಗಡೆ, ಕನಿಷ್ಟ ಕೂಲಿ ಹೆಚ್ಚಳ ಹಾಗೂ ಅದರ ಜಾರಿಗಾಗಿ ಒತ್ತಾಯಿಸಿ ಕರ್ನಾಟಕ ಗ್ರಾಮಪಂಚಾಯತ್ ನೌಕರರ ಸಂಘದ ನೇತೃತ್ವದಲ್ಲಿ ಫೆಬ್ರವರಿ 6 ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ ಪ್ರತಿಭಟನೆಯ ಚಿತ್ರ



ಸಂಪಾದಕೀಯ

'ನೆಮ್ಮದಿ' ಕೆಡಿಸಿರುವ ರೇಷನ್ ಪದ್ಧತಿ

ತಾವು ಅಧಿಕಾರಕ್ಕೆ ಬಂದರೆ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಪೂರೈಸುವುದಾಗಿ ಭಾರಿ ಭರವಸೆ ನೀಡಿದ್ದ ಬಿಜೆಪಿಯು ನೀಡಿದ ವಚನಕ್ಕೆ ಬದ್ಧತೆ ಇಲ್ಲ ಎಂಬುದನ್ನು ಮಾತು-ಕೃತಿಗಳ ಮೂಲಕ ತೋರಿಸುತ್ತಿದೆ. ಭರವಸೆ ಈಡೇರಿಸಲು ಹಣವಿಲ್ಲ ಎಂಬುದಾಗಿ 'ದಾನ ಶೂರ'ರಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಹೇಳುತ್ತಿರುವದು ದ್ರೋಹವಾಗಿದೆ.

ಹೆಚ್ಚುತ್ತಿರುವ ಬೆಲೆ ಏರಿಕೆ, ಆರ್ಥಿಕ ಕುಸಿತದ ಬಿಕ್ಕಟ್ಟಿನ ಪರಿಣಾಮವಾಗಿಯೂ ಕುಸಿಯುತ್ತಿರುವ ಆದಾಯ, ನಿರುದ್ಯೋಗದ ಹೆಚ್ಚಳ, ಹೀಗೆ ನಿತ್ಯದ ಬದುಕು ಸಾಗಿಸುವುದೇ ದುಸ್ತರವಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ಕನಿಷ್ಠ ಬದುಕುಳಿಯುವ ಅಗತ್ಯ ವಸ್ತುಗಳನ್ನು ಕಡಿಮೆ ದರದಲ್ಲಿ ಪೂರೈಸುವುದು ನಾಗರೀಕ ಸರ್ಕಾರದ ಒಂದು ಪ್ರಮುಖವಾದ ಕರ್ತವ್ಯ. ಆದರೆ ಈ ದಿಕ್ಕಿನಲ್ಲಿ ಸರ್ಕಾರದ ನೀತಿ ಅತ್ಯಂತ ಬೇಜವಾಬ್ದಾರಿತನದ್ದಾಗಿದೆ.

ಇಂತಹ ಸನ್ನಿವೇಶದಲ್ಲಿ ಅಗತ್ಯವಸ್ತುಗಳ ಪೂರೈಕೆಗೆ ಅಗತ್ಯಕ್ರಮವಹಿಸದೇ, ಇಡೀ ಪಡಿತರ ವ್ಯವಸ್ಥೆಯನ್ನೆ ಬುಡಮೇಲು ಮಾಡಲು ಸರ್ಕಾರಗಳು ಸತತವಾಗಿ ಪ್ರಯತ್ನಿಸುತ್ತಲೇ ಬಂದಿವೆ. ಸುಮಾರು 85 ಲಕ್ಷದಷ್ಟಿದ್ದ ಕಾರ್ಡುಗಳನ್ನು 20 ಲಕ್ಷಕ್ಕೆ ಇಳಿಸಲು ಯತ್ನಗಳು ನಡೆದಿದ್ದವು. ರೇಷನ್ ಹಾಗೂ ರೇಷನ್ ಕಾರ್ಡ್ ಕಡಿತದ ಹಲವಾರು ಕ್ರಮಗಳಲ್ಲಿ ಬಿಜೆಪಿ ಸರ್ಕಾರ ಪುನಃ ಹೊಸ ರೇಷನ್‌ಕಾರ್ಡ್ ನೀಡಿಕೆಗೆ ವಹಿಸಿಕೊಂಡಿರುವ ಕ್ರಮ, ವಿಧಾನಗಳು ...ಮವಾಗಿ ರೇಷನ್ ಮತ್ತು ಕಾರ್ಡ್‌ಗಳನ್ನೇ ಕಿತ್ತುಕೊಳ್ಳುವಂತಹವು.


ಮೊದಲನೆಯದಾಗಿ ಇಪ್ಪತ್ತು ರೂಪಾಯಿಗಳ ಛಾಪಾ ಕಾಗದದ ಮೇಲೆ ಅಫಿಡೇವಿಟ್‌ಗಾಗಿ, ಫೋಟೋ, ಇತ್ಯಾದಿಗಳಿಗೆಂದು ಒಂದು ಕುಟುಂಬವು 300 ರಿಂದ 500 ರವರೆಗೂ ಹಣ ಖರ್ಚು ಮಾಡಬೇಕಿದೆ. ಇಂತಹ ಅರ್ಜಿಗಳನ್ನು ಸಲ್ಲಿಸಲು ಭಾರಿ ಸಂಖ್ಯೆಯಲ್ಲಿ ಜನಸ್ತೋಮ ಸೇರಿ ಅವಾಂತರವಾಗಿದೆ, ಲಾಠಿ ಏಟು ಬಿದ್ದಿವೆ. ಸಾಲಿನಲ್ಲಿ ನಿಲ್ಲಲು ಹಗಲು-ರಾತ್ರಿಯನ್ನದೇ ಮಕ್ಕಳನ್ನು ಕಟ್ಟಿಕೊಂಡು ಮಹಿಳೆಯರು ಬೀಡು ಬಿಟ್ಟಿದ್ದು ಪ್ರತಿದಿನವೂ ವರದಿಯಾಗುತ್ತಿದೆ. 'ನೆಮ್ಮದಿ' ಕೇಂದ್ರಗಳೆಂಬುದು ಜನರ ನೆಮ್ಮದಿಯನ್ನೇ ನಾಶಮಾಡಿವೆ.

ಇನ್ನೊಂದು ಮಗ್ಗಲಲ್ಲಿ, ಈಗಿನ ಮಾನದಂಡಗಳು ಬಡಜನರ ಸಾಮಾನ್ಯ, ದುಡಿಯುವ ಜನತೆಗೆ ರೇಷನ್ ಹಾಗೂ ಕಾರ್ಡ್‌ಗಳನ್ನು ವಂಚಿಸುವುದೇ ಆಗಿದೆ. ವಾರ್ಷಿಕವಾಗಿ 12,000 ರೂ.ಗಳ ವಾರ್ಷಿಕ ಆದಾಯ ಇರುವವರು ಮಾತ್ರ ಅರ್ಹರು ಎಂಬುದೇ ಅತ್ಯಂತ ಅವೈಜ್ಞಾನಿಕ. ಅಂದರೆ ಪ್ರತಿಕುಟುಂಬ ಕೇವಲ 30 ರೂ. ಆದಾಯ ಪಡೆಯುವವರು ಮಾತ್ರ ಬಡತನ ರೇಖೆ ಕೆಳಗಿನ ಬಿಪಿಎಲ್ ಕಾರ್ಡ್ ಪಡೆಯಬಹುದು. ಇದು ಅತ್ಯಂತ ಅವೈಜ್ಞಾನಿಕ ಹಾಗೂ ವಂಚನೆದಾಯಕ. 12 ಸಾವಿರ ಮೀರಿದ್ದಲ್ಲಿ, ಜನರು ಕೊಟ್ಟ ಅಫಿಡೇವಿಡ್‌ನ್ನೇ ಬಳಸಿ ಕ್ರಿಮಿನಲ್ ಕೃತ್ಯವೆಂದು ಶಿಕ್ಷಿಸುವ ನಿರ್ಧಾರವೂ ಇದರೊಂದಿಗಿದೆ. ಅದಲ್ಲದೆ ಈ ಮಿತಿ ಇಂದಿನ ದಿನಗಳಲ್ಲಿ ಅತ್ಯಂತ ಅವೈಜ್ಞಾನಿಕ. ಆದ್ದರಿಂದ ಅದರ ಮಿತಿಯನ್ನೂ 50,000 ಕ್ಕಾದರೂ ಹೆಚ್ಚಿಸಿದಲ್ಲಿ ಅರ್ಹ ಕೆಲವು ಬಡವರಿಗಾದರೂ ಬಿಪಿಎಲ್ ಕಾರ್ಡ್ ಸಿಗಬಹುದು. ಇಲ್ಲವಾದರೆ ಕೋಟ್ಯಾಂತರ ಅರ್ಹ ದುಡಿಯುವ ವರ್ಗ ವಂಚಿಸಲ್ಪಡುತ್ತದೆ. ಆದ್ದರಿಂದ ಎಪಿಎಲ್-ಬಿಪಿಎಲ್ ಎಂಬುದೂ ಒಳಗೊಂಡು ಟಾರ್ಗೆಟೆಡ್ ರೇಷನ್ ನೀಡಿಕೆಯ ...ತಿಯನ್ನೇ ರದ್ದುಗೊಳಿಸಬೇಕು. ಅಗತ್ಯವಿರುವ ಎಲ್ಲರಿಗೂ ಸಿಗುವಂತೆ ಸಾರ್ವಜನಿಕ ಪಡಿತರ ಪದ್ಧತಿ ತರಬೇಕು. ಆದ್ದರಿಂದಲೇ ನೆಮ್ಮದಿ ಕೆಡಿಸುತ್ತಿರುವ ನೆಮ್ಮದಿ ಕೇಂದ್ರಗಳನ್ನು ಈ ಕೂಡಲೇ ರದ್ದುಪಡಿಸಬೇಕು. ರೇಷನ್ ಬಯಸುವ ಎಲ್ಲರಿಗೂ 14 ಅಗತ್ಯ ವಸ್ತುಗಳನ್ನು ವಿತರಿಸುವಂತಹ ಪದ್ಧತಿ ಜಾರಿಗೊಳಿಸಬೇಕು. ಕೇರಳದಲ್ಲಿನ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರದ ಈ ಪಡಿತರ ಪದ್ಧತಿಯು ಒಂದು ಮಾದರಿಯಾದ ವ್ಯವಸ್ಥೆಯಾಗಿದ್ದು ಅದರಂತೆ ಕ್ರಮವಹಿಸಬೇಕು.

ಆದರೆ ಜನರ ಓಟಿನ ಮೇಲಷ್ಟೇ 'ಪ್ರೀತಿ' ಇರುವ ಬಿಜೆಪಿಗೆ ಜನರ ಹಿತ ಕಾಯುವುದು ಬೇಕಿಲ್ಲ. ವಿಶ್ವಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸುತ್ತಿರುವ ಕೇಂದ್ರ-ರಾಜ್ಯ ಸರ್ಕಾರಗಳು ಆಹಾರ ಧಾನ್ಯಗಳಿಗೆ ನೀಡುತ್ತಿದ್ದ ಹಣ ಕಡಿತ ಮಾಡುತ್ತಿದೆ. ರೇಷನ್ ಕಾರ್ಡುಗಳನ್ನೇ ಕಡಿತಗೊಳಿಸುತ್ತಾ, ಕೊನೆಗೆ ಪದ್ಧತಿಯನ್ನೇ ರದ್ದುಗೊಳಿಸಿ, ಸಾಮಾನ್ಯ ಮುಕ್ತ ಮಾರುಕಟ್ಟೆಯಲ್ಲಿನ ದುಬಾರಿ ದರಗಳಿಗೆ ಖರೀದಿಸಲೇಬೇಕಾದ ಒತ್ತಡವನ್ನು ಸೃಷ್ಟಿಸುತ್ತಿದೆ. ಈಗಾಗಲೇ ಹಸಿವಿನ ಸಾವುಗಳು, ಆಹಾರದ ಕೊರತೆಯಿಂದ ಅಸಂಖ್ಯಾತರು ನರಳುತ್ತಿರುವ ಧಾರುಣ ದೃಶ್ಯವಿದ್ದರೂ ಖಾಸಗೀಕರಣ - ಜಾಗತೀಕರಣದ ಆರಾಧಕರಿಗೆ ಮನಕಲಕುತ್ತಿಲ್ಲ.

ಹಿಂದೂ-ಮುಸ್ಲಿಮರು ಕ್ರಿಶ್ಚಿಯನ್ನರ ನಡುವೆ ಕಲಹ ಹುಟ್ಟುಹಾಕುವುದು, ಜಾತಿ-ಮಠಾಧೀಶರ ಓಲೈಕೆ, ಅಧಿಕಾರದಾಹಿಗಳ ಸೆಳೆವ ಆಪರೇಷನ್ ಕಮಲ... ಅಕ್ರಮ ಹಣದ ಅಹಂಕಾರಗಳೇ ಸರ್ಕಾರ ಅಧಿಕಾರದಲ್ಲುಳಿಯಲು ಸಾಕೆಂದು ಭಾವಿಸಿರುವ ಬಿಜೆಪಿಗೆ ತೀವ್ರ ಪ್ರತಿಕ್ರಿಯೆ ...ಡುವುದು ಅಗತ್ಯವಾಗಿದೆ. ಬಡವರ ಬದುಕಿನ ವಿರೋಧಿಯಾಗಿರುವ ಸರ್ಕಾರದ ನೀತಿ ಬದಲಾಯಿಸಲು, ಪರ್ಯಾಯಕ್ಕೆ ಹೋರಾಟ ಪ್ರಬಲಗೊಳ್ಳುವುದು ಅಗತ್ಯವಿದೆ.

'ಪ್ರಗ್ಯಾಸಿಂಗ್' ಸಂತತಿ ಸೃಷ್ಟಿಯಾಗಬೇಕೆ?



ಭಯೋತ್ಪಾದನೆಯ ವಿರುದ್ಧದ ಸರ್ಕಾರದ ಪ್ರಚಾರಾಂದೋಲನವನ್ನು ತಡೆಯುವವರ ಮೇಲೆ ಉಗ್ರ ಕ್ರಮ ಜರುಗಿಸುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ. ಭಯೋತ್ಪಾದನೆಯ ವಿರುದ್ಧದ ಜನಜಾಗೃತಿಯನ್ನು ವಿರೋಧಿಸುವಿರೇಕೆ ಎಂದು ಮುಗ್ಧ ಪ್ರಶ್ನೆ ಕೇಳಿದ್ದಾರೆ. ಇದನ್ನು ವಿಧಾನಸಭೆಯಲ್ಲಿ ಪ್ರಶ್ನಿಸಬಹುದಲ್ಲ ಎಂಬುದು ಅವರ ಮತ್ತೊಂದು ಜಾಣ ಪ್ರಶ್ನೆ. ಹಿಂದೆ ವಿಧಾನಸಭೆಯಲ್ಲಿ ಪ್ರಶ್ನಿಸಿದವರಿಗೆಲ್ಲಾ ಎಂತಹ ಉಡಾಫೆ ಉತ್ತರಗಳನ್ನು ನೀಡಿ ಮೂಲ ಪ್ರಶ್ನೆಯನ್ನೇ ನಿರ್ಲಕ್ಷಿಸಿದ್ದನ್ನು ಕಂಡೂ ಆಗಿದೆ.

ಒಣ ಹೇಳಿಕೆಗಳು

ಒಂದೆಡೆ ಸರ್ಕಾರ ಭಯೋತ್ಪಾದನೆಯ ವಿರುದ್ಧ ಅಭಿಯಾನವೆಂದು ಕಾಲೇಜುಗಳಲ್ಲಿ ಸರ್ಕಾರದ ಹಣದಲ್ಲಿ ಸಂಘ ಪರಿವಾರ ಪ್ರಚಾರ ನಡೆಸುತ್ತಿದೆ. ಆದರೆ ಇದೇ ಸಂಘ ಪರಿವಾರ ರಾಜ್ಯದ ಬೀದಿಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ನಡೆಸುತ್ತಿದೆ. ಇದಕ್ಕೆ ಸರ್ಕಾರದ ಯಾವುದೇ ಕಡಿವಾಣವೂ ಇಲ್ಲವಾಗಿದೆ. ಕಾನೂನು ಮೀರಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂಬ ಗೃಹಸಚಿವರ ಹೇಳಿಕೆಗೆ ಅವರೇ ಮೂರು ಕಾಸಿನ ಕಿಮ್ಮತ್ತು ನೀಡುವುದಿಲ್ಲ. ತಾನೇನಿದ್ದರೂ ಉಲ್ಲಂಘಿಸಲು ಮಾತ್ರ ಎಂಬುದು ಪರಿವಾರದ ನಿತ್ಯದ ಘಟನೆಗಳೇ ಸಾಬೀತುಮಾಡುತ್ತಿವೆ.

ದುರುದ್ದೇಶ

ಇತ್ತೀಚೆಗೆ ಪುತ್ತೂರು ಕಾಲೇಜಿನಲ್ಲಿ ಒಂದಿಷ್ಟು ಹುಡುಗರ ಗುಂಪು ತಮ್ಮದೇ ಕಾಲೇಜಿನ ವಿದ್ಯಾರ್ಥಿಯೊಬ್ಬನನ್ನು ಸುತ್ತುಗಟ್ಟಿ ಬೇಕಾಬಿಟ್ಟಿ ಹೊಡೆದು ಗಾಯಗೊಳಿಸಿದ ವರದಿ ಇದೆ. ಹೊಡೆದವರು 'ಗರ್ವ್ ಸೇ ಕಹೋ ಹಮ್ ಹಿಂದೂ ಹೈ' ಎನ್ನುವ ಹುಡುಗರು. ಈ ಗುಂಪು 'ವಿಜಯ ಸಾಧಿಸಿದ ಮದದಲ್ಲಿ ತರಗತಿಗೆ ಬಂದಾಗ ಅವರ ಸಹಪಾಟಿಯೊಬ್ಬ ಕೇಳಿದ್ದಾನೆ. 'ಯಾಕೆ ಹೊಡೆದದ್ದು?'. "ಹೊಡೆಯೋದಕ್ಕೆ ಏನು ಬೇಕು. ಅವರು ಧರ್ಮಕ್ಕೆ (ಬಿಟ್ರೆ) ಸಿಕ್ಕ ಹೊಡೆದೆವು. ಈ ಮಕ್ಕಳಿಗೆ ಆಗೀಗ ಪೆಟ್ಟು ಕೊಡದಿದ್ದರೆ ಅವರು 'ಟೆರರಿಸ್ಟ್' ಆಗುತ್ತಾರೆ ಎಂಬುದು ಇನ್ನೊಬ್ಬನ ಉತ್ತರ! ಹೊಡೆತ ತಿಂದ ಅವರು ಮುಸ್ಲಿಂ ಎಂಬುದು ಕರಾವಳಿಯ 'ಕನ್ನಡ-ತುಳು' ಗೊತ್ತಿರುವವರಿಗೆ ಬಿಡಿಸಿ ಹೇಳಬೇಕಿಲ್ಲ.

ಇದು ಭಯೋತ್ಪಾದನೆಯ ವಿರುದ್ಧದ ಅಭಿಯಾನ ಗಟ್ಟಿಗೊಳ್ಳುತ್ತಿರುವ ವಿದ್ಯಾರ್ಥಿಗಳನ್ನು ದುಷ್ಪ್ರೇರೇಪಿಸುತ್ತಿರುವುದುರ ಒಂದುಸಣ್ಣ ಉದಾಹರಣೆ. ಧರ್ಮದ ಆಧಾರದಲ್ಲಿ ಭಯೋತ್ಪಾದನೆಯನ್ನು ವ್ಯಾಖ್ಯಾನಿಸಿ ಉದ್ರೇಕಿಸುತ್ತಿರುವುದು - ಬುದ್ಧ, ಬಸವರನ್ನು ಸೃಷ್ಟಿಸಲೋ ಅಥವಾ ಭಜರಂಗದ - ಶ್ರೀರಾಮಸೇನೆಯ ವಿಧ್ವಂಸಕ ಮಲೆಗಾಂವ್‌ನ ಭಯೋತ್ಪಾದಕರನ್ನೋ? ಇದಾದ ನಂತರವೂ ಹಿಂದೂ ಹುಡುಗಿಯು ಮುಸ್ಲಿಂ ಹುಡುಗನ ಜೊತೆ ಕಾಲೇಜಿನಲ್ಲಿ ಮಾತನಾಡುತ್ತಾ ನಿಂತಿರುವುದನ್ನೇ ನೆಪ ಮಾಡಿ ಸುಳ್ಯದಲ್ಲಿ ಎಬಿವಿಪಿ ಹುಡುಗರು ಹೊಡೆದ ಘಟನೆ, ದಾವಣಗೆರೆ ಕಾಲೇಜಿನಲ್ಲಿ ಮುಸ್ಲಿಂ ಹುಡುಗರನ್ನು ಅಭಿಯಾನದ ಕಾಲಕ್ಕೆ ಪ್ರತ್ಯೇಕಗೊಳಿಸಿ ಅವಮಾನಿಸುತ್ತಿರುವುದು, ಮುಸ್ಲಿಮನಾದರೆ ಬಟ್ಟೆ ಬಿಚ್ಚಿ ಪರೀಕ್ಷಿಸುವುದು ಅಭಿಯಾನ ಕಲಿಸುತ್ತಿರುವ ಸಂಸ್ಕೃತಿಗೆ ಸಾಕ್ಷಿಯಲ್ಲವೇ? ಇದು ಭಯೋತ್ಪಾದನೆ ವಿರುದ್ಧ ಎಲ್ಲರನ್ನೂ ಒಂದುಗೂಡಿಸಲೋ ಅಥವಾ ವಿಭಜಿಸಲೋ? ವಿಭಜನೆಯ, ದ್ವೇಷ ಪೂರಿತ ವಿಷದ ವಾತಾವರಣ ಸೃಷ್ಟಿಸಲೆಂದೇ ಈ ವಂಚಕ ಅಭಿಯಾನ ನಡೆಯುತ್ತಿದೆ. ಇಲ್ಲವಾದರೆ ಭಯೋತ್ಪಾದನೆ ವಿರೋಧಿಸುವ ಎಲ್ಲರನ್ನು ಈ ಅಭಿಯಾನ ಒಳಗೊಳ್ಳಬಹುದಿತ್ತು.

ಹಿಡನ್ ಅಜೆಂಡಾ

ಮೊನ್ನೆ ಖಾಸಗಿ ಟಿವಿ ವಾಹಿನಿಯೊಂದು ಸಂಘಟಿಸಿದ್ದ ಭಯೋತ್ಪಾದನೆ ಕುರಿತಾದ ಚರ್ಚೆ ಕಾಲಕ್ಕೆ ಬಿಜೆಪಿ - ಭಜರಂಗದಳದವರನ್ನು ಹುರಿದುಂಬಿಸಿ, ಬೆಂಬಲಿಸಲು ಒಂದಿಷ್ಟು ಎಬಿವಿಪಿ ವಿದ್ಯಾರ್ಥಿಗಳನ್ನು ಕರೆತರಲಾಗಿತ್ತು. ಸಂಘ ಪರಿವಾರದ ವಾಮನಾಚಾರ್‌ರವರು ಸಾಧ್ವಿ ಪ್ರಗ್ಯಾಸಿಂಗ್‌ಳ ಮಾಲೆಗಾಂವ್‌ನಲ್ಲಿನ ಭಯೋತ್ಪಾದನಾ ಪಾತ್ರ ಅತ್ಯಂತ ನಿರ್ಲಕ್ಷಿಸಬಹುದಾದುದೆಂದು, ಬೇಕೆಂದೇ ಅದನ್ನು ದೊಡ್ಡದು ಮಾಡಲಾಗುತ್ತಿದೆ ಎಂದೂ ವಾದಿಸುತ್ತಾ, ಅದು ಭಯೋತ್ಪಾದಕ ಕೃತ್ಯವೇ ಅಲ್ಲ. ದೇಶಪ್ರೇಮಿ ಕೆಲಸ ಎಂದು ಪ್ರತಿಪಾದಿಸುತ್ತಿದ್ದರು. ಆಗೆಲ್ಲಾ ಎಬಿವಿಪಿ ಗುಂಪು ಬೆಂಬಲಿಸುತ್ತಾ, ಪ್ರಗ್ಯಾಸಿಂಗ್‌ಳ ಕೃತ್ಯಗಳನ್ನೇ ಅಂಗೀಕರಿಸುತ್ತಿದ್ದರು. ಕಾರಣ ಆಕೆ ಎಬಿವಿಪಿಗೆ ಸೇರಿದ್ದವಳು. ಇಷ್ಟು ಮಟ್ಟದ 'ದೇಶಪ್ರೇಮಿ'ಯಾಗಿ ಬೆಳೆದಿದ್ದಳು! ಅವಳು ಸ್ಫೂರ್ತಿ ಎಂಬುದನ್ನು ತೋರಿಸಲು ಅದು ಒಂದು ತರಬೇತಿ ಎಂಬಂತಿತ್ತು. ಅಂದರೆ ಸಂಘ ಪರಿವಾರ ಇದನ್ನೇ ಬಳಸಿ ವಿದ್ಯಾರ್ಥಿಗಳ ನಡುವೆ ವ್ಯಾಪಕವಾಗಿ ವಿಕೃತಗೊಳಿಸಿದ ಸಂಗತಿಗಳನ್ನು ಪ್ರಚಾರಿಸಲು ಸಂಕಲ್ಪಿಸಿದ ಅಜೆಂಡಾದ ಭಾಗವೇ ಅದು. ಅಂದರೆ ಈ ಅಭಿಯಾನದಿಂದ ನೂರಾರು-ಸಾವಿರಾರು ಪ್ರಗ್ಯಾಸಿಂಗ್‌ಗಳು ಸೃಷ್ಟಿಯಾದರೆ ಆಶ್ಚರ್ಯಪಡಬೇಕಿಲ್ಲ!

ಪ್ರಶ್ನೆ ಇರುವುದು ಇಂತಹ ಭಯೋತ್ಪಾದಕ ಅಭಿಯಾನ ಮುಂದುವರಿಯಬೇಕೇ ಎಂಬಲ್ಲಿ. ಇದು ಸರ್ಕಾರದ ಒಂದು ಕಾರ್ಯಕ್ರಮವಾಗಿರುವಾಗ ಎಲ್ಲಾ ಪಕ್ಷಗಳನ್ನು, ವಿದ್ಯಾರ್ಥಿ, ಯುವಜನ ಸಂಘಟನೆಗಳನ್ನು, ಬುದ್ಧಿಜೀವಿಗಳನ್ನು ಒಳಗೊಳಿಸಬೇಕಾದದ್ದು ಒಂದು ಪ್ರಜಾಸತ್ತಾತ್ಮಕ ವಿಧಾನ, ಸರ್ಕಾರದ ಹೊಣೆಗಾರಿಕೆ. ಆದರೆ ಬಿಜೆಪಿ ಸರ್ಕಾರಕ್ಕೆ ಭಯೋತ್ಪಾದನೆಯ ವಿರುದ್ಧದ ಹೋರಾಟ ಬಲಗೊಳ್ಳುವ ಬದಲು ದುರ್ಬಲಗೊಳ್ಳುವುದೇ ಬೇಕಾದಂತಿದೆ.

ಪ್ರತಿಭಟನೆ - ಪ್ರತಿರೋಧ

ಇಂತಹ ಸರ್ಕಾರದ, ಸಂಘ ಪರಿವಾರದ ಬಚ್ಚಿಟ್ಟ ಅಜೆಂಡಾದ ವಿರುದ್ಧ ಪ್ರತಿಭಟನೆಯು ದಿನದಿನಕ್ಕೆ ಬೆಳೆಯುತ್ತಿರುವುದು ಸ್ವಾಗತಾರ್ಹ. ಇಂತಹದ್ದೊಂದು ಏಕಪಕ್ಷೀಯ ಹಿಡನ್ ಅಜೆಂಡಾ, ಸರ್ಕಾರದಿಂದ ಪ್ರಕಟವಾದ ಕೂಡಲೇ ಪ್ರತಿಕ್ರಿಯಿಸಿ ಪ್ರತಿಭಟಿಸಿದ್ದ ಎಸ್‌ಎಫ್‌ಐ ಸಂಘಟನೆ ನಂತರದಲ್ಲಿ ಡಿವೈಎಫ್‌ಐ ಜೊತೆಗೂಡಿ ಮತ್ತಷ್ಟು ವಿಶಾಲಗೊಳಿಸಲು ವಿದ್ಯಾರ್ಥಿ-ಯುವಕಾಂಗ್ರೆಸ್, ಯುವ ಜನತಾದಳದಂತಹ, ಎಐಎಸ್‌ಎಫ್, ಎಐವೈಎಫ್ ನಂತಹ ಸಂಘಟನೆಗಳು

ಪುಟ 11ಕ್ಕೆ

ಮಂಜೇಶ್ವರ ಶಾಸಕರ ಪುತ್ರಿ ಅಪಹರಣ ಪ್ರಕರಣ

ನಗಲು - ಉಸಿರಾಡಲೂ ಹಿಂದುತ್ವವಾದಿಗಳ ಪರ್ಮಿಷನ್ ಬೇಕು - ಎಚ್ಚರಿಕೆ ಇದು ಮಂಗಳೂರು

ಕರಾವಳಿ ಜಿಲ್ಲೆ ಮಂಗಳೂರಿನಲ್ಲಿ ಏನು ನಡಿಯುತ್ತಿದೆ? ಅಯ್ಯೋ!! 'ಭಾರತೀಯ ಸಂಸ್ಕೃತಿಯನ್ನು, ಹಿಂದೂ ಧರ್ಮವನ್ನು ರಕ್ಷಿಸುವ ಗುತ್ತಿಗೆ ತೆಗೆದುಕೊಂಡಿರುವ ಹಿಂದುತ್ವ ಪಡೆ ಬಡಿಗೆ ಹಿಡಿದು ನಿಂತುಬಿಟ್ಟಿದೆ. ಜನರು ನಗಲು, ಉಸಿರಾಡಲೂ, ಹಿಂದೂತ್ವವಾದಿಗಳ ಅನುಮತಿ ಪಡೆಯಬೇಕಾದಂತಹ ಪರಿಸ್ಥಿತಿ ಬರುತ್ತಿದೆ. ಅವರು ಯಾರನ್ನೂ ಬಿಡುವುದಿಲ್ಲ ಶಾಸಕರ ಮಗಳನ್ನೂ ಕೂಡ.

ಮಂಗಳೂರಿನ ನೆರೆಯ ಮಂಜೇಶ್ವರದ (ಕೇರಳ) ಸಿಪಿಐ(ಎಂ) ಶಾಸಕ ಸಿ.ಕೆ. ಕುಂಞಂಬು ಅವರ ಮಗಳು ಶೃತಿ ಮಂಗಳೂರಿನಲ್ಲಿ ದ್ವಿತಿಯ ಪಿ.ಯು.ಸಿಯಲ್ಲಿ ಓದುತ್ತಿದ್ದಾರೆ. ಫೆಬ್ರವರಿ 6ರಂದು ಅವರು ತಮ್ಮ ಮನೆಯಿಂದ ತಮ್ಮ ಹಾಸ್ಟೇಲ್‌ಗೆ ತೆರಳುವಾಗ ಕಾಸರಗೋಡಿನಲ್ಲಿ ಬಸ್ಸಿನಲ್ಲಿ ತಮ್ಮ ಸ್ನೇಹಿತೆಯ ಸಹೋದರ ಶಾಹಿಬ್ ಕಂಡಾಗ ಯಾರೇ ಪರಿಚಯಸ್ಥರು ಕಂಡಾಗ ನಗುವಂತೆ ನಕ್ಕು ವಿಷ್ ಮಾಡಿದ್ದಾರೆ. ಹಿಂದುತ್ವ ಗೂಂಡಾ ಪಡೆಗೆ ಅಷ್ಟೇ ಸಾಕಾಯಿತು. ಸುದ್ದಿ ಯಾರಿಂದಲೋ ಮಂಗಳೂರನ್ನು ಮುಟ್ಟಿತು. ಶೃತಿ ಎಂಬ ಹೆಸರಿನ ಹುಡುಗಿ- ಶಾಹಿಬ್ ಎಂಬ ಮುಸ್ಲಿಂ ಹುಡುಗನೊಂದಿಗೆ ಮಾತಾಡುವುದೆಂದರೇನು? ನಗುವುದೆಂದರೇನು!!

ಮಂಗಳೂರಿನಲ್ಲಿ ಬಲಾತ್ಕಾರದಿಂದ ಇಬ್ಬರನ್ನು ಬಸ್ಸಿನಿಂದ ಇಳಿಸಿದ ಗೂಂಡಾ ಪಡೆ ಅವರನ್ನು ಆಟೋರಿಕ್ಷಾ ಒಂದಕ್ಕೆ ಹತ್ತಿಸಿಕೊಂಡು ಹೋಗಿದ್ದಾರೆ. ಆಕೆ ಮಾಡಿದ 'ಅಪರಾಧ'ಕ್ಕಾಗಿ ಕ್ಷಮೆ ಕೇಳಬೇಕೆಂದು ಧಮಕಿ ಹಾಕಿದ್ದಾರೆ. ಇಂಥ ಘೋರ ತಪ್ಪನ್ನು ಇನ್ನೆಂದು ಮಾಡಬಾರದೆಂದು ತಾಕೀತು ಮಾಡಿ ನಿಂದಿಸಿದ್ದಾರೆ.


ವಿದ್ಯಾರ್ಥಿನಿಯನ್ನು ಅಷ್ಟಕ್ಕೆ ಬಿಟ್ಟ ಗೂಂಡಾಗಳು ಶಾಹಿಬ್‌ನನ್ನು ಚೆನ್ನಾಗಿ ಥಳಿಸಿದ್ದಾರೆ ಎಂಬ ವರದಿಗಳಿವೆ.

ಸಂಪ್ರದಾಯ, ಸಂಸ್ಕೃತಿ ಹೆಸರಿನಲ್ಲಿ ಶ್ರೀರಾಮ ಸೇನೆ, ಭಜರಂಗ ದಳಗಳು ಕರಾವಳಿಯಲ್ಲಿ ನಡೆಸುತ್ತಿರುವ ದುಷ್ಕೃತ್ಯಗಳಿಗೆ ಇನ್ನೊಂದು ಸೇರ್ಪಡೆಯಾಗಿದೆ.

ಆರೆಸ್ಸೆಸ್ ನಿಯಂತ್ರಣದ ರಾಜ್ಯ ಬಿಜೆಪಿ ಸರ್ಕಾರ ವ್ಯಕ್ತಿ ಸ್ವಾತಂತ್ರ್ಯ- ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ- ಹಾಗೂ ಮನುಷ್ಯತ್ವದ ಮೇಲೆ ನಡೆದ ಈ ಹೀನ ದಾಳಿಯ ಬಗೆಗೆ ಏನು ಕ್ರಮ ವಹಿಸಬಹುದು ಎಂಬುದನ್ನು ಯಾರಾದರೂ ಊಹಿಸಿಬಿಡಬಹುದು.

ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳು ಮಂಗಳೂರಿನಲ್ಲಿ ಫೆಬ್ರವರಿ 6ರಂದೇ ಘಟನೆ ನಡೆದಂದೇ ತೀವ್ರವಾಗಿ ಪ್ರತಿಭಟಿಸಿವೆ. ಫೆಬ್ರವರಿ7 ರಂದು ಬೆಂಗಳೂರಿನಲ್ಲಿ ಜೆಎಂಎಸ್, ಡಿವೈಎಫ್‌ಐ, ಎಸ್‌ಎಫ್‌ಐ ಸಂಘಟನೆಗಳು ತೀವ್ರವಾಗಿ ಪ್ರತಿಭಟನೆ ನಡೆಸಿವೆ. ಕೇರಳದಾದ್ಯಂತ ವ್ಯಾಪಕ ಪ್ರತಿಭಟನೆಗಳು ನಡೆದಿವೆ.

ದೌರ್ಜನ್ಯ ಪರಿಶೀಲನೆಗೆ ಬಂದ ಮಂಜೇಶ್ವರ ಶಾಸಕರು



ಲುಂಗಿ ಉಡಲು ಬರದಿದ್ದರೇನಂತೆ, ಲುಂಗಿಯ ಬಣ್ಣ ಕೇಸರಿಯಾದರಾಯಿ

ಚೆಡ್ಡಿ ಹಾಕಲು ಬರದಿದ್ದರೇನಂತೆ. ಚೆಡ್ಡಿಯ ಬಣ್ಣ ಖಾಕಿಯಾದರಾಯಿತು. ಈ ಬಿಜೆಪಿ ಸರ್ಕಾರದಲ್ಲಿ ಏನೂ ಆಗಬಹುದು! ಹಳೆಯದನ್ನೆಲ್ಲಾ ಕೊಡವಿಕೊಂಡು ಎದ್ದವರು ಕೆಲವರು, ಹಳೆಯದನ್ನು ಪೆಟ್ಟಿಗೆಯಲ್ಲಿ ಅಡಗಿಸಿಟ್ಟ ಹೊಸ ಬಣ್ಣದ್ದನ್ನು ಹೊಲಿಸಿಕೊಂಡವರು ಹಲವರು. ಇಲ್ಲಿ ಯಾವ ಹುದ್ದೆಗೂ ಯಾವ ಅರ್ಹತೆಯೂ ಬೇಕಾಗಿಲ್ಲ. ಸಂಘ ಪರಿವಾರದ ಸದಸ್ಯರಾದರೇ ಆಯಿತು.

ತಮಾಷೆಗಾಗಿ ಹೇಳಿದ್ದಲ್ಲ. ಮಂತ್ರಿಮಂಡಲ ವಿಸ್ತರಣೆಯಿಂದ ಪ್ರಾರಂಭಿಸಿ, ಅಧಿಕಾರಿಗಳ ವರ್ಗಾವರ್ಗಿವರೆಗೆ ಇದು ನಡೆದಿದೆ. ಇತ್ತೀಚಿಗೆ ಬಿಡುಗಡೆಯಾದ ವಿವಿಧ ಅಕಾಡೆಮಿಗಳ ಸದಸ್ಯರ ಪಟ್ಟಿಯಂತೂ ಇದಕ್ಕೆ ಜೀವಂತ ಉದಾಹರಣೆ (ಕಣ್ತಪ್ಪಿನಿಂದ ಕೆಲವರು ಯೋಗ್ಯರಿರಬಹುದೇನೋ)

ಈ ಯಾದಿಯಲ್ಲಿ ಉ.ಕ. ಜಿಲ್ಲೆಯ ಗಣೇಶ್ ಯಾಜಿ ನಾಟಕ ಅಕಾಡೆಮಿಯ ಸದಸ್ಯರಾಗಿದ್ದಾರೆ. ಹಾಗೆಂದರೆ ಯಾರೆಂದು ಇಡೀ ಉತ್ತರಕನ್ನಡವನ್ನು ಅರಸಿದರೂ ಸಿಗಲಿಲ್ಲ. ಪ್ರಯತ್ನ ಬಿಡಬಾರದೆಂದು. ಬೆಂಗಳೂರಿನಲ್ಲಿಯೂ ಅರಸಲಾಯಿತು. ಅಲ್ಲಿಯೂ ನಾಟಕ ರಂಗದಲ್ಲಿ ಅವರ ಹೆಸರು ಇಲ್ಲ ಎಂದು ತಿಳಿದುಬಂತು. ದಯವಿಟ್ಟು ಚುನಾವಣಾ ಆಯೋಗದವರು ಅವರ ಹೆಸರು ಯಾವ ಮತದಾರರ ಪಟ್ಟಿಯಲ್ಲಿದೆಯೆಂದು ತಿಳಿಸಿಕೊಡಲೆಂದು ಮನವಿ ಅರ್ಪಿಸಲು ಉತ್ತರಕನ್ನಡ ಜಿಲ್ಲೆಯವರು ಮುಂದಾಗಿದ

ಬಹುಶಃ ಎಲ್ಲಾದರೂ ಬಿಜೆಪಿ, ಚುನಾ ಪ್ರಚಾರದಲ್ಲಿಯೋ ಅಥವಾ ಭಜರಂಗದಳ ಶ್ರೀರಾಮಸೇನೆಯಲ್ಲೋ ತೊಡಗಿಸಿಕೊಂಡಿರಬಹುದು.

ಇದಕ್ಕಿಂತ ವಿಚಿತ್ರ ಸಂಗತಿಯೆಂದರೆ ತು ಅಕಾಡೆಮಿಯ ಸದಸ್ಯರಾಗಿ ನೇಮಕವಾಗಿದ ಡಾ. ಶಂಕರ ಖಂಡೇರಿ ಇಹಲೋಕ ತ್ಯಜಿ ಆರೇಳು ತಿಂಗಳೇ ಆಗಿದೆ ಎಂದು ತಿಳಿದುಬಂದಿದೆ. ಇದ್ದವರು ಮತ್ತು ಇಲ್ಲದ ನಡುವೆ ಯಾವ ವ್ಯತ್ಯಾಸವನ್ನು ಮಾಡದ ಸರ್ಕಾರಕ್ಕೆ ಜೀವಂತಿಕೆಯಿದೆಯೆಂದು ಹೇ ನಂಬುವುದು?

ಯೋಗ್ಯತೆ ಇಲ್ಲದವರು ಸದಸ್ಯರಾಗಿದ್ದಾರೆಂದು ಸಾಂಸ್ಕೃತಿಕ ಲೋಕ ಪರಿತಪಿಸುತ್ತಿದ್ದರೆ ಬಿಜೆಪಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತೀರಿಕೊಂಡವರನ್ನೇ ಸದಸ್ಯರನ್ನಾಗಿಸಿರುವುದ ಬಿಜೆಪಿಯ ನಿಜಬಣ್ಣವನ್ನು ಬಯಲು ಮಾಡಿ

ಇವೆರಡು ಉದಾಹರಣೆಗಳು ಮಾತ್ರ. ಯಾದಿಯಲ್ಲಿ ಇದ್ದವರ ಹೆಸರು ಯಾರದೆಂದ ಆಯಾ ಜಿಲ್ಲೆಯವರೇ ಹುಡುಕಲು ಪ್ರಯತ್ನಿಸುತ್ತಿದ್ದಾರೆ

ಗೋವಿಂದಾ.... ಗೋ...ವಿಂದ !

ಕ್ಯಾತೆ

ಶ್ರೀ

'ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಬಿಜೆಪಿ ಗೆ ರಾಜಕೀಯ ಇಚ್ಛಾ ಶಕ್ತಿ ಇದೆ' ಎಂದು ಬಿಜೆಪಿ ಗೆ ಸೇರಿರುವ ನಿವೃತ್ತ ನ್ಯಾಯ ಮೂರ್ತಿ, ನಿವೃತ್ತ ಲೋಕಾಯುಕ್ತ ಸನ್ಮಾನ್ಯ ಶ್ರೀ ವೆಂಕಟಾಚಲ ಹೇಳಿದ್ದಾರಂತೆ. ಚುನಾವಣೆಯಲ್ಲಿ ಭ್ರಷ್ಟಾಚಾರದ ಸುನಾಮಿಯನ್ನೆ ಎಬ್ಬಿಸಿರುವ, ಚುನಾವಣೆ ನಂತರ ಶಾಸಕರನ್ನೆ ಖರೀದಿ ಮಾಡುತ್ತಿರುವ, ಮುಖ್ಯ ಮಂತ್ರಿಗಳೂ, ಮುಖ್ಯ ವಲ್ಲದ ಮಂತ್ರಿಗಳೂ, ಶಾಸಕರೂ, ಊರೂರನ್ನೇ ಕೊಳ್ಳುತ್ತಾ ಅಭಿವೃದ್ಧಿ ಯಾಗುತ್ತಿರವದೂ, ಗಣಿ ಕಾರಣಿಗಳ ಆಳ ಅಗಲ ಇವುಗಳೆಲ್ಲದರ ಬಗ್ಗೆ ಸನ್ಮಾನ್ಯ ಶ್ರೀ ವೆಂಕಟಾಚಲ ಅವರ ಕಣ್ಣು, ಕಿವಿ, ಬುದ್ಧಿ, ಮನಸ್ಸುಗಳೆಲ್ಲವೂ ನಿವೃತ್ತವಾಗಿವೆಯೇ ಎಂಬ ಸಂಶಯ! ವೆಂಕಟಾಚಲ ಗೋವಿಂದಾ..., ಗೋ....ವಿಂದ.

●●●

ಮಾತೆತ್ತಿದರೆ ಆ ಮಾದರಿ ಈ ಮಾದರಿ ಎಂದು ಹೇಳುವ ಸಮ್ಮಿಶ್ರ (ಎಡಬಿಡಂಗಿ) ಸರಕಾರ ಎಲ್ಲದರಲ್ಲೂ ಹೊಸ ಮಾ(ದ)ರಿಯನ್ನೇ ಹುಟ್ಟು ಹಾಕುತ್ತಿದೆ. ಉಡುಪಿ ಮಾದರಿ ಪರಿಹಾರ ಅಂತ ಮೂಗಿಗೆ, ಮೊಳಕೈಗೆ ತುಪ್ಪ ಹಚ್ಚಿ, ಶಿವಮೊಗ್ಗದಲ್ಲಿ ಕಟ್ಟಡಗಳನ್ನೆಲ್ಲ ಕೆಡವಿ ಹಾಕಲಾಯಿತು. ಈಗ ಕಟ್ಟಡದ ಮಾಲೀಕರು, ಬೀದಿಪಾಲಾದ ಬಾಡಿಗೆ ದಾರರೂ, ಪುಡಿಗಾಸಿನ ಪರಹಾರವೂ ಇಲ್ಲದೇ ಪರದಾಡುತ್ತಿದ್ದಾರೆ. ಪರಿಹಾರವಿರಲಿ, ಹಗ್ಗ ಕೊಟ್ಟು ಕೈ ಕಟ್ಟಿಸಿ ಕೊಂಡಹಾಗೆ ಅನ್ನುತ್ತಾರಲ್ಲಾ ಹಾಗೆ, ಬೇಡಿಗೆ ಕೈ ಕೊಡುವಂಥ ಬಾಂಡ್ ಬರೆದು ಕೊಡಿ ಅಂತಿದ್ದಾರಂತೆ ಆಡಳಿತಗಾರರು. ಬೀದಿಗೆ ಬಿದ್ದು ಹೋರಾಡುತ್ತಿರುವವರು ಬಾಂಡ್ ಬರೆದು ಕೊಟ್ಟು ಜೈಲಿಗೆ ಹೋದರೆ ಕಂಬಿ ಎಣಿಸುವುದೇ ಖಾಯಂ ಪರಿಹಾರವಾದೀತು. ಇದು ಬಿ ಜೆ ಪಿ ಅಭಿವೃದ್ಧಿಯ ಮಾ(ದ)ರಿ! ಶಿವಮೊಗ್ಗದ ಮಾದರೀ ಪಂಗನಾಮ! ಗೋವಿಂದಾ..., ಗೋ....ವಿಂದ.

●●●

ಬೆಳಗಾವಿಯಲ್ಲಿ ಕರ್ನಾಟಕದ ಗಡಿಬಗ್ಗೆ, ಚಿತ್ರದುರ್ಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡದ ಬಗ್ಗೆ, ವಾಟಾಳರನ್ನೂ ಮೀರಿಸುವಂತೆ ವೀರಾವೇಶದ ಭಾಷಣ ಕುಟ್ಟಿದ ಸನ್ಮಾನ್ಯ ಯಡಿಯೂರರು ಮುಂತಾದ ರಾಜಕಾರಣಿಗಳಿಗೆ, ಮಂಜಾದೀಶರಂಗಳಿಗೆ ಸಮ್ಮೇಳನಾಧ್ಯಕ್ಷ ಶ್ರೀ ಎಲ್. ಬಸವರಾಜರು ಸರಿಯಾದ ಒನಕೆ ಏಟನ್ನೇ ನೀಡಿದ್ದಾರೆ. ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ಅದೆಲ್ಲ ಕಾಂಗ್ರೆಸ್ಸಿಗೆ ಹೇಳಿದ್ದು ಅಂತ 'ವರೆಸಿ'ಕೊಂಡಿದ್ದಾರೆ.

●●●

ಯಡಿಯೂರಪ್ಪನವರ ಆಡಳಿತದಲ್ಲೇ ಇಷ್ಟು ಚೆನ್ನಾಗಿ 'ರಾಮ ರಾಜ್ಯ ' (?) ಜಾರಿಗೆ ಬರುತ್ತಿದೆ ಇನ್ನು ಆ ಮುತಾಲಿಕನೆಂಬ ಸಾಕ್ಷಾತ್ ಶ್ರೀ ರಾಮನೇ ಮುಖ್ಯ ಮಂತ್ರಿಯಾದರೆ?

1. ಸೀತೆ ಯರನ್ನೆಲ್ಲ ಕಾಡಿಗೆ ಅಟ್ಟ ಬಹುದು. ಈಗ ಕಾಡುಗಳಿಲ್ಲವಾದ್ದರಿಂದ ಡೈರೆಕ್ಟಾಗಿ 'ಅ ಪರೀಕ್ಷೆ'ಯನ್ನೇ ಮಾಡಬಹುದು.

2. ಸತಿ ಪದ್ಧತಿ ಪುನಃ ಜಾರಿಗೆ .

3. ಹಿಂದೆ ಕುಟುಂಬ ಕಲ್ಯಾಣ ಆಪರೇಷನ್ ಮಾಡಿಸಿಕೊಂಡವರಿಗೆ ಪ್ರೋತ್ಸಾಹ ಕೊಡುತ್ತಿದ್ದ ಹಾಗೇ ಈಗ ಹೆಣ್ಣು ಭ್ರೂಣ ಹ ಮಾಡಿಸಿದವರಿಗೆ ಪ್ರೋತ್ಸಾಹ ಧನ!

(ಇಷ್ಟೇ ತಾನೇ ಅನ್ನಬೇಡಿ ಇನ್ನೂ ಇದೆ!)

●●●

ಫೆಬ್ರವರಿ 14, ವ್ಯಾಲೆಂಟೈನ್ಸ್ ಡೇ ದಿ ಅವಿವಾಹಿತ ಗಂಡು ಹೆಣ್ಣುಗಳು ಜೋಡಿಯಾ ಓಡಾಡಿದ್ದು ಕಂಡರೆ ಅವರನ್ನು ಹಿಡಿದು ಹತ್ತಿರ ದೇವಸ್ಥಾನದಲ್ಲಿ ಮದುವೆ ಮಾಡಿಸುತ್ತಾರಂ ಮುತಾಲಿಕರು. ಒಪ್ಪದಿದ್ದಲ್ಲಿ ರಾ ಕಟ್ಟಿಸುತ್ತಾರಂತೆ. ಭಲೇ! ಭಲೇ! ಸದಾ ಜೋಡಿ ಹಕ್ಕಿಗಳ ಹಾಗೆ, ಜೊತೆ ಜೊತೆಯಲಿ ಇರುವ ಸನ್ಮಾನ್ಯ ಮು.ಮಂತ್ರಿಗಳೂ, ಗ್ರಾಮೀಣಾಭಿವೃದ್ಧಿ ಮಂತ್ರಿಣಿಯವರೂ ಯಾವುದಕ್ಕೂ ಫೆಬ್ರವರಿ 1 ರಂದು ಶ್ರೀರಾಮ ಸೇನೆಯವರ ಕೈಗೆ ಸಿಗದ ಹಾ ಹುಷಾರಾಗಿರುವುದು ಒಳಿತು!

ಬಿಜೆಪಿಯ ಕೋಮುವಾದಿ, ಕಾಂಗ್ರೆಸ್‌ನ ಜನವಿರೋಧಿ ನೀತಿಗಳ ವಿರುದ್ಧ

ರಾಜಕೀಯ ಆಂದೋಲನ

ಜೆಡಿ[ಎಸ್]-ಎಡಪಕ್ಷಗಳ ಅಭಿಮತ

ಡಿ(ಎಸ್), ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳ ಖಂಡರು ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಮತ್ತು ಯುಪಿಎ ಆಡಳಿತದಲ್ಲಿ ತೀವ್ರಗೊಂಡಿರುವ ರ್ನಾಟಕದ ಜನತೆಯ ಸಮಸ್ಯೆಗಳ ಬಗ್ಗೆ ಕಳೆದ ಎರಡು ನಗಳಲ್ಲಿ ಚರ್ಚಿಸಿ ಈ ಕೆಳಗಿನ ಸಮಸ್ಯೆಗಳ ಬಗ್ಗೆ ಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ತಿಗಳನ್ನು ಹಿಂಪಡೆಯುವಂತಹ ಹೋರಾಟಗಳನ್ನು ಪಿಸಲು ತೀರ್ಮಾನಿಸಿವೆ.

1. ರಾಜ್ಯದಲ್ಲಿ ಕೋಮುದ್ವೇಷವನ್ನು ರಡುವ, ಸಂಘಪರಿವಾರದ ಕೃತ್ಯಗಳ ಮತ್ತು ಡಳಿತಯಂತ್ರವನ್ನು ಸಂಘಪರಿವಾರದ ವಶಕ್ಕೆ ಡುವ ಪ್ರಯತ್ನಗಳನ್ನು ಎದುರಿಸುವುದು ಆದ್ಯತೆ ಂದು ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಸಿದರು.

ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಮುಂದುವರೆದ ಧಾಳಿ :

ಊರಿನ ಜೆಸಿನಗರ, ತಿಪಟೂರು, ಹಾವೇರಿ ೊದಲಾದ ಕಡೆಗಳಲ್ಲಿ ಕೋಮುಗಲಭೆಗಳನ್ನು ಂಘಟಿಸಿದ ಹಾಗೂ ರಾಜ್ಯದಾದ್ಯಂತ, ವಿಶೇಷವಾಗಿ ರಾವಳಿ ಪ್ರದೇಶದಲ್ಲಿ ಭಜರಂಗದಳ, ಹಿಂದೂಸೇನೆ, ್ರೀರಾಮಸೇನೆ ಮೊದಲಾದ ಸಂಘಪರಿವಾರದ ಂಘಟನೆಗಳು ನಿರಂತರವಾಗಿ ದನಗಳ ಸಾಗಾಟ, ನೇಕ ನೆಪಗಳ ಮೇಲೆ ಮುಸ್ಲಿಂ ಅಲ್ಪಸಂಖ್ಯಾತರ ೀಲೆ, ಧಾಳಿ ಮಾಡುತ್ತಿರುವ ಸಂಘಪರಿವಾರದ ಂಘಟನೆಗಳು ಮತ್ತು ಕಾರ್ಯಕರ್ತರ ಮೇಲೆ ಯಿದೆ ಬಾಹಿರ ಚಟುವಟಿಕೆಗಳ ತಡೆ ಕಾಯಿದೆ ್ರಕಾರ ಕ್ರಮಕೈಗೊಳ್ಳಬೇಕು. ಬಾಬಾ ಬುಡನ್‌ಗಿರಿಯ ೀಲೆ ಪೂಜೆ, ಹೋಮ ಹವನಗಳಿಗೆ ಅವಕಾಶ ೀಡಿ ಅದರ ಸೂಫಿ ಸ್ವರೂಪವನ್ನು ಮಾರ್ಪಡಿಸಲು ುತ್ನಿಸುತ್ತಿರುವುದನ್ನು ಇತರ ಅನೇಕ ದರ್ಗಾ, ಖಬರ್ ್ಥಾನಗಳ ಹೆಸರಿನಲ್ಲಿ ವಿವಾದವೆಬ್ಬಿಸುತ್ತಿರುವುದನ್ನು ಬಿಡಬೇಕು. 30ಕ್ಕೂ ಹೆಚ್ಚು ಕ್ರಿಶ್ಚಿಯನ್ ಚರ್ಚುಗಳ ೀಲೆ ಧಾಳಿ ಮಾಡಿದ ಸಂಘಪರಿವಾರದ ಾರ್ಯಕರ್ತರ ಮೇಲೆ ಕಠಿಣ ಕಾನೂನು ಕ್ರಮ. ಕ್ರಿಶ್ಚಿಯನ್ ಪಾದ್ರಿ ಮತ್ತು ಸಾಮಾನ್ಯ ಕ್ರಿಶ್ಚಿಯನ್‌ರ ೀಲೆ ಹಾಕಿದ ಕೇಸುಗಳನ್ನು ವಾಪಾಸ್ ಡೆಯುವುದು. ಅಲ್ಪಸಂಖ್ಯಾತರ ಹಕ್ಕುಗಳನ್ನು ಕ್ಷಿಸಬೇಕು ಎಂದು ಆಗ್ರಹಿಸಿದರು. ಅಲ್ಲಿ ನೀಡಿದ ೇಳಿಕೆಯ ಅಂಶಗಳು ಮುಂದಿನಂತಿವೆ.

ಮಾಂಸಾಹಾರದ ಹಕ್ಕು :

ಗೋಸಾಗಾಟ, ಗೋಹತ್ಯೆಯ ಹೆಸರಿನಲ್ಲಿ ಲ್ಪಸಂಖ್ಯಾತರ, ದಲಿತರ ಮಾಂಸಾಹಾರದ ಹಕ್ಕನ್ನು ಸಿದುಕೊಳ್ಳುತ್ತಿರುವುದನ್ನು ಕೈಬಿಡಬೇಕು. 1964 ರ ೋಹತ್ಯೆ ಸಂಬಂಧಿಸಿದ ಕಾಯಿದೆಯನ್ನು ಂಪಡೆಯಬೇಕು. ಬೆಂಗಳೂರು ಸೇರಿದಂತೆ ಅನೇಕ ಸಾಯಿಖಾನೆಗಳನ್ನು ಮುಚ್ಚಿಸಿ ಮಾಂಸಾಹಾರಿಗಳಲ್ಲದವರ ಆಹಾರದ ಹಕ್ಕಿನ ಮೇಲೆ ಳಿ ನಡೆಸುತ್ತಿರುವುದನ್ನು ಆಹಾರದ ಬ್ರಾಹ್ಮಣೀಕರಣ ಮಾಡುತ್ತಿರುವುದನ್ನು ಕೈಬಿಡಬೇಕು. ವೈಜ್ಞಾನಿಕ ಸಾಯಿಖಾನೆಗಳನ್ನು ತುರ್ತಾಗಿ ಆರಂಭಿಸಬೇಕು.

ಈ ಬಗ್ಗೆ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಾಕಿದ ಕೇಸುಗಳನ್ನು ಹಿಂದಕ್ಕೆ ಪಡೆಯುವುದು.

ದ ಕೇಸರೀಕರಣ

ಭಯೋತ್ಪಾದನೆಯ ವಿರುದ್ಧ ಅಭಿಯಾನದ ೆಸರಿನಲ್ಲಿ ಭಯೋತ್ಪಾದಕರನ್ನೂ ತಯಾರಿಸಿದ ಂಘಟನೆಗಳೆಂದು ಈಗಾಗಲೇ ಹೆಸರಾಗಿರುವ

ದೇಶದಲ್ಲಿ ಬಿಜೆಪಿ-ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೇ ರಂಗ ರಚನೆಯ ಯತ್ನಗಳು ಸಾಗಿವೆ. ಆ ಪ್ರಕ್ರಿಯೆ ಭಾಗವಾಗಿ ರಾಜ್ಯದಲ್ಲಿಯೂ ಜನರ ಪ್ರಶ್ನೆಗಳ ಆಧಾರದಲ್ಲಿ ಆಂದೋಲನ ರೂಪಿಸುವ ಯತ್ನಗಳೂ ಆರಂಭಗೊಂಡಿವೆ.

ಎಬಿವಿಪಿ, ಹಿಂದೂಸೇನೆಗಳ, ಆರೆಸ್ಸೆಸ್ ಕಾರ್ಯಕರ್ತರನ್ನು ಮಾತ್ರ ಒಳಗೊಂಡಿದ್ದು, ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ಎಲ್ಲಾ ಪಕ್ಷಗಳನ್ನು ಒಳಗೊಳ್ಳಲು ನಿರಾಕರಿಸಿರುವುದರಿಂದ ಈ ಅಭಿಯಾನವನ್ನು ಕೈಬಿಡಬೇಕು. ಈ ಸಮಿತಿಗಳನ್ನು ವಿಸರ್ಜಿಸಬೇಕು.

ವಿವಿಧ ಉಪಕುಲಪತಿಗಳು ಮತ್ತಿತರ ನೇಮಕಾತಿಗಳಲ್ಲಿ ಸಮಿತಿಗಳ ನೇಮಕಾತಿಯಲ್ಲಿ ಸಂಘಪರಿವಾರದವರ ಅಥವಾ ಅವರ ಆಜ್ಞಾನುವರ್ತಿಗಳನ್ನು ನೇಮಿಸಿಕೊಳ್ಳುವುದನ್ನು ಕೈಬಿಡಬೇಕು.

ವಿವಿಸಂಶೋಧನೆಗಳ ಗುಣಮಟ್ಟದ ಹೆಸರಿನಲ್ಲಿ ಸಂಘಪರಿವಾರದ ಅಜೆಂಡಾಕ್ಕೆ ಅದನ್ನು ಒಳಪಡಿಸುವುದನ್ನು ಕೈಬಿಡಬೇಕು.

ಆಡಳಿತದ ಕೋಮುವಾದೀಕರಣ

ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆ, ಕೃಷಿ ಇಲಾಖೆ ಮತ್ತಿತರ ಇಲಾಖೆಗಳಲ್ಲಿ ಮಾಡುತ್ತಿರುವ ಕೇಸರೀಕರಣವನ್ನು ಕೈಬಿಡಬೇಕು.

ಸಾವಯವ ಕೃಷಿಯ ಹೆಸರಿನಲ್ಲಿ ಆರೆಸ್ಸೆಸ್‌ನವರನ್ನು ತುಂಬಿಸಿದ ಟ್ರಸ್ಟ್ ಹಾಗೂ ಸಮಿತಿಗಳನ್ನು ರಚಿಸುವುದು, ಕೃಷಿ ವಿಸ್ತರಣೆಯ ಕೆಲಸವನ್ನು ಸರ್ಕಾರೇತರ ಸಂಸ್ಥೆಗಳ ಕೈಗೆ ಒಪ್ಪಿಸುವುದು ಇತ್ಯಾದಿಗಳನ್ನು ಕೈಬಿಡಬೇಕು.

ಪ್ರಮೋದ ಮುತಾಲಿಕ್ ಮತ್ತು ಶ್ರೀರಾಮಸೇನೆ ಸಿಬಿಐ ತನಿಖೆ :

ಪ್ರಮೋದ ಮುತಾಲಿಕ್ ನೇತೃತ್ವದ ಹಿಂದೂಸೇನೆ, ಶ್ರೀರಾಮಸೇನೆಗಳು ಚುನಾವಣೆಯ ಸಮಯದ ಹುಬ್ಬಳಿ ನ್ಯಾಯಾಲಯದಲ್ಲಿನ ಬಾಂಬ್‌ಸ್ಫೋಟ, ಇತರ ಬಾಂಬ್‌ಸ್ಫೋಟ ಪ್ರಕರಣಗಳು, ಬೆಂಗಳೂರಿನ ಜೆಸಿ ನಗರದ ಹಂದಿಮಾಂಸವನ್ನು ಮಸೀದಿಯೊಳಗೆ ಎಸೆದ ಪ್ರಕರಣದಲ್ಲಿ ಸಿಮಿಯ ಹೆಸರಿನಲ್ಲಿ ಕೋಮುಗಲಭೆಗಳನ್ನು ಹುಟ್ಟಿಸಲು ಮಾಡಿದ ಪ್ರಕರಣಗಳು, ಮಾಲೆಗಾಂವ್ ಸ್ಫೋಟದ ಹಿಂದೂತ್ವ ಭಯೋತ್ಪಾದಕರಿಗೆ ನೆರವು, ಬೆಂಬಲ ಮತ್ತು

ಸಂಪರ್ಕ, ಮಂಗಳೂರಿನ ಪಬ್ ಮೇಲಿನ ಧಾಳಿ ಇತ್ಯಾದಿ ಅಲ್ಲದೇ ಅನೇಕ ಹಣಕೀಳುವ, ಗೂಂಡಾಗಿರಿಯ, ಅಪಹರಣದ ಕೃತ್ಯಗಳಿಗಿರುವ ಸಂಬಂಧ ಇವುಗಳ ಬಗ್ಗೆ ತಕ್ಷಣವೇ ಕಾಯಿದೆಬಾಹಿರ ಚಟುವಟಿಕೆಯ ಕಾಯಿದೆಯನ್ವಯ ಬಂಧನ ಮತ್ತು ತನಿಖೆಯನ್ನು ಸಿಬಿಐಗೆ ವಹಿಸಿರುವುದು.

ಗೋಕರ್ಣ ದೇವಸ್ಥಾನವನ್ನು ರಾಮಚಂದ್ರಾಪುರ ಮಠಕ್ಕೆ ಒಪ್ಪಿಸಿರುವುದನ್ನು ಹಿಂಪಡೆಯುವುದು ದೇವಸ್ಥಾನಗಳ ನ್ನು ಸಂಘಪರಿವಾರ ಪ್ರಣೀತ ಸಂಸ್ಥೆ, ವ್ಯಕ್ತಿಗಳಿಗೆ ವಹಿಸುವುದನ್ನು ಕೈಬಿಡುವುದು.

2. ಪ್ರಜಾಪ್ರಭುತ್ವ ನಾಶದ ಕ್ರಮಗಳ ವಿರೋಧ

- ಶಾಸಕರನ್ನು, ಪುರಸಭಾ ಪ್ರತಿನಿಧಿ ಇತ್ಯಾದಿಗಳನ್ನು ಕೊಳ್ಳುವುದು, ಚುನಾವಣೆಗಳಲ್ಲಿ ಮೀತಿಮೀರಿದ ಭ್ರಷ್ಟತೆಗಳನ್ನು ವಿರೋಧಿಸುವುದು.
- ಅನಂತಮೂರ್ತಿಯವರನ್ನು ನಿಂದಿಸಿದ ಕರ್ನಾಟಕದ ಗಡಿಯನ್ನು ಆಕ್ರಮಿಸಿರುವ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕರಾದ ಓಬಳಾಪುರಂ ಮೈನ್ಸ್ ಮಾಲಿಕರಾದ ಜನಾರ್ಧನರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲು, ಇವರನ್ನು ಸಚಿವ ಸಂಪುಟದಿಂದ ಕೈಬಿಡುವುದು.
- ಕೋಟಿಗಟ್ಟಲೆ ಹಣದ ವಂಚನೆಯ ಪ್ರಕರಣಗಳನ್ನು ಎದುರಿಸುತ್ತಿರುವ ಕಳಂಕಿತ ಸಚಿವರಾದ ಕೃಷ್ಣಯ್ಯಶೆಟ್ಟಿ, ಸುದಾಕರ್ ಇವರನ್ನು ಸಚಿವ ಸಂಪುಟದಿಂದ ಕೈಬಿಡುವುದು.
- 'ಕರಾವಳಿ ಅಲೆ'ಯ ಪತ್ರಿಕಾ ಸಮೂಹಗಳ ಸಂಪಾದಕ, ಪ್ರಕಾಶಕರ ಮೇಲೆ ಕ್ರಿಮಿನಲ್ ಸುಳ್ಳು ಮೊಕದ್ದಮೆ ಹೂಡಿ ಕ್ರಿಮಿನಲ್‌ಗಳಂತೆ ನಡೆಸಿಕೊಳ್ಳುತ್ತಿರುವುದು, ಪತ್ರಿಕೆ ಮಾರಾಟಗಾರರ ಮೇಲೆ ಗೂಂಡಾಗಿರಿ ನಡೆಸಿದವರ ಮೇಲೆ ಕ್ರಮ ಕೈಗೊಳ್ಳದಿರುವುದು ಪತ್ರಿಕೆಯ ಮಾರಾಟಕ್ಕೆ ಬೆದರಿಕೆ - ಅಡ್ಡಿ ಆತಂಕ ಒಡ್ಡಿರುವುದನ್ನು ತಕ್ಷಣವೆ ಕೈಬಿಡುವುದು. ಸರ್ಕಾರ ಎಲ್ಲಾ ರೀತಿಯ ರಕ್ಷಣೆ ನೀಡುವುದು.
- ಬಜರಂಗದಳ, ಶ್ರೀರಾಮಸೇನೆಯಂತಹವರ ಮೇಲಿದ್ದ ಕ್ರಿಮಿನಲ್ ಕೇಸ್ ಹಿಂತೆಗೆದುಕೊಂಡ ಸರ್ಕಾರದ ಕ್ರಮ ವಿರೋಧಿಸುವಂತಹದ್ದು ಇದೇ ಸಂದರ್ಭದಲ್ಲಿ ಹಾವೇರಿ, ಧಾರವಾಡ ಮೊದಲಾದೆಡೆಗಳಲ್ಲಿ ರೈತರ ಮೇಲೆ ಹಾಕಿದ ಕೇಸುಗಳನ್ನು ಹಿಂತೆಗೆದಿಲ್ಲ. ಈ ಕೂಡಲೇ ರೈತರ ಮೇಲಿನ ಕೇಸ್‌ಗಳನ್ನು ಹಿಂಪಡೆಯುವುದು.

ಪತ್ರಿಕಾಗೋಷ್ಠಿಯಲ್ಲಿ ಜೆಡಿ(ಎಸ್) ರಾಷ್ಟ್ರಾಧ್ಯಕ್ಷ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ರಾಜ್ಯ ಅಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಹಿರಿಯ ನಾಯಕರಾದ ಎಂ.ಸಿ.ನಾಣಯ್ಯ, ನಾರಾಯಣಸ್ವಾಮಿ, ವೈ.ಎಸ್.ವಿ.ದತ್ತ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಕೇಂದ್ರ ಸಮಿತಿ ಸದಸ್ಯರಾದ ವಿಜೆಕೆ ನಾಯರ್, ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಜಿ.ಎನ್.ನಾಗರಾಜ್, ಸಿಪಿಐ ಮುಖಂಡರಾದ ಹೆಚ್.ವಿ.ಅನಂತ ಸುಬ್ಬರಾವ್, ನರಸಿಂಹನ್, ಎಂ.ಸಿ.ವೆಂಕಟರಾಮು ಉಪಸ್ಥಿತರಿದ್ದು, ವಿವರಿಸಿದರು. ○

ಬದುಕಿನ ಸಮಸ್ಯೆಗಳು

- ಯುಪಿಎ ಸರ್ಕಾರದ ಬೆಲೆಏರಿಕೆ ನೀತಿಯನ್ನು ಆಹಾರ ಸಹಾಯಧನ ಕಡಿತವನ್ನು ವಿರೋದಿಸುವುದು.
  ಸಾರ್ವತ್ರಿಕ ಪಡಿತರ ವ್ಯವಸ್ಥೆಗೆ, ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ವಿಸ್ತರಣೆಗೆ ಒತ್ತಾಯಿಸುವುದು.
- ಆರ್ಥಿಕ ಕುಸಿತದಿಂದ ಮುಚ್ಚಿರುವ ಕೈಗಾರಿಕೆಗಳ ಕಾರ್ಮಿಕರಿಗೆ ಉದ್ಯೋಗ ಭದ್ರತೆ. ಕೈಗಾರಿಕೆಗಳಿಗೆ ಕೇಂದ್ರ ರಾಜ್ಯ ಸರ್ಕಾರಗಳಿಂದ ವಿಶೇಷ ಪ್ಯಾಕೇಜ್ ನಿರುದ್ಯೋಗ ನಿವಾರಣೆಗಳಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವ್ಯಾಪಕ ಜಾರಿ, ನಗರ ಪ್ರದೇಶಗಳಿಗೆ ವಿಸ್ತರಣೆ. ಬಿಕ್ಕಟ್ಟಿನ ಅಧ್ಯಯನಕ್ಕೆ ತಜ್ಞರು, ಕಾರ್ಮಿಕರು, ರೈತರ ಸಮಿತಿ. ಸರ್ವಪಕ್ಷಗಳ ಸಮಿತಿ ರಚನೆ.
- ಬಿಪಿಎಲ್ ಕಾರ್ಡ್ ಆದಾಯಮಿತಿಯನ್ನು 50,000ಕ್ಕೆ ಹೆಚ್ಚಿಸುವುದು ನೆಮ್ಮದಿಕೇಂದ್ರಗಳಲ್ಲಿ ಅರ್ಜಿಸ್ವೀಕಾರವನ್ನು ಪಂಚಾಯಿತಿ ಮಟ್ಟಕ್ಕೆ ವಿಸ್ತರಿಸುವುದು. ಜೀವನಾವಶ್ಯಕ 14 ಅಗತ್ಯ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ನೀಡುವುದು.
- ದಲಿತರ ಮೇಲೆ ದೌರ್ಜನ್ಯ ಎಸಗಿದವರ ಮೇಲೆ ಕಠಿಣ ಕಾನೂನುಕ್ರಮ ಶಿಕ್ಷೆಯಾಗುವವರೆಗೆ ಉಸ್ತುವಾರಿವಹಿಸಲು ಕ್ರಮ.
  ದಲಿತರಿಗೆ ವಿಶೇಷ ಘಟಕ ಹಣವನ್ನು 6000 ಕೋಟಿಗೆ ಹೆಚ್ಚಳ, ಏಕಗವಾಕ್ಷಿ ಮೂಲಕ ಹಣ ಬಳಕೆ.
- ಉದ್ಯೋಗ ಖಾತರಿ ಯೋಜನೆಯಡಿ ಕೂಲಿಯನ್ನು 150 ರೂಗಳಿಗೆ ಏರಿಕೆ, ಕನಿಷ್ಠಕೂಲಿಯನ್ನು ದಿನಕ್ಕೆ 231(ಕುಶಲರಲ್ಲದ ಕಾರ್ಮಿಕರಿಗೆ) ಏರಿಕೆ. ಗುತ್ತಿಗೆ ಕಾರ್ಮಿಕರು, ಗೌರವಧನದ ಸಿಬ್ಬಂದಿ ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ವೇತನದ ಅರ್ದದಷ್ಟು ನಿವೃತ್ತಿ ವೇತನ.
- ವಿಶೇಷ ವಲಯದ ಹೆಸರಿನಲ್ಲಿ, ರಸ್ತೆ ಖಾಸಗೀಕರಣದ ಹೆಸರಿನಲ್ಲಿ ರೈತರ ಭೂಮಿವಶಪಡಿಸಿಕೊಳ್ಳುವುದಕ್ಕೆ ವಿರೋಧ, ಕೈಗಾರಿಕೆಯಲ್ಲಿ ಪಾಲುದಾರಿಕೆ ಮತ್ತು ಸೂಕ್ತ ಪರಿಹಾರ ರಸ್ತೆ ಖಾಸಗೀಕರಣಕ್ಕೆ, ನೈಸ್ ಕಂಪನಿಯ ಭೂಮಿ ಲೂಟಿಗೆ ವಿರೋಧ, ದುಬಾರಿ ರಸ್ತೆಶುಲ್ಕಕ್ಕೆ ವಿರೋಧ.
- ಬಗರ್ ಹುಕ್ಕುಂ ಭೂಮಿ ಸಾಗುವಳಿಯನ್ನು ಸಕ್ರಮಗೊಳಿಸುವುದು ಆತ್ಮಹತ್ಯೆ ಮಾಡಿಕೊಂಡ ರೈತರಿಗೆ 5 ಲಕ್ಷ ಪರಿಹಾರದ ಸಾಲ ಪರಿಹಾರ ಆಯೋಗ ಮತ್ತು ಅದಕ್ಕೆ ಕೇರಳದಂತೆ ರಾಜ್ಯ ಸರ್ಕಾರದ ನೆರವು, ಬ್ಯಾಂಕಿನ ಪ್ರತಿಶಾಖೆಯೂ 1000 ರೈತರಿಗೆ ಸಾಲ ನೀಡುವ ನಿಯಮ. ಅರಣ್ಯ ಹಕ್ಕುಗಳ ಕಾಯಿದೆ ಜಾರಿ.
- ಮೀಟರಿನ ಅಳವಡಿಕೆ ಇಲ್ಲದೆ ಉಚಿತ ವಿದ್ಯುತ್. 12 ಗಂಟೆಗಳ ಕಾಲಹಗಲಿನಲ್ಲಿ ಗ್ರಾಮೀಣ ಪ್ರದೇಶಕ್ಕೆ ವಿದ್ಯುತ್ ಭಾಗ್ಯಜ್ಯೋತಿ ಕುಟೀರಜ್ಯೋತಿ ಬಳಕೆಗಳ ಮನ್ನಾ ಮತ್ತು ಉಚಿತ ವಿದ್ಯುತ್ ಮೇಲಿನ ಅಂಶಗಳಿಗೆ ಸಂಬಂದಪಟ್ಟಂತೆ, ರಾಜ್ಯ ಮಟ್ಟದಲ್ಲಿ ಸಮಾವೇಶ ನಡೆಸಿ, ಜಿಲ್ಲಾ ಹಾಗೂ ರಾಜ್ಯಮಟ್ಟದ ಹೋರಾಟಗಳನ್ನು ರೂಪಿಸಲಾಗುವುದು.

ಕುಂದಾಪುರ : ಗೌರವಧನ ಪಾವತಿಯಲ್ಲಿ ವ್ಯತ್ಯಾಸ ಖಂಡಿಸಿ

ಅಂಗನವಾಡಿ ನೌಕರರ ಪ್ರತಿಭಟನೆ

ಕುಂದಾಪುರ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ಬಿ.ಗೌಡ ಉದ್ದೇಶಪೂರ್ವಕವಾಗಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಪಾವತಿ ಮಾಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ಸಿಡಿಪಿಓ ಕಛೇರಿ ಎದುರು ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿದರು.

ಸಿಡಿಪಿಓ ಕಛೇರಿಯ ದಾಖಲೆಯಲ್ಲಿ ಗೌರವಧನ ಅಂಕೆ ಸಂಖ್ಯೆಗೂ ಬ್ಯಾಂಕ್ ಖಾತೆಯಲ್ಲಿ ಜಮಾವಾಗುವ ಸಂಖ್ಯೆಗೂ ತೀರಾ ವ್ಯತ್ಯಾಸ ಕಂಡುಬರುತ್ತಿರುವುದನ್ನು ಪ್ರಶ್ನಿಸಿ, ನೌಕರರ ಸಂಘದ ಅಧ್ಯಕ್ಷೆಯಾದ ಕಾಂ.ಸಬಿತಾ ಶೆಟ್ಟಿ ಹಾಗೂ ಕಾರ್ಯದರ್ಶಿ ಕಾಂ.ಫಿಲೋಮಿನಾರವರು ಮಾಹಿತಿ ಹಕ್ಕಿನ ಕಾಯ್ದೆಯಂತೆ ಅರ್ಜಿ ನೀಡಿದರು. ಆದರೆ ಯಾವಾಗಲೂ ಮಹಿಳಾ ನೌಕರರನ್ನು ಕೀಳು ಮನೋಭಾವನೆಯಿಂದ ನೋಡುವ ಕೆಲವು ಭ್ರಷ್ಟ ಅಧಿಕಾರಿಗಳಂತೆಯೇ ಕುಂದಾಪುರದ ಸಿಡಿಪಿಓ ಎಂ.ಬಿ.ಗೌಡನಿಗೂ ಕೂಡ ಅಮಲೇರಿದೆ. ಮಾಹಿತಿ ನೀಡುವ ಬದಲಾಗಿ ಸಂಘದ ಅಧ್ಯಕ್ಷರಾದ ಕಾಂ.ಸಬಿತಾ ಶೆಟ್ಟಿ ಮತ್ತು ಫಿಲೋಮಿನಾ ಹಾಗೂ ಇತರ ಕಾರ್ಯಕರ್ತೆಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ " ನೀವು ಬ್ಯಾಂಕಿಗೆ ಹೋಗಿ ಘೆರಾವು ಮಾಡಿ, ನೀವು ಸರಕಾರವನ್ನು ಕೇಳಿ, ನೀವು ನಮ್ಮ ಅನ್ನ ತಿಂದು ಬದುಕುವವರು, ನಾನು ಹೇಳಿದಂತೆ ನೀವು ನಡೆಯಬೇಕು, ನಿಮ್ಮನ್ನೆಲ್ಲಾ ಅಮಾನತು ಮಾಡುತ್ತೇನೆ." ಎಂದು ಬೆದರಿಕೆ ಹಾಕಿದ್ದಾನೆ. ಎಂ.ಬಿ.ಗೌಡ ಎಂತಹ ಭ್ರಷ್ಟಾಚಾರಿ ಎಂದರೆ ಈತ ಕುಡಿದೇ ಕಛೇರಿಯ ಕೆಲಸಕ್ಕೆ ಬರುತ್ತಾನೆ ಎಂಬ ದೂರುಗಳು ಇವೆ. ಅಧಿಕಾರಿಯಾಗಿ ತನ್ನ ಜವಾಬ್ದಾರಿಯ ಅರಿವಿಲ್ಲದೆ ತನ್ನ ದುರ್ನಡತೆಯನ್ನು ಈ ರೀತಿ ವ್ಯಕ್ತಪಡಿಸುತ್ತಾನೆಂದರೆ ಎಂ.ಬಿ.ಗೌಡ ಎಂತಹ ಭ್ರಷ್ಟಾಚಾರಿ ಎಂಬುದು ಸಾಬೀತಾಗುತ್ತದೆ.

ಜನವರಿ 07 ರಂದು ಸಿಡಿಪಿಓ ಕಛೇರಿ ಎದುರು ನೂರಾರು ಕಾರ್ಯಕರ್ತೆಯರು ಸಹಾಯಕಿಯರು ಮುತ್ತಿಗೆ ಹಾಕಿ ಪ್ರತಿಭಟಿಸಿದಾಗ ಎಂ.ಬಿ.ಗೌಡ ಹಿಂದಿನ ದಿನವೇ ವಿಷಯ ತಿಳಿದು



ಕೆಲಸಕ್ಕೆ ಹಾಜರಾಗದೇ ಬೆಂಗಳೂರಿಗೆ ತರಬೇತಿ ಎಂಬ ನೆಪವೊಡ್ಡಿ ತಪ್ಪಿಸಿಕೊಂಡಿದ್ದಾನೆ. ಇದರ ವಿಷಯ ಅರಿತ ಸಂಘದವರ ಆಕ್ರೋಶ ಇಮ್ಮಡಿಯಾಯಿತು. ಬೆದರಿದ ಉಸ್ತುವಾರಿಯಲ್ಲಿದ್ದ ಎಸಿಡಿಪಿಓ ಸರೋಜಿನಿ ತಹಸೀಲ್ದಾರರ ಕಛೇರಿಗೆ ಕರೆ ಮಾಡಿ ಉಪತಹಶೀಲ್ದಾರರು ಹಾಗೂ ಇತರ ಅಧಿಕಾರಿಗಳ ಮೂಲಕ ಸಂಧಾನ ಮಾಡಲು ಪ್ರಯತ್ನಿಸಿದ್ದಾರೆ. ಆದರೆ ಸಂಘದ ಮುಖಂಡರು ಆಗಮಿಸಿದ ಉಪ ತಹಸೀಲ್ದಾರರಿಗೆ ಸಿಡಿಪಿಓ ಅಧಿಕಾರಿ ಮುಂದಿನ ದಿನಗಳಲ್ಲಿ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಗಮನಕೊಡಬೇಕು ಹಾಗೂ ನೌಕರರಿಗೆ ಗೌರವ ನೀಡಬೇಕು ಮತ್ತು ಸಂಘದ ಮುಖಂಡರ ಜತೆ ಮಾತುಕತೆ ನಡೆಸಿ, ಕಛೇರಿಯ ಅವ್ಯವಸ್ಥೆ ಸರಿಪಡಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಸಿಡಿಪಿಓ ಕಛೇರಿ ಎದುರು ನಿರಂತರವಾಗಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದು ಎಂಬ ಷರತ್ತಿನ ಮೇಲೆ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು.

ಸಬಿತಾ ಶೆಟ್ಟಿ, ಫಿಲೋಮಿನಾ ಫೆರ್ನಾಂಡಿಸ್, ಮೀನಾಕ್ಷಿ ಪವಾರ್, ಸುಶೀಲಾ ಚಂದ್ರವತಿ, ವನಜ ಶೆಟ್ಟಿ, ಬಾಗಿರಥಿ ಶಿರೂರು, ಪ್ರತಿಮಾ ಶೆಟ್ಟಿ, ಬಾಗೀರಥಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಸಿಐಟಿಯು ಮುಖಂಡರಾದ, ದಾಸ್ ಭಂಡಾರಿ, ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಸಂಘ ತಾಲ್ಲೂಕು ಕಾರ್ಯದರ್ಶಿ ಚಂದ್ರಶೇಖರ.ವಿ, ಡಿ.ವೈ.ಎಫ್.ಐ.ನ ಸುರೇಶ ಕಲ್ಲಾಗರ್ ಸುಧಾ ಕಾಂಚಾನ್ ಉಪಸ್ಥಿತರಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಖಂಡಿಸಿ ಸಮಾನಮನಸ್ಕರಿಂದ ಪ್ರತಿಭಟನೆ

"ಈ ಜಗತ್ತಿನಲ್ಲಿ ನೀನು ಇನ್ನೊಬ್ಬರ ಸ್ವಾತಂತ್ರ್ಯವನ್ನು ರಕ್ಷಿಸುವುದರ ಮೂಲಕ ನೀನು ನಿನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬಲ್ಲೆ" ಕರ್ನಾಟಕ ರಾಜ್ಯ ಸೇರಿದಂತೆ ಅತಿ ಮುಖ್ಯವಾಗಿ ಕರಾವಳಿ ಜಿಲ್ಲೆಯ ಪ್ರತಿಯೊಬ್ಬರೂ ಕೂಡ ಕೇಳಿಕೊಳ್ಳಬೇಕಾದಂತಹ ಅರ್ಥಪೂರ್ಣವಾದಂತಹ ಈ ಮಾತು ಕ್ಲಾರೆನ್ಸ್ ಎನ್ನುವ ಮೇಧಾವಿಯವರ ಮಾತು. ಇತ್ತೀಚಿಗೆ ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ 'ಕರಾವಳಿ ಅಲೆ' ಪತ್ರಿಕೆಯ ಮೇಲೆ ಸಂಘ ಪರಿವಾರಿಗಳು ನಿರಂತರವಾಗಿ ದಾಳಿ ಮಾಡುತ್ತಿವೆ. ಕ್ಲಾರೆನ್ಸ್‌ರವರ ಮಾತುಗಳು ಕರಾವಳಿಯಲ್ಲಿ ಎಡಪಂಥೀಯ ಸಂಘಟನೆಗಳನ್ನು ಹೊರತುಪಡಿಸಿದರೆ ಬೇರೆ ಯಾರೂ ಒಗ್ಗಟ್ಟು ಪ್ರದರ್ಶಿಸಲು, ಫ್ಯಾಸಿಸ್ಟ್ ಕೇಳಿಸಿಕೊಳ್ಳುವುದು ಅಪರಾಧವೆಂಬಂತೆ ಪತ್ರಿಕೆಗಳೂ ಕೂಡ ಪತ್ರಿಕೆಯ ಮೇಲೆ ನಡೆದ ಹಲ್ಲೆಯ ಬಗ್ಗೆ ಬರೆಯುವುದಿಲ್ಲ ಅಥವಾ ಪ್ರತಿಭಟನೆ ನಡೆದರೂ ಯಾವ ಪತ್ರಿಕೆಗಳು ವರದಿ ಪ್ರಕಟಿಸದೇ ನಾವು ಕೇಸರಿ ಪಡೆಯ ಹಿತಾಸಕ್ತಿ ಕಾಪಾಡುವ ಪತ್ರಿಕೆಗಳು ಎಂದು ಮತ್ತೆ ಸಾಬೀತುಪಡಿಸುತ್ತವೆ.

ಜನವರಿ 15 ರಂದು ಈ ಘಟನೆಯ ವಿರುದ್ಧ ಪತ್ರಕರ್ತರನ್ನೊಳಗೊಂಡಂತೆ ಸಮಾನವಯಸ್ಕರು ಜತೆಗೂಡಿ ಅಭಿವ್ಯಕ್ತಿ ಸ್ವಾತಂತ್ರ್ಯಹರಣ ಖಂಡಿಸಿ, ಡಿವೈಎಫ್ಐ ಸಂಘಟನೆಯ ಮುತುವರ್ಜಿಯಿಂದ ಎಲ್ಲಾ ಸಮಾನಮನಸ್ಕರನ್ನು ಒಂದೂಗೂಡಿಸಲು, ಮನೋವೃತ್ತಿಯನ್ನು ವಿರೋಧಿಸಲು ಭಿನ್ನವಾದ ಕಾರ್ಯಕ್ರಮ ಹಮ್ಮಿಕ್ಕೊಂಡಿತು. ಕಾರ್ಯಕ್ರಮದಲ್ಲಿ ಸಿಪಿಐ(ಎಂ), ಸಮುದಾಯ, ಸೌಹಾರ್ದ ವೇದಿಕೆ, ಸಿಐಟಿಯು, ಕಾಂಗ್ರೆಸ್, ಜೆಡಿ(ಎಸ್), ದಲಿತ ಸಂಘರ್ಷ ಸಮಿತಿ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವೇದಿಕೆ ಮುಂತಾದ ಸಂಘಟನೆಗಳನ್ನು ಭಾಗವಹಿಸಲು ಆಮಂತ್ರಿಸಿತು. ಆದರೆ ಕಾಂಗ್ರೆಸ್ ಇದರಲ್ಲಿ ಭಾಗವಹಿಸದಿದ್ದು ಮಾತ್ರ ವಿಷಾದನೀಯ.

ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಮಹಾಬಲ ವಡೇರಹೋಬಳಿ



ಪ್ರಜಾಪ್ರಭುತ್ವಕ್ಕೆ ಅಪಾಯವು ಸ್ಪಷ್ಟ ಗೋಚರವಾಗುವುದನ್ನು ಮನಗಂಡ ಪ್ರತಿಭಟನೆಕಾರರು ಮುಂದೆಯೂ ಒಗ್ಗಟ್ಟು ಪ್ರದರ್ಶಿಸಲು ಪ್ರತಿಜ್ಞೆ ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಹೆಚ್.ನರಸಿಂಹ, ಚಂದ್ರಶೇಖರ್.ವಿ., ಡಿವೈಎಫ್ಐನ ಅಧ್ಯಕ್ಷ ಸುಬ್ರಹ್ಮಣ್ಯ ಆಚಾರ್, ಸುರೇಶ್ ಕಲ್ಲಾಗರ, ಶ್ರೀಕಾಂತರ ವಡೇರಹೋಬಳಿ, ಸಮುದಾಯ ಸಾಂಸ್ಕೃತಿಕ ಸಂಘಟನೆಯ ಬಾಲಕೃಷ್ಣ ಕೆ.ಎಂ., ರವಿ.ವಿ.ಎಂ.ಉಪಸ್ಥಿತರಿದ್ದರು.

ಸಿಪಿಐ(ಎಂ)ನ ಮಹಾಬಲವಡೇರ ಹೋಬಳಿ, ಕೊಂಕಣಿ ವಾರಪತ್ರಿಕೆಯ ವಲೇರಿಯಾನ್ ಮೇನೇಜಸ್, ಸೌಹಾರ್ದ ವೇದಿಕೆಯ ಸಂಚಾಲಕರಾದ, ಎಡ್ವಿನ್ ಕ್ರಾಸ್ತ ಪ್ರಜಾವಾಣಿ ಪತ್ರಿಕೆ ವರದಿಗಾರ ಹಾಗೂ ಕಾರ್ಯನಿರತ ಪತ್ರಕರ್ತ ಸಂಘದ ಕಾರ್ಯದರ್ಶಿ ರಾಜೇಶ್ ಕೆ.ಸಿ.ರವರು ಪ್ರಕರಣವನ್ನು ಖಂಡಿಸಿ ಮಾತನಾಡಿದರು.

■ **ಸುರೇಶಕಲ್ಲಾಗರ್**, ಕುಂದಾಪುರ

ಚುನಾವಣಾ ಆಯುಕ್ತರ ವಿವಾದ
ಚುನಾವಣಾ ಆಯೋಗದ ಸುಧಾರಣೆ ಅಗತ್ಯ

ಕಳೆದ ವಾರ ಇಡೀ ದೇಶದ ಗಮನ ಸೆಳೆದ ಚುನಾವಣಾ ಆಯುಕ್ತರ ಕುರಿತ ವಿವಾದ ಚುನಾವಣಾ ಆಯೋಗದ ಸದಸ್ಯರ ಸಮಗ್ರತೆ, ಅವರ ಸಾಮೂಹಿಕ ಕಾರ್ಯನಿರ್ವಹಣೆಯ ಬಗ್ಗೆ ಪ್ರಶ್ನೆಗಳನ್ನೆಬ್ಬಿಸಿದೆ. ಮುಖ್ಯ ಚುನಾವಣಾ ಆಯುಕ್ತರ ಶಿಫಾರಸಿನ ಬಗ್ಗೆ ಚರ್ಚೆ ನಡೆಯುತ್ತಿರುವ ಈಗಿನ ಸಂದರ್ಭದಲ್ಲಿ ಚುನಾವಣಾ ಆಯೋಗದ ಕಾರ್ಯನಿರ್ವಹಣೆಯಲ್ಲಿ ಸುಧಾರಣೆಯ ಪ್ರಶ್ನೆಯನ್ನು ಪರಿಶೀಲಿಸಬೇಕಾದ ಅಗತ್ಯ ಮತ್ತೊಮ್ಮೆ ಕಾಣಬರುತ್ತಿದೆ.

ಭಾರತದ ಮುಖ್ಯ ಚುನಾವಣಾ ಆಯುಕ್ತರು ಇನ್ನೊಬ್ಬ ಚುನಾವಣಾ ಆಯುಕ್ತರಾದ ನವೀನ್ ಚಾವ್ಲಾರನ್ನು ತೆಗೆದು ಹಾಕಬೇಕು ಎಂದು ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಿರುವುದು ಇಡೀ ದೇಶದ ಗಮನ ಸೆಳೆದಿದೆ. ಇದಕ್ಕೆ ಅವರು ಕೊಟ್ಟಿರುವ ಕಾರಣ ಅವರ 'ಪಕ್ಷಪಾತ'. ಇದು ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆಯಾಗಿ ಹೊಂದಿರಬೇಕಾದ ವಿಶ್ವಾಸಾರ್ಹತೆಯನ್ನು ಕುಂದಿಸಿದೆ, ಅದರ ಸದಸ್ಯರ ಸಮಗ್ರತೆ, ಅವರ ಸಾಮೂಹಿಕ ಕಾರ್ಯನಿರ್ವಹಣೆಯ ಬಗ್ಗೆ ಪ್ರಶ್ನೆಗಳನ್ನೆಬ್ಬಿಸಿದೆ. ಮುಖ್ಯ ಚುನಾವಣಾ ಆಯುಕ್ತರು ಏಪ್ರಿಲ್ 20 ರಂದು ನಿವೃತ್ತರಾಗುತ್ತಿದ್ದಾರೆ. ಅಲ್ಲದೆ 15 ನೇ ಸಾರ್ವತ್ರಿಕ ಚುನಾವಣೆ ಏಪ್ರಿಲ್-ಮೇ ಯಲ್ಲಿ ನಡೆಯಬೇಕಾಗಿದೆ. ಇಂತಹ ಸಂದರ್ಭದಲ್ಲಿ ಈ ಶಿಫಾರಸು ಬಂದಿರುವುದು ಸ್ವಾಭಾವಿಕವಾಗಿಯೇ ಇನ್ನಷ್ಟು ಸಂದೇಹಾಸ್ಪದವಾಗುತ್ತದೆ.

ನವೀನ್ ಚಾವ್ಲಾರವರ ನೇಮಕವಾದ ಕೂಡಲೇ ಬಿಜೆಪಿ ಇದರಲ್ಲಿ 'ರಾಜಕೀಯ ಪಕ್ಷಪಾತ'ವಿದೆ ಎಂದು ಈ ನೇಮಕವನ್ನು ಪ್ರಶ್ನಿಸಿ ರಾಷ್ಟ್ರಪತಿಗಳಿಗೆ ಒಂದು ಅರ್ಜಿ ಸಲ್ಲಿಸಿತ್ತು. ನಂತರ ಸುಪ್ರಿಂ ಕೋರ್ಟಿನಲ್ಲೂ ಅರ್ಜಿ ಸಲ್ಲಿಸಿತು, ಅದನ್ನು ವಾಪಸೂ ಪಡೆಯಿತು; ತದನಂತರ ಜನವರಿ 2008ರಲ್ಲಿ ಅದೇ ಅರ್ಜಿಯನ್ನು ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿತು. ಅರ್ಜಿ ಸುಪ್ರಿಂಕೋರ್ಟಿನಲ್ಲಿದ್ದಾಗ ಮುಖ್ಯ ಚುನಾವಣಾ ಆಯುಕ್ತರು ಒಂದು ಅಫಿಡವಿಟ್ ಸಲ್ಲಿಸಿದ್ದರು. ಅದರಲ್ಲಿ ಸಂವಿಧಾನದ 324ರ ಕಲಮಿನ ಪ್ರಕಾರ ಒಬ್ಬ ಚುನಾವಣಾ ಆಯುಕ್ತರನ್ನು ತೆಗೆಯಬೇಕು ಎಂದು ತಾನಾಗಿಯೇ ಶಿಫಾರಸು ಮಾಡಲು ತನಗೆ ಅಧಿಕಾರವಿದೆ ಎಂದು ಅವರು ಹೇಳಿಕೊಂಡಿದ್ದರು.

ರಕ್ಷಕನಾಗುವ ಬದಲು ಪೀಡಕನಾದರೆ!

ಇದು ಈ ಕಲಮಿನ ಒಂದು ವಿಚಿತ್ರ ವ್ಯಾಖ್ಯೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಸಂವಿಧಾನ ಮುಖ್ಯ ಚುನಾವಣಾ ಆಯುಕ್ತರನ್ನು ನೇಮಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಕೊಟ್ಟಿದೆ; ನಿಜ, ಸರಕಾರದ ಶಿಫಾರಸಿನಂತೆ ಈ ನೇಮಕವಾಗುತ್ತದೆ. ಅವರನ್ನು, ಸುಪ್ರಿಂಕೋರ್ಟಿನ ನ್ಯಾಯಾಧೀಶರಂತೆ ಸಂಸತ್ತು ದೋಷಾರೋಪಣೆ ಮೂಲಕ ಮಾತ್ರ ತೆಗೆದು ಹಾಕಬಹುದು. ಚುನಾವಣಾ ಆಯುಕ್ತರನ್ನೂ ರಾಷ್ಟ್ರಪತಿಗಳು ನೇಮಿಸುವುದರಿಂದ ಅವರನ್ನೂ ಮುಖ್ಯ ಚುನಾವಣಾ ಆಯುಕ್ತರ ಶಿಫಾರಸಿಲ್ಲದೆ ತೆಗೆದು ಹಾಕಲು ಸಾಧ್ಯವಿಲ್ಲ. ಆದರೆ ಇದುವರೆಗೆ ಅನುಸರಿಸಿದ ಸಂಪ್ರದಾಯದ ಪ್ರಕಾರ ಈ ರೀತಿಯ ಶಿಫಾರಸಿನ ಪ್ರಶ್ನೆ ರಾಷ್ಟ್ರಪತಿಗಳಿಂದ ಈ ಬಗ್ಗೆ ಪ್ರಸ್ತಾವ ಬಂದಾಗ ಮಾತ್ರವೇ ಏಳುತ್ತದೆ. ಚುನಾವಣಾ ಆಯೋಗದ ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು, ಕಾರ್ಯಾಂಗ ರಾಜಕೀಯ ಕಾರಣಕ್ಕೆ ಯಾವುದೇ ಚುನಾವಣಾ ಆಯುಕ್ತರನ್ನು ತೆಗೆದು ಹಾಕಲು ಅವಕಾಶವಿರಬಾರದು ಎಂದು ಹೀಗೆ ಮಾಡಲಾಗಿದೆ. ಏನೇ ಆಗಲಿ, ಮುಖ್ಯ ಚುನಾವಣಾ ಆಯುಕ್ತರಿಗೆ ತಾನಾಗಿಯೇ ಶಿಫಾರಸು ಮಾಡುವ ಅಧಿಕಾರ ಇಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ ಮುಖ್ಯ ಚುನಾವಣಾ ಆಯುಕ್ತರು ಈ ರೀತಿ ಹೇಳಿಕೊಂಡು ಕಾರ್ಯಾಂಗದ ಅಧಿಕಾರಕ್ಕೆ ಕಡಿವಾಣ ಹಾಕುವ, ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ರಕ್ಷಿಸುವ ಆಶಯವನ್ನು ಸ್ವತಃ ತಾನೇ ಉಲ್ಲಂಘಿಸುತ್ತಿದ್ದಾರೆ !

ಒಂದೊಂದು ಸಂದರ್ಭದಲ್ಲಿ ಸರ್ವೋಚ್ಛ ನ್ಯಾಯಾಲಯವೇ ಈ ಬಗ್ಗೆ ಚುನಾವಣಾ ಆಯೋಗಕ್ಕೆ ಎಚ್ಚರಿಕೆ ನೀಡಿತ್ತು. "ಮುಖ್ಯ ಚುನಾವಣಾ ಆಯುಕ್ತರು ತಮ್ಮಿಷ್ಟದಂತೆ, ಚಪಲದಂತೆ ಅಧಿಕಾರ ಚಲಾಯಿಸಿದರೆ, ಸ್ವತಃ ಮುಖ್ಯ ಚುನಾವಣಾ ಆಯುಕ್ತರೇ ದಮನದ ಸಾಧನವಾಗುತ್ತಾರೆ, ಚುನಾವಣಾ ಆಯುಕ್ತರು ಮತ್ತು ಪ್ರಾದೇಶಿಕ ಆಯುಕ್ತರು ತಮ್ಮನ್ನು ತೆಗೆದು ಹಾಕುವ ಬೆದರಿಕೆಯಡಿ ಕಾರ್ಯ ನಿರ್ವಹಿಸುವಂತಾದರೆ, ಅದು ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ಧ್ವಂಸ ಮಾಡುತ್ತದೆ" ಎಂದು ಅದು ಹೇಳಿತ್ತು. ಪ್ರಸ್ತುತ ಸಂದರ್ಭದಲ್ಲಿ ಮುಖ್ಯ ಚುನಾವಣಾ ಆಯುಕ್ತರು ಚುನಾವಣಾ ಆಯುಕ್ತರುಗಳನ್ನು ರಾಜಕೀಯ ಕಾರ್ಯಾಂಗದ ಸ್ವೇಚ್ಛಾಚಾರದಿಂದ ಕಾಪಾಡುವ ರಕ್ಷಕನಾಗುವ ಬದಲು ತಾನೇ ಪೀಡಕನಾಗಿದ್ದಾರೆ!

ಚುನಾವಣಾ ಆಯೋಗದ ಮಹತ್ವ

ಇದೀಗ ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಮುಖ್ಯ ಪ್ರಶ್ನೆಯನ್ನೇ ನಮ್ಮ ಎದುರಿಗೆ ತಂದಿಟ್ಟಿದೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗ ಒಂದು ಮಹತ್ವದ ಸಂಸ್ಥೆ. ಸಂಸದೀಯ ಪ್ರಜಾಪ್ರಭುತ್ವ ನಮ್ಮ ಸಂವಿಧಾನದ ಒಂದು ಮೂಲ ಲಕ್ಷಣ. ನಮ್ಮ ಸಂಸದೀಯ ಪ್ರಜಾಪ್ರಭುತ್ವವನ್ನು ಮುಂದಕ್ಕೊಯ್ಯುವತ್ತ, ಅದನ್ನು ಬಲಪಡಿಸುವತ್ತ ಸಾಗುತ್ತಿರುವಾಗ ನಾವು ಹೊಸ-ಹೊಸ ಕ್ಲಿಷ್ಟತೆಗಳನ್ನು ಎದುರಿಸಬೇಕಾಗಿ ಬಂದಿದೆ. ಸಂಸತ್ತು ಮುಕ್ತ ಮತ್ತು ನ್ಯಾಯಪೂರ್ಣ ಚುನಾವಣೆಗಳನ್ನು ನಡೆಸಲು, ನಮ್ಮ ಚುನಾವಣಾ ಪದ್ಧತಿಯನ್ನು ಪಕ್ಷಪಾತೀ ಪ್ರಭಾವಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳದಂತೆ ಮಾಡಲು ಹಲವಾರು ಕಾನೂನುಗಳನ್ನು ತರಬೇಕಾಗಿ ಬಂದಿದೆ.


ಸಂಸತ್ತಿಗೂ, ರಾಜ್ಯ ವಿಧಾನ ಮಂಡಲಗಳಿಗೂ ಚುನಾವಣೆಗಳನ್ನು ನಡೆಸುವಲ್ಲಿ ಸಂವಿಧಾನ ಚುನಾವಣಾ ಆಯೋಗಕ್ಕೆ ಒಂದು ಕೇಂದ್ರ ಪಾತ್ರವನ್ನು ವಹಿಸಿ ಕೊಟ್ಟಿದೆ. ಸಂವಿಧಾನದ 324ನೇ ಕಲಮು ಇದಕ್ಕೆ ಸಂಬಂಧ ಪಟ್ಟದ್ದು. ಇದು ಚುನಾವಣೆಗಳ ಉಸ್ತುವಾರಿ, ನಿರ್ದೇಶನ ಮತ್ತು ಹತೋಟಿಯ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಿದೆ. ಕಲಮು 325 ರಿಂದ 329 ಈ ಅಧಿಕಾರಗಳನ್ನು ವಿವರಿಸುತ್ತಾ ಚುನಾವಣಾ ಆಯೋಗ ಯಾವ ದಿಕ್ಕಿನಲ್ಲಿ ಚುನಾವಣೆಗಳನ್ನು ನಡೆಸಬೇಕು ಎಂಬುದನ್ನು ಹೇಳಿವೆ. ನಂತರ ಸಂಸತ್ತು ಜನತಾ ಪ್ರಾತಿನಿಧ್ಯ ಶಾಸನ(ಆರ್‌ಪಿಎ)ವನ್ನು ಪಾಸು ಮಾಡಿತು..

ಇದನ್ನು ನಂತರ ಹಲವು ಬಾರಿ ತಿದ್ದುಪಡಿ ಮಾಡಲಾಗಿದೆ. ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸುವಲ್ಲಿ ಬಂದ ಹೊಸ ಕ್ಲಿಷ್ಟತೆಗಳನ್ನು ಎದುರಿಸಲು ಇವನ್ನೆಲ್ಲಾ ತರಲಾಯಿತು. ಒಟ್ಟಾರೆಯಾಗಿ ಈ ಸಂವಿಧಾನಿಕ ಮತ್ತು ಕಾನೂನಾತ್ಮಕ ಪ್ರಕ್ರಿಯೆಗಳ ಗುರಿ ಸಂಸದೀಯ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಮತ್ತು ಚುನಾವಣೆಗಳ ಪ್ರಜಾಸತ್ತಾತ್ಮಕ, ಮುಕ್ತ ಮತ್ತು ನ್ಯಾಯಪೂರ್ಣ ಸ್ವರೂಪವನ್ನು ಬಲಪಡಿಸುವುದಾಗಿದ್ದರೂ, ಚುನಾವಣಾ ಆಯೋಗದ ಸ್ವಾತಂತ್ರ?್ಯ ಮತ್ತು ಸ್ವಾಯತ್ತತೆಯನ್ನು ಬಲಪಡಿಸುವುದರ ಮೇಲೆ ಹೆಚ್ಚಿನ ಒತ್ತು ನೀಡಲಾಯಿತು.

ಜವಾಬುದಾರಿಕೆಯೂ ಇರಬೇಕು

ಈ ಬಗ್ಗೆ ಯಾರದೂ ತಕರಾರು ಇರಲು ಸಾಧ್ಯವಿಲ್ಲ. ಆದರೆ ಇವನ್ನೆಲ್ಲಾ ಚುನಾವಣಾ





ಆಯೋಗದ ಜವಾಬುದಾರಿಕೆಯ ದೃಷ್ಟಿಯಿಂದ ಪರೀಕ್ಷಿಸುವುದು, ಅದಕ್ಕೆ ಮಾನದಂಡಗಳನ್ನು. ಮಟ್ಟಗಳನ್ನು ನಿಗದಿ ಮಾಡುವುದು ಕೂಡಾ ಅಷ್ಟೇ ಮುಖ್ಯವಾಗುತ್ತದೆ. ಏಕೆಂದರೆ ಈ ಜವಾಬುದಾರಿಕೆಯನ್ನು ನಿರೂಪಿಸದಿದ್ದರೆ, ಚುನಾವಣಾ ಆಯೋಗ ಒಂದು ಸಂಸ್ಥೆಯಾಗಿ ಅಪಾರದರ್ಶಕವಾದ, ವಸ್ತುನಿಷ್ಠವಲ್ಲದ ರೀತಿಯಲ್ಲಿ, ಬೇಕಾಬಿಟ್ಟಿಯಾಗಿ ವರ್ತಿಸಲು ಅವಕಾಶವಾಗುತ್ತದೆ. 2006ರಲ್ಲಿ ಸಿಪಿಐ(ಎಂ) ಸಾರ್ವಜನಿಕ ಚರ್ಚೆಗೆಂದು ಮುಂದಿಟ್ಟ ದಸ್ತಾವೇಜಿನಲ್ಲಿ ಹೇಳಿದಂತೆ ಇಂತಹ ಪ್ರತಿಕೂಲ ಪ್ರವೃತ್ತಿಗಳ ಪರಿಣಾಮವಾಗಿ ಪಕ್ಷಪಾತದ ನಿಲುವು ಬರಬಹುದು, ಅದರಿಂದ ಸಂವಿಧಾನ ಅದಕ್ಕೆ ನೀಡಿದ ನಿಷ್ಪಕ್ಷಪಾತಿ ಮತ್ತು ಸ್ವತಂತ್ರ ಸ್ವರೂಪ ಬುಡಮೇಲಾಗಬಹುದು.

ಆದ್ದರಿಂದ ಪ್ರಸಕ್ತ ಮುಖ್ಯ ಚುನಾವಣಾ ಆಯುಕ್ತರ ಶಿಫಾರಸಿನ ಬಗ್ಗೆ ಚರ್ಚೆ ನಡೆಯುತ್ತಿರುವ ಈಗಿನ ಸಂದರ್ಭದಲ್ಲಿ ಚುನಾವಣಾ ಆಯೋಗದ ಕಾರ್ಯ ನಿರ್ವಹಣೆಯಲ್ಲಿ ಸುಧಾರಣೆಯ ಪ್ರಶ್ನೆಯನ್ನು ಪರಿಶೀಲಿಸಬೇಕಾದ ಅಗತ್ಯ ಮತ್ತೊಮ್ಮೆ ಕಾಣಬರುತ್ತಿದೆ. 2006ರಲ್ಲಿ ಸಿಪಿಐ(ಎಂ) ಚರ್ಚೆಗೆಂದು ಪ್ರಸ್ತುತ ಪಡಿಸಿದ ದಸ್ತಾವೇಜು ಇದಕ್ಕೇ ಆಧಾರವಾಗಬಲ್ಲುದು. ಇದರಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳಿವೆ.

ಮೊದಲನೆಯದ್ದು, ಚುನಾವಣಾ ಆಯೋಗದ ಸ್ವರೂಪ ಹೇಗಿರಬೇಕು, ಮುಖ್ಯ ಚುನಾವಣಾ ಆಯುಕ್ತರೂ ಸೇರಿದಂತೆ ಅದರ ಸದಸ್ಯರುಗಳ ನೇಮಕ, ವಜಾದ ವಿಧಿ-ವಿಧಾನಗಳು ಏನಿರಬೇಕು ಎಂಬುದರ ಕುರಿತಾದ್ದು. ಆರಂಭದಲ್ಲಿ ಇದರಲ್ಲಿ ಒಬ್ಬರೇ ಸದಸ್ಯರಿದ್ದರು. ನಂತರ ಸದಸ್ಯ ಸಂಖ್ಯೆಯನ್ನು ವಿಸ್ತರಿಸಿ ಗರಿಷ್ಟ ಐದು ಎಂದು ಮಾಡಲಾಯಿತು. ಮುಖ್ಯ ಚುನಾವಣಾ ಆಯುಕ್ತರನ್ನು ವಜಾ ಮಾಡಲು ವಿಶೇಷ ಅಂಶಗಳನ್ನು ಕೂಡಾ ಸೇರಿಸಲಾಯಿತು. ನೇಮಕದ ವಿಷಯದಲ್ಲಿ, ಪ್ರಧಾನ ಮಂತ್ರಿಗಳು, ವಿರೋಧ ಪಕ್ಷದ ಮುಖಂಡರು ಮತ್ತು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಅಥವಾ ಅವರ ಒಬ್ಬ ಸಹಯೋಗಿ ನ್ಯಾಯಾಧೀಶರು ಇರುವ ಒಂದು ಸಮಿತಿಯ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನೇಮಕ ಮಾಡಬಹುದು. ಆದರೆ ಚುನಾವಣಾ ಆಯೋಗದ ಸದಸ್ಯರಾಗಿದ್ದವರು ನಿವೃತ್ತಿಯ ನಂತರ ಸರಕಾರದ ಅಡಿಯಲ್ಲಿಯೋ ಅಥವಾ ರಾಜ್ಯಪಾಲರು, ಸಂಸತ್ತಿನ ಸದಸ್ಯರು ಇತ್ಯಾದಿ ಯಾವುದೇ ಹುದ್ದೆಯನ್ನು ಸ್ವೀಕರಿಸಬಾರದು ಎಂದು ವಿಧಿಸಬೇಕು. ಈ ರೀತಿ ಹಿತಾಸಕ್ತಿಗಳ ತಿಕ್ಕಾಟಕ್ಕೆ ಯಾವುದೇ ಅವಕಾಶವಿರದಂತೆ ಮಾಡಬೇಕು. ಚುನಾವಣಾ ಆಯೋಗ ರಾಜಕೀಯ ಪಕ್ಷಪಾತದಿಂದ ವರ್ತಿಸುತ್ತಿದೆಯೋ, ಸರಕಾರಗಳ ಅಧಿಕಾರಗಳನ್ನು ಕಸಿದು ಕೊಳ್ಳುತ್ತಿದೆಯೇ ಅಥವಾ ಬೇರೆ ಯಾವುದಾದರೂ ದುರುದ್ದೇಶದಿಂದ ವರ್ತಿಸುತ್ತಿದೆಯೇ ಎಂದು ನಿಗಾ ವಹಿಸಲು ಒಂದು ಸಂವಿಧಾನಿಕ ವ್ಯವಸ್ಥೆ ಇರಬೇಕು. ಅಗತ್ಯವಿದ್ದರೆ ಇವಕ್ಕೆ

ಪುಟ 12ಕ್ಕೆ



ಹಮಾಲಿ, ಅಂಗನವಾಡಿ, ಪಂಚಾಯತಿ, ಬಿಸಿಯೂಟ, ಬೀಡಿ, ಕಟ್ಟಡ ಕಾರ್ಮಿಕರು ಮುಂತಾದ ಅಸಂಘಟಿತ ಕಾರ್ಮಿಕರ ಬೃಹತ್ ರ‍್ಯಾಲಿ ಸಿಐಟಿಯು ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆಯಿತು. ನ್ಯಾಯಬದ್ಧವಾದ ಕನಿಷ್ಠ ಕೂಲಿ ನಿಗದಿ ಮತ್ತು ಜಾರಿ, ಉದ್ಯೋಗ ಭದ್ರತೆ, ಜೀವನ ಭದ್ರತೆ ರ‍್ಯಾಲಿಯ ಪ್ರಮುಖ ಆಗ್ರಹವಾಗಿತ್ತು. ಒಂದು ವರದಿ.

ಬದುಕುಳಿಯಲು ಕನಿಷ್ಟ ವೇತನಕ್ಕಾಗಿ ಅಸಂಘಟಿತ ಕಾರ್ಮಿಕರ ವಿಧಾನಸೌಧ ಚಲೋ

ಕೆ.ಶಾಂತಕುಮಾರಿ

ಫೆ.5 ಬೆಂಗಳೂರು ಹೃದಯಭಾಗದಲ್ಲಿ ಕೆಂಬಾವುಟ ಹಿಡಿದ ಸಾವಿರಾರು ಕಾರ್ಮಿಕರು. ಅದರಲ್ಲೂ ಬೆವರ ಸುರಿಸಿ ದುಡಿವ ಅತ್ಯಂತ ಕೆಳವರ್ಗದ ಅಸಂಘಟಿತ ಕಾರ್ಮಿಕರು ತಮ್ಮ ಬೇಡಿಕೆಗಳ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಸಿಐಟಿಯು ನೇತೃತ್ವದಲ್ಲಿ ಸಾಗಿದರು.

ಬದುಕುಳಿಯುವ ಹಕ್ಕಿಗಾಗಿ, ಕನಿಷ್ಠ ಕೂಲಿಗಾಗಿ 30 ಜಿಲ್ಲೆಗಳಿಂದ ತೊರೆಯಾಗಿ ಹರಿದು ನದಿಯಾಗಿ ಬೆಂಗಳೂರು ನಗರದ ವಿಧಾನಸೌಧ ಚಲೋದಲ್ಲಿ ಪಾಲ್ಗೊಂಡರು. ರಾಜ್ಯದಲ್ಲಿ ದುಡಿಯುತ್ತಿರುವ ಒಂದೂವರೆ ಕೋಟಿ ಕಾರ್ಮಿಕರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ದೇಶದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸರ್ಕಾರದ ಅವೈಜ್ಞಾನಿಕ ನೀತಿಗಳಿಂದ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದಾಗಿ ದುಡಿಯುವ ಜನ ತತ್ತರಿಸುತ್ತಿದ್ದಾರೆ. ಕನಿಷ್ಠ ಕೂಲಿ ಕಾರ್ಮಿಕ ಕಾನೂನನ್ನು ಅನ್ವಯಿಸಬೇಕೆಂದು ಈ ಬಾರಿಯ ಬಜೆಟ್‌ನಲ್ಲಿ ಬೇಡಿಕೆ ಈಡೇರಿಸದೆ ಬೇಡಿಕೆಗಳನ್ನು ಈ ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದಶಲಕ್ಷ ಸಹಿ ಸಂಗ್ರಹ

ಅಸಂಘಟಿತ ಕ್ಷೇತ್ರಗಳಾದ ಬೀಡಿ, ಕಟ್ಟಡ, ಹಮಾಲಿ, ಕೈಮಗ್ಗ, ಗಾರ್ಮೆಂಟ್ಸ್, ಅಗರಬತ್ತಿ, ಕಾರ್ಪೋರೇಷನ್, ಮುನಿಸಿಪಾಲಿಟಿ, ಪಂಚಾಯಿತಿ ವಲಯ, ಅಂಗನವಾಡಿ ನೌಕರರು, ಅಕ್ಷರದಾಸೋಹ ನೌಕರರು, ಮಿಲ್, ಗಣಿಗಳಲ್ಲಿ ಸಾರಿಗೆಯಲ್ಲಿ, ಮನೆಗೆಲಸದವರು, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ, ಬೀದಿ ಬದಿ ವ್ಯಾಪಾರಿಗಳು ಹೀಗೆ ಹೆಸರಿಸಲು ಆಗದೆಯಿರುವಂತಹ ಅನೇಕ ಸಾವಿರಾರು ಕ್ಷೇತ್ರಗಳಲ್ಲಿ ಕಾರ್ಮಿಕರು ಹಗಲಿರುಳು ದುಡಿಯುತ್ತಿದ್ದಾರೆ. ಒಪ್ಪೊತ್ತಿನ ಕೂಳಿಗಾಗಿ, ಒಂದಿಷ್ಟು ಸೂರಿಗಾಗಿ ಅತ್ಯಂತ ಕರುಣಾಜನಕ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇವರೆಲ್ಲರ ಸಹಿ 30 ಜಿಲ್ಲೆಗಳಿಂದ ಸಂಗ್ರಹವಾಗಿವೆ.

ಹಿಂದಿನ ಸಿಐಟಿಯು ಕಾರ್ಮಿಕ ಸಂಘಟನೆಯ ಹೋರಾಟದ ಫಲವಾಗಿ ಕೇಂದ್ರ ಮತ್ತು ರಾಜ್ಯದಲ್ಲಿ 'ಅಸಂಘಟಿತ ಕ್ಷೇತ್ರದ ಕಲ್ಯಾಣ ಕಾರ್ಯಕ್ರಮಗಳ' ಕರಡನ್ನು ಪ್ರಕಟಿಸಿತ್ತು. ಇದರಿಂದ ಕನಿಷ್ಠ ಕಾರ್ಮಿಕ ಕಾನೂನುಗಳು ಅನ್ವಯವಾಗದೆಯಿರುವುದರಿಂದ ಕನಿಷ್ಠ ಕೂಲಿ ಸಮಗ್ರ ಮಸೂದೆಗಾಗಿ ಸಿಐಟಿಯು ಒತ್ತಾಯಿಸುತ್ತದೆ. ಕಾರ್ಮಿಕರ ಪ್ರಮುಖ 13 ಬೇಡಿಕೆಗಳನ್ನು ಒತ್ತಾಯಿಸಿ ಜನವರಿಯಿಂದ ದಶಲಕ್ಷ ಸಹಿ ಸಂಗ್ರಹಿಸಿದೆ. ಈ ಮೂಲಕ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಸಮಸ್ತ ಜನತೆಯ ಪರವಾಗಿ ಸಿಐಟಿಯು ಹೋರಾಡುತ್ತಾ ಬರುತ್ತಿದೆ.

ಸಮ ಸ್ವರೂಪದ ಕನಿಷ್ಠ ಕೂಲಿಗಳನ್ನು ನಿಗದಿಮಾಡಬೇಕು. ಕಾಂಟ್ರಾಕ್ಟ್ ಕಾರ್ಮಿಕ[illegible] ನಿಯಮಿತಗೊಳಿಸಬೇಕು. ಎಲ್ಲಾ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ವಿಸ್ತರಿಸಬೇಕೆಂದು ದಶಲಕ್ಷ ಸಹಿ ಮಾಡಲಾಗಿದೆ.

ಈ ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಬದುಕುಳಿಯಲು ಕಾರ್ಮಿಕರಿಗೆ 3196 ಪಾಯಿಂಟ್‌ಗಳ ಸರಾಸರಿ ರಾಜ್ಯ ಬಳಕೆದಾರ ಬೆಲೆ ಸೂಚ್ಯಂಕದಲ್ಲಿ ಮಾಸಿಕ ರೂ.6,000, ದಿನಕ್ಕೆ 231 ರೂ ಕೊಡಬೇಕಾಗುತ್ತದೆ. ಹಾಗೆಯೇ ಪಟ್ಟಣ-ನಗರಗಳಲ್ಲಿ ದುಡಿಯುವ ಕಾರ್ಮಿಕರಿಗೆ 10,000 ರೂ. ಕನಿಷ್ಠ ಕೂಲಿ ನಿಗದಿಮಾಡಬೇಕೆಂದು ಸಿಐಟಿಯು ಒತ್ತಾಯಿಸಿದೆ.

ಹಿನ್ನೆಲೆ:

ಕೇಂದ್ರ ಸರ್ಕಾರ ಕನಿಷ್ಠ ಕೂಲಿ ಶಾಸನವನ್ನು 1948ರಲ್ಲಿ ರಚಿಸಿತು. 1957ರಲ್ಲಿ 15ನೇ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ 'ಅಗತ್ಯ ಆಧಾರಿತ ಕನಿಷ್ಠ ಕೂಲಿ' ಹೇಗಿರಬೇಕೆಂದು ನಿರ್ಣಯಿಸಿದೆ. 198[illegible] ಸಿಐಟಿಯು ಎಲ್ಲಾ ಉದ್ಯೋಗಿಗಳಿಗೆ ಕನಿಷ್ಠ ಕೂಲಿಯನ್ನು ಹೆಚಿಸಿ ಪರಿಷ್ಕರಿಸಬೇಕೆಂದು ಒತ್ತಾಯಿಸಿ ಚಳುವಳಿ ನಡೆಸಲು ನಿರ್ಧರಿಸಲಾಯಿತು. ಈ ಕರೆಯ ಮೇರೆಗೆ ರಾಜ್ಯಾದ್ಯಂತ ಬೃಹತ್ [illegible]ನು ಪ್ರದರ್ಶನಗಳು ನಡೆದವು. ಇದಕ್ಕೆ ವ್ಯಾಪಕ ಪ್ರಚಾರವೂ ದೊರಕಿತು.

1989ರಲ್ಲಿ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಅಸಂಘಟಿತ ಕಾರ್ಮಿಕರ ಒಂದು ರಾಜ್ಯ ಮಟ್ಟದ ಸಮಾವೇಶ ನಡೆಯಿತು. ಹದಿನೈದು ದಿನಗಳ ಕಾಲ ಜೀಪ್ ಜಾಥಾ ನಡೆಯಿತು. ಆಗಸ್ಟ್ 28,29,30 ರಂದು ಮುಷ್ಕರ ನಡೆಸಿ ಕೊನೆಯದಿನ 'ಭಾರತ್ ಬಂದ್' ನಡೆಯಿತು.

1988ರಲ್ಲಿ ದೆಹಲಿ ಸುತ್ತಮುತ್ತಲ ಪ್ರದೇಶಗಳಲ್ಲಿ 1050ರೂ ಕನಿಷ್ಠ ಕೂಲಿಗಾಗಿ 14 ಲಕ್ಷ ಕಾರ್ಮಿಕರು ನಡೆಸಿದ ಹೋರಾಟ ಯಶಸ್ವಿ ಕಂಡಿತು. ಇದರಿಂದ ದೆಹಲಿ ಸರ್ಕಾರ 750 ರೂ. ಕನಿಷ್ಠ ಕೂಲಿ ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಹರಿಯಾಣದಲ್ಲಿ 800 ರೂ. ಪ್ರಕಟಿಸಲಾಯಿತು. ಪಂಜಾಬಿನಲ್ಲಿ ಹೋರಾಟ ನಡೆಸ'ಲಾಯಿತು. 1983 ರಲ್ಲಿ ಕರ್ನಾಟಕದಲ್ಲಿ ನಡೆದ ಮುಷ್ಕರಗಳು ಇದಕ್ಕೆ ಸ್ಫೂರ್ತಿಯಾಗಿದ್ದವು. 1992 ರಲ್ಲಿ ಪಶ್ಚಿಮ ಬಂಗಾಳದ ಪಣಿಹಾಟಿಯಲ್ಲಿ ಅಖಿ[illegible] ಭಾರತ ಅಸಂಘಟಿತ ಕಾರ್ಮಿಕರ ಸಮಾವೇಶ ನಡೆಯಿತು. 1993 ರಲ್ಲಿ ಜುಲೈ ಅಸಂಘಟಿತ

ಪುಟ10ಕ್ಕೆ



ವೇದಿಕೆಯಲ್ಲಿ ಜಿ.ವಿ.ಶ್ರೀರಾಮರೆಡ್ಡಿ, ಬಿ.ಮಾಧವ, ಪ್ರಸನ್ನಕುಮಾರ್, ಎಂ.ಬಿ.ನಾಡಗೌಡ, ಗೋಪಾಲಗೌಡ ಇತರರು

ಕನಿಷ್ಟ ಕೂಲಿ ಏಕೆ ಬೇಕು ?

ಬಡತನ ಮಟ್ಟ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಯೊಬ್ಬರಿಗೆ ಪ್ರತಿದಿನ 2400 ಕ್ಯಾಲರಿ, ನಗರ ಪ್ರದೇಶಗಳಲ್ಲಿ 2100 ಕ್ಯಾಲರಿಗಳಷ್ಟು ಆಹಾರಕ್ಕೆ ಆಗುವ ಖರ್ಚು ಎಂದು ನಿರ್ಧರಿಸಲಾಗಿದೆ. ಆದ್ದರಿಂದ ಬಡತನ ಮಟ್ಟದ ಅಗತ್ಯಗಳನ್ನು ಆಧರಿಸಿ ಲೆಕ್ಕಚಾರವನ್ನು 33.33 (2100 ಕ್ಯಾಲರಿಗೆ 700 ಕ್ಯಾಲರಿ ಸೇರಿಸಬೇಕು) ಹೆಚ್ಚಿಸಿದರೆ ಮಾತ್ರ ಬದುಕುಳಿಯುವ ಮಟ್ಟದ ಲೆಕ್ಕಾಚಾರ ಮಾಡಬಹುದು. ಹೀಗೆ ಅಧಿಕೃತ ಮಟ್ಟದ (3 ಯೂನಿಟ್‌ಗಳಂತೆ) ಕೂಲಿ ತಿಂಗಳಿಗೆ 628.50ರೂ. ಅಥವಾ ದಿನಕ್ಕೆ 24.17 ರೂ. ಎಂಬುದನ್ನು ಶೇ. 33.33 ಹೆಚ್ಚಿಸಿದರೆ ಮಾತ್ರ 2800 ಕ್ಯಾಲರಿಗಳ ಆಹಾರ ಸೇವನೆಗೆ ಅಗತ್ಯವಾದ ಕೂಲಿ ಎಷ್ಟೆಂದು ಲೆಕ್ಕ ಹಾಕಬಹುದು.

ಇದು 967 ಪಾಯಿಂಟುಗಳಲ್ಲಿ ದಿನಕ್ಕೆ 32.24 ರೂ. ಆಗುತ್ತದೆ. ಬೆಲೆಯೇರಿಕೆಯನ್ನು ಸರಿದೂಗಿಸಲು ಪ್ರತಿ ಪಾಲುದಾರರಿಗೆ 3.33 ಪೈಸೆ(ಸಮೀಪದ ಅರ್ಧ ಪೈಸೆಗೆ ಲೆಕ್ಕ ಹಾಕಿದರೆ 3.5 ಪೈಸೆ) ಹೆಚ್ಚಳ ನೀಡಬೇಕು. ಇದು 1309 ಪಾಯಿಂಟುಗಳ ಮಟ್ಟದಲ್ಲಿ (1992ರಲ್ಲಿ ಕರ್ನಾಟಕದಲ್ಲಿ ಸರಾಸರಿ ಬೆಲೆ ಮಟ್ಟ) ದಿನಕ್ಕೆ 44 ರೂ. ಅಥವಾ ತಿಂಗಳಿಗೆ 1144 ಆಗುತ್ತದೆ (ತುಟ್ಟಿ ಭತ್ಯೆ ದರ 3.33 ಪೈಸೆಯಂತೆ ಲೆಕ್ಕ ಹಾಕಿದರೆ 43.22 ರೂ.ಆಗುತ್ತದೆ. ಪೂರ್ಣ ರೂಪಾಯಿಗಳಲ್ಲಿ ಇದನ್ನು 44 ರೂ. ಎಂದು ತೆಗೆದುಕೊಂಡಿದೆ.) 1309ಪಾಯಿಂಟ್‌ಗಳಿಗಿಂತ ಹೆಚ್ಚಿಗೆ ಬೆಲೆ ಯೇರಿಕೆಗೆ ಪಾಯಿಂಟಿಗೆ 3.5 ಪೈಸೆ ಕೊಡಬೇಕೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಇದೆಲ್ಲ ಬಡತನ ಮಟ್ಟದ ಕೂಲಿಯ ಮಟ್ಟದ ಲೆಕ್ಕಾಚಾರ. ನಾವು ಇದನ್ನು 2100 ರಿಂದ 2900 ಕ್ಯಾಲರಿ ಎಂದು ಅಂದಾಜು ಮಾಡಿ ಸ್ವಲ್ಪ ಸುಧಾರಿಸಿದ್ದೇವಷ್ಟೇ! ಗ್ರಾಮೀಣ ಪ್ರದೇಶಗಳಲ್ಲೂ ಈ ಇದರ ಕಡಿಮೆಯಾಗಿಲ್ಲ. ಏಕೆಂದರೆ ಇಲ್ಲಿ ಸಾಮಾನ್ಯವಾಗಿ ದೈಹಿಕ ಕೆಲಸವೇ. ಇದಕ್ಕೆ ಬೇಕಾಗುವ ಕ್ಯಾಲರಿ ಐಸಿಎಂಆರ್ ಪ್ರಕಾರವೇ 3,200 ಈ ಲೆಕ್ಕಾಚಾರದಲ್ಲಿ ಇತರ ಅಗತ್ಯವನ್ನು ಸಾಕಷ್ಟು ಗಮನಕ್ಕೆ ತೆಗೆದುಕೊಂಡಿಲ್ಲ ಎಂಬುದನ್ನು ಗಮನಿಸಬೇಕು. ಅವರನ್ನು ಪರಿಗಣಿಸದೆ ಬದುಕುಳಿಯುವ ಮಟ್ಟ ಸುಧಾರಿಸಲು ಸಾಧ್ಯವಿಲ್ಲ. ಆದ್ದರಿಂದ ಕನಿಷ್ಠ ಕೂಲಿ ಬೇಕು.



ಸಭೆಯನ್ನುದ್ದೇಶಿಸಿ ವಿಜೆಕೆ ನಾಯರ್ ಮಾತು

ದುಡಿಯುವವರ ದುಗುಡ

'ಏ ಕಿತ್ತಾಕ್ಕೋ ಅವನ್ನ ಅಂತಾರೆ'

- ಚನ್ನಪ್ಪ, ಗ್ರಾಮಪಂಚಾಯ್ತಿ ನೌಕರ

"ನಾನು ಚಿಕ್ಕಬಳ್ಳಾಪುರದ ಅಂಗ್ರೇಕನಹಳ್ಳಿ ಪಂಚಾಯ್ತಿಯಲ್ಲಿ ನೀರಗಂಟಿ. 20 ವರ್ಷದಿಂದ ಕೆಲಸ ಮಾಡ್ತಾ ಇದ್ದೇನೆ. ಒಂದು ಸಾವಿರ ರೂಪಾಯಿ ಸಂಬಳ. ಅದು ಆರು ತಿಂಗಳಿಗೋ, ಮೂರು ತಿಂಗಳಿಗೋ ಕೊಡ್ತಾರೆ. 10 ಜನ ಇದ್ದೀವಿ ನಮ್ಮನೆಲಿ. ಇವರು ಕೊಡೋ ಸಂಬಳ ಬೆಳಿಗ್ಗೆ ಮಕ್ಕಳಿಗೆ ಕಾಪಿ ನೀರಿಗೆ ಸಾಕಾಗಲ್ಲ.

ಕರೆಂಟ್ ಇರಲ್ಲ. ರಾತ್ರಿಯಲ್ಲಿ ಕರೆಂಟು ಬರೋದನ್ನ ಕಾಯ್ದು ನೀರು ಬಿಡಬೇಕು. ಸಂಬಳ ಕೇಳಿದರೆ ಪಂಚಾಯ್ತಿಗೆ ಬರೋ ದುಡ್ಡು ಮೋಟಾರು ಕೆಟ್ಟು ಹೋದರೆ ರಿಪೇರಿಗೆ ಆಗುತ್ತೆ. ಯಾವುದಾದರೂ ಅನುದಾನ ಬರಲಿ ನೋಡೋಣ ಅಂತಾರೆ. ಇನ್ನೂ ಮಾತಾಡಿದರೆ '...............ಜಾಸ್ತಿ ಮಾತಾಡ್ತಾನೆ. ಏ ಕಿತ್ತಾಕೋ ಅವನ್ನ' ಅಂತಾರೆ."

'ಸಂಬಳ ಟೀ ಬೊಂಡ ಖರ್ಚಿಗೂ ಸಾಲಲ್ಲ'

- ಸಿದ್ದರಾಮೇಗೌಡ, ದುಗ್ಗಳ್ಳಿ ಗ್ರಾಮ ಪಂಚಾಯ್ತಿ ನೌಕರ, ನಂಜನಗೂಡು ತಾ.

"ಮೊದಲಿಗೆ ತಿಂಗಳಿಗೆ 300 ರೂಪಾಯಿ ಸಂಬಳ ಕೊಡ್ತಾ ಇದ್ದರು. ಈಗ 500 ರೂಪಾಯಿ ಮಾಡಿದ್ದಾರೆ. ಅವರು ಕೊಡುವುದು ನಮ್ಮ ಟೀ ಬೊಂಡ ಖರ್ಚಿಗೂ ಆಗುವುದಿಲ್ಲ. ನ್ಯಾಯ ಬೆಲೆ ಅಂಗಡೀಲಿ ಅಕ್ಕಿ ಮೂರು ಕಾಲು ರೂಪಾಯಿ ಕೆ.ಜಿ. ಇದೆ. 15 ಕೆ.ಜಿ. ಕೊಡ್ತಾರೆ. 4 ಜನ ಮನೇಲಿದ್ದೀವಿ. 15 ದಿನಾನೂ ಬರಲ್ಲ. ನೆಂಟರಿಷ್ಟರು ಬಂದರೆ ಸಾಲ ಮಾಡಬೇಕು. ಸಾಲದ ಬಡ್ಡಿ ಕಟ್ಟಕ್ಕಾಗಲ್ಲ.

ಕೆರೆ ಅಂಚು, ಕೆರೆ ಅಂಗಳ, ರಸ್ತೆ ಬದಿ, ಸ್ಮಶಾನದಲ್ಲಿ ಎಲ್ಲೆಲ್ಲೋ ಬೋರ್‌ವೆಲ್ ಹಾಕಿರುತ್ತಾರೆ. ಮೋಟಾರು ಚಾಲೂ ಮಾಡೋದಕ್ಕೆ ರಾತ್ರಿ ಹೊತ್ತಲ್ಲೂ ಹೋಗಬೇಕು. ಟಾರ್ಚ್ ಕೊಡ್ತೀವಿ, ದೂರ ಓಡಾಡಬೇಕಾದವರಿಗೆ ಬೈಸಿಕಲ್ ಕೊಡುತ್ತೇವೆ ಅಂದಿದ್ದರು. ಯಾವುದನ್ನು ಕೊಡಲಿಲ್ಲ. ವಾಟರ್‌ಮನ್‌ಗೆ ಖಾಯಂ ಇಲ್ಲ ಅನ್ನುತ್ತಾರೆ. ಒಂದಲ್ಲ ಒಂದು ದಿನ ಏನಾದರೂ ಆಗುತ್ತೆ ಅಂತ ಹೋರಾಟ ಮಾಡ್ತಾ ಇದ್ದೀವಿ."

'ವಯಸ್ಸಾದವರನ್ನು ತಗೀತರಂತ'

- ಹಾಜಿಯಾ.ಬಿ.ನಾಕೇದರ್, ಬಾಲವಾಡಿ ಸಹಾಯಕಿ, ಹಳಿಯಾಳ, ಅಫಜಲ್‌ಪುರ, ಗುಲ್ಬರ್ಗಾ

"50 ರೂಪಾಯಿ ಸಂಬಳಕ್ಕೆ 10 ವರ್ಷ ಕೆಲಸ ಮಾಡಿದೆ. ಈಗ ಸಂಬಳ 700 ಕೊಡ್ತಾರ. ವಯಸ್ಸಾದವರನ್ನು ತಗೀತರಂತ. ಚಿಕೂನ್ ಗುನ್ಯಾ ಬಂದು ಕಾಲು ಹಿಡ್ಕೊಂಡೈತಿ. ಹೈರಾಣಾಗಿ ಬಂದೀವ್ರಿ. ನಾವು ಏನು ತಿಂದು ಬದುಕಬೇಕು. ಸಾಯೋಹಂಗ ಮಾಡಬ್ಯಾಡ್ರಿ. ಬದುಕೊಹಾಂಗ ಮಾಡ್ರಿ ಅಂತ ಕೇಳಲಾಕ ಬಂದೀವ್ರಿ."

'15 ತಿಂಗಳಿಂದ ಸಂಬಳ ಇಲ್ಲ'

- ಸಲೀಮಾ, ಬಿ.ಹಳ್ಳಿ ಖೇಡ್, ಬೀದರ್

"ನಾವು ಪಂಚಾಯ್ತಿ ನೌಕರರು 14 ಮಂದಿ 1900 ರೂ. ಸಂಬಳ ನಮಗೆ. 15 ತಿಂಗಳಿಂದ ಸಂಬಳ ಕೊಟ್ಟಿಲ್ಲ. ಅದಕ್ಕೆ ಬೆಂಗಳೂರಿಗೆ ಬಂದ್ರೀವ್ರಿ."

ಬಿಲ್ಲಿನಿಂದ ಬಾಣ ಹೊರಟಂತೆ ಹೊರಟರು ಕಾರ್ಮಿಕರು

ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಹೊರಡುವುದು 12 ಗಂಟೆಗೆ ಅನ್ನುವ ಮಾಹಿತಿ ಇತ್ತು. ಆದರೆ 11 ಗಂಟೆಗೆ ಅಲ್ಲಿಗೆ ಬಂದರೆ ಆಗಲೇ ರೈಲ್ವೆ ನಿಲ್ದಾಣದ ಮುಂಭಾಗ ಜಾಗದಲ್ಲೆಲ್ಲಾ ಜಮಾಯಿಸಿದ್ದಾರೆ. ಬಿಲ್ಲಿನಿಂದ ಹೊರ ಹೋಗಲು ಸಿದ್ಧವಾಗಿ ನಿಂತ ಬಾಣದಂತೆ ಅವರು ಹಾರಿ ಮುನ್ನುಗ್ಗಲು ತಯಾರಾಗಿ ನಿಂತುಬಿಟ್ಟಿದ್ದಾರೆ. ಸ್ವಯಂ ಸೇವಕರು, ಮುಖಂಡರು ಹೊರಡುವುದಕ್ಕೆ ಇನ್ನೂ ಸಮಯ ಇದೆ, ಅಂತ ಅವರನ್ನು ಕೂರಿಸುವುದಕ್ಕೆ ಬಹಳ ಶ್ರಮವನ್ನೇ ಹಾಕಬೇಕಾಗುತ್ತಿತ್ತು. ಮೆರವಣಿಗೆ ಹೊರಟಾಗ ಅವರು ಹೊರಟದ್ದು ಬಿಲ್ಲಿನ ಬಾಣ ಬಿಟ್ಟಂತೆ. ಅವರ ಸಮಸ್ಯೆಗಳ ತೀವ್ರತೆಯೇ ಅಂಥದ್ದು.

ಗ್ರಾಮ ಪಂಚಾಯ್ತಿ ನೌಕರರು, ಅದರಲ್ಲಿ ಬಿಲ್‌ಕಲೆಕ್ಟರರು, ನೀರಗಂಟಿಗಳು, ಕಸ ಗುಡಿಸುವವರೂ, ಕಛೇರಿಯಲ್ಲಿ ಕೆಲಸ ಮಾಡುವವರು ಹೀಗೆ ತಮ್ಮ ಸಮಸ್ಯೆಗಳ ಗಂಟು ಮೂಟೆ ಹೊತ್ತು ಬಂದವರು ಎಷ್ಟೋ ಬಗೆಯ ಉದ್ಯೋಗಿಗಳು. 10-15 ತಿಂಗಳಾದರೂ ಸಂಬಳವೇ ಸಿಗದವರು. ನಿಕೃಷ್ಟ ಸಂಬಳ ಪಡೆಯುವವರು, ಖಾಯಂ ಅಲ್ಲದವರು. ಇನ್ನು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯದಾದರೂ ಬೇರೆ ಕತೆಯಲ್ಲ. ಅದು ಅಷ್ಟೇ. ವಿಪರೀತ ದುಡಿಮೆ. ಜೀವನ ಭದ್ರತೆ ಇಲ್ಲ.



ಸರ್ಕಾರದ ಕನಿಷ್ಠ ವೇತನವೇ ಕಡಿಮೆ. ಹೋಗಲಿ ಅದಾದರೂ ಜಾರಿಯಲ್ಲಿದೆಯಾ? ಉಹುಂ. ಇಲ್ಲ. ಇನ್ನು ಕಟ್ಟಡ ಕಾರ್ಮಿಕರು. ಕೆಲಸಕ್ಕೆ ಹೋದ ಕಾರ್ಮಿಕರು ಮನೆಗೆ ವಾಪಸ್ ಹೋದರೆ ಅದೇ ಒಂದು ಭಾಗ್ಯ. ತಂಗಳನ್ನವನ್ನು ತಿನ್ನಲು ಸಾಧ್ಯವಾಗದಂತಹ ನಿಕೃಷ್ಟ ವೇತನ ಪಡೆಯುವ ಬಿಸಿಯೂಟ ಕಾರ್ಮಿಕರು, ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು ಇವರೆಲ್ಲಾ ಅಸಂಘಟಿತ ವಲಯದ ಕಾರ್ಮಿಕರು ಬೆಂಗಳೂರಿಗೆ ಬಂದು ನೆರೆದರು. ರೈಲ್ವೆ ನಿಲ್ದಾಣದ ಸುತ್ತಮುತ್ತಲಲ್ಲಿ, -ಜೇನುಗೂಡಿನ ಬಳಿ ಜೇನ್ನೊಣಗಳು ಮುತ್ತಿದಂತಹ ಚಿತ್ರ.

ಮೆರವಣಿಗೆಯಲ್ಲಿ ಸಾಲಿಲ್ಲ. ಅದು ನದಿಯ ಹರಿವಿನಂತೆ ತುಂಬಿ ಹರಿಯಿತು. ಸಹಸ್ರಾರು ಕಾರ್ಮಿಕರು. ಖೋಡೆ ವೃತ್ತ, ಆನಂದರಾವ್ ವೃತ್ತ, ಮೇಲ್ಸೆತುವೆ ದಾಟಿ, ಮುಂದೆ ಬಂದರೆ ಮಹಾರಾಣಿ ಕಾಲೇಜಿನ ಬಳಿ ಬಲ ತಿರುವು. ಹಳೇ ಸೆಂಟ್ರಲ್ ಜೈಲಿನ ಹಿಂಭಾಗದಲ್ಲಿ ಬಹಿರಂಗ ಸಭೆ. ಕಾಳಿದಾಸ ಸರ್ಕಲ್ ಬಳಿ ವೇದಿಕೆ. ಇತ್ತ ಮಹಾರಾಣಿ ಕಾಲೇಜು ಶೇಷಾದ್ರಿ ರಸ್ತೆಯವರೆಗೆ ಭರ್ತಿ ಜನ. ಸಾಸಿವೆ ಕಾಳು ಎರಚಿದರೂ ಕೆಳಗೆ ಬೀಳುವುದಿಲ್ಲವೇನೋ ಎಂಬಂತೆ ಜನ. ಕೊನೆಯಲ್ಲಿ ಕುಳಿತವರಿಗೆ ಮೊದಮೊದಲು ಭಾಷಣವೇ ಕೇಳುತ್ತಿಲ್ಲ. ಸಂಘಟಕರ ನಿರೀಕ್ಷೆ ಮೀರಿ ಜನ ಹರಿದು ಬಂದಿದ್ದಾರೆ. ಆ ಜನ ಕುಳಿತು ಪರಿಸ್ಥಿತಿ ಸ್ವಲ್ಪ ತಿಳಿಯಾದ ಮೇಲೆ ಭಾಷಣ ಕೇಳುವಂತಾಯಿತು. ಶಿಸ್ತುಬದ್ಧವಾದ ಸಭೆ. ಎಲ್ಲರ ಮಾತುಗಳು ಮುಗಿಯುವವರೆ ಜನ ಕದಲಲಿಲ್ಲ. ಉಹೂಂ. ವೇದಿಕೆಯ ಆ ತುದಿಯಿಂದ ಮತ್ತೊಂದು ತುದಿಯವರೆಗೆ ಯಾವ ಹಂತದಲ್ಲೂ ಯಾವ ಭಾಗದಲ್ಲೂ ಸ್ಥಳ ಖಾಲಿ ಖಾಲಿ ಕಾಣಲಿಲ್ಲ. ಜನ ಮುಖಂಡರ ಮಾತನ್ನು ಕಿವಿಯಾನಿಸಿ ಕೇಳಿದರು. ನಡುವೆ ಚಪ್ಪಾಳೆ, ಸರ್ಕಾರದ ವಿರುದ್ಧ ಧಿಕ್ಕಾರದಂತಹ ಘೋಷಣೆಗಳನ್ನು ಬಿಟ್ಟರೆ ಬೇರೆ ಗದ್ದಲವೂ ಇಲ್ಲ. ಐಸ್‌ಕ್ಯಾಂಡಿ ಬಿಟ್ಟರೆ ಕಡಲೆ ಸೌತೆಕಾಯಿ ಮಾರುವವರು ಹೆಚ್ಚು ಕಾಣಲಿಲ್ಲ. ಜನಕ್ಕೆ ಆ ಕಡೆ ಹೆಚ್ಚು ಗಮನವೂ ಇಲ್ಲ. ಯಾರಾದರೂ ವ್ಯಾಪಾರಿಗಳು ಅಡ್ಡ ನಿಂತರೆ ಜನ ಪಕ್ಕಕ್ಕೆ ಸರಿಯಲು ಒತ್ತಾಯಿಸುತ್ತಾರೆ. ತಮ್ಮ ಎದೆಯಾಳದ ನೋವುಗಳಿಗೆ ದನಿಕೊಡುವ ಮುಖಂಡರ ಮಾತು ಕೇಳಬೇಕಿದೆ. ಅವರ ಭಾವ ಕಾಣಬೇಕಿದೆ.

'ಸ್ವಾತಂತ್ರ್ಯ ಪಾರ್ಕ್' ಸಂಕೇತ

ಸಭೆಯು ಎತ್ತರದ ಜೈಲಿನ ಗೋಡೆಯ ನೆರಳಿನಲ್ಲಿ ನಡೆಯಿತು. ಒಂದೊಮ್ಮೆ ಬ್ರಿಟಿಷರು ಕಟ್ಟಿದ ಜೈಲಿನ ಜಾಗ ಈಗ ಬೃಹತ್ 'ಸ್ವಾತಂತ್ರ್ಯ ಪಾರ್ಕ್' ಆಗುತ್ತಿದೆ. ನೂರಕ್ಕೂವರ್ಷ ಹೆಚ್ಚು ದಾಟಿದ್ದು, ಅಲ್ಲಲ್ಲೇ ಹಲವು ಬಾರಿ ಕುಸಿದು ಬಿದ್ದಿರುವ ಶಿಥಿಲ ಕಾಂಪೌಂಡ್ ಬಿದ್ದ ಜಾಗದಲ್ಲಿ ಮಾತ್ರ ಹೊಸ ಗೋಡೆ ಕಟ್ಟಿ, ತೇಪೆ ಹಚ್ಚಿ ಸುಣ್ಣಬಣ್ಣ ಮಾಡಲಾಗುತ್ತಿದೆ. ನಮಗೆ ಸಿಕ್ಕ ಸ್ವಾತಂತ್ರ್ಯಕ್ಕೆ ಇದು ಸಂಕೇತದಂತೆಯೇ ಇದೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂತು. ಜನರಿಗೆ ಉತ್ತಮ ಹಕ್ಕು ದೊರಕಲಿಲ್ಲ. ಕೊನೆಗೆ ಕನಿಷ್ಠ ವೇತನ ಕೂಡ ದೊರೆಯದೆ ಅದಕ್ಕಾಗಿ ಸರ್ಕಾರಗಳೊಂದಿಗೆ ಬಡಿದಾಡಬೇಕಾದ ಪರಿಸ್ಥಿತಿ ದುಡಿಯುವ ವರ್ಗದ್ದು. ಜೈಲಿನ ಗೋಡೆಗೇ ತೇಪೆ ಹಚ್ಚಿ ಸ್ವಾತಂತ್ರ್ಯ ಪಾರ್ಕ್ ಗೋಡೆ ಎನ್ನುತ್ತಿರುವಾಗ ಈ ಸ್ವಾತಂತ್ರ್ಯದ ಗೋಡೆ ಯಾವ ಕಾರ್ಮಿಕರ ಮೇಲೆ ಬೀಳುತ್ತದೋ ಎಂಬ ಆತಂಕ ಸೂಕ್ಷ್ಮವಾಗಿ ಇದನ್ನು ಗಮನಿಸಿದವರಿಗೆ ಕಾಡದೇ ಇರಲಿಲ್ಲ.

ಏನಾಗಿದೆ ಈ ಮಾಧ್ಯಮಗಳಿಗೆ ?

ಕಟ್ಟಡಗಳು ಕುಸಿದು ಕಾಂಕ್ರೀಟು ಸಮಾಧಿಯಾದರೂ, ತಳಪಾಯದ ಮಣ್ಣು ಕುಸಿದು ಮಣ್ಣು ಸಮಾಧಿಯಾದರೂ ಸೇತುವೆ ಕುಸಿದು ಜಲ ಸಮಾಧಿಯಾದರೂ, ಕಾರ್ಮಿಕರ ಅವಲಂಬಿತರಿಗೆ ಸೂಕ್ತ ಪರಿಹಾರ ಸಿಗುತ್ತಿಲ್ಲ. ಕಟ್ಟಡ ಕಾರ್ಮಿಕರಿಗೆ. ಹತ್ತೆಂಟು ತಾಸು ದುಡಿದರೂ ಕನಿಷ್ಠ ಕೂಲಿ ದೊರೆಯುತ್ತಿಲ್ಲ. ಅಂಗನವಾಡಿ, ನೌಕರರು ಸಹಾಯಕರಿಗೆ ಕನಿಷ್ಟ ವೇತನ ಸಿಗುತ್ತಿಲ್ಲ. 10-15 ತಿಂಗಳುಗಳಿಂದ ಸಂಬಳವೇ ಇಲ್ಲದೆ ದುಡಿಯಬೇಕಾದ ಪರಿಸ್ಥಿತಿ ಹಲವು ಪಂಚಾಯ್ತಿಗಳಲ್ಲಿ ಪಂಚಾಯ್ತಿ ನೌಕರರಿಗೆ. ಇಂತಹ ಅಸಂಘಟಿತ ಕಾರ್ಮಿಕರೂ ಕಮಾಲಿಗಳು ಎಲ್ಲಾ ಸೇರಿ 20-30 ಸಾವಿರ ಜನ ನಮ್ಮ ನೋವು ತೋಡಿಕೊಳ್ಳಲು ಬೆಂಗಳೂರಿಗೆ ಬಂದರೆ ನಮ್ಮ ಮಾಧ್ಯಮಗಳಿಗೆ ಅದೆಲ್ಲಾ ಒಂದು ಸುದ್ದಿಯೇ ಅಲ್ಲ. ಪತ್ರಿಕೆಗಳು, ದೂರದರ್ಶನ ಛಾನಲ್‌ಗಳು ಎರಡರಲ್ಲೂ ಅದೇ ಕತೆ. ಕೆಲವು ಪತ್ರಿಕೆಗಳಿಗೆ ಈ ರ್‍ಯಾಲಿಯಿಂದ ಟ್ರಾಫಿಕ್ ಜಾಮಾಗಿದೆ ಅನ್ನುವುದೊಂದೇ ಸುದ್ದಿ. ಕರ್ನಾಟಕದಲ್ಲಿ ಜನಕ್ಕೆ ಅಷ್ಟೇನೂ ಪರಿಚಯವೇ ಇಲ್ಲದ ಕೇರಳದ ಸಿನಿಮಾ ತಾರೆ ಯಾರೋ ಕೊಲ್ಲೂರು ದೇವಾಲಯದಲ್ಲಿ ಬಂದು ಮದುವೆಯಾದರೆ ಅದು ರಾಜ್ಯವ್ಯಾಪಿ ಎಲ್ಲಾ ಮಾಧ್ಯಮಗಳಲ್ಲೂ ದೊಡ್ಡ ಸುದ್ದಿ.

ಈ ಮಾಧ್ಯಮಗಳಿಗೆ ಸುದ್ದಿ ಅನಿಸಬೇಕಾದರೆ ಯಾರಾದರೂ, ಯಾರನ್ನಾದರೂ ಬಡಿಯಬೇಕು. ಇಲ್ಲ ಇರಿಯಬೇಕು. ಇಲ್ಲ ಬಸ್ಸುಗಿಸ್ಸು ಸುಡಬೇಕು. ಆಗ ಮಾತ್ರ ಪೋಲೀಸರಿಗೂ ಮೊದಲು ಓಡಿ ಬರುತ್ತಾರೆ. ಕ್ರೈಮ್, ಹೊಡೆದಾಟ ಬಡಿದಾಟ, ಇಲ್ಲವಾದರೆ ಇವರಿಗೆ ಅಂತಹ ಘಟನೆಯಲ್ಲಿ ಏನೂ 'ರುಚಿಸುವುದಿಲ್ಲ' ಸಪ್ಪೆ.

ಸುದ್ದಿ ವಾಹಿನಿ ಎಂದು ಹೇಳಿಕೊಳ್ಳುವ ಕೆಲವೊಂದು ಟಿವಿ ಚಾನೆಲ್‌ಗಳಿಗೆ ಸಿನಿಮಾ ಸುದ್ದಿ ಮಸಾಲಾ ಸಮಾಚಾರ ಕೊಡುವುದರಲ್ಲೇ ತಲ್ಲೀನತೆ. ಪಾಪ ಅಸಂಘಟಿತ ಕಷ್ಟ ಕಟ್ಟಿಕೊಂಡು ಇವರುಗಳಿಗೇನಾಗಬೇಕು!! ಹೀಗಿದೆ. ಮಾಧ್ಯಮಗಳ ಧೋರಣೆ.

○ ಆರ್.ರಾಮಕೃಷ್ಣ

ಕೆಂಪಾದವೋ, ಎಲ್ಲಾ ಕೆಂಪಾದವೋ...

30 ಜಿಲ್ಲೆಗಳಿಂದ ತಮ್ಮ ಬದುಕುಳಿಯುವ ಬೇಡಿಕೆಗಳನ್ನು ಹೊತ್ತು ಸುಮಾರು 30,000 ಕ್ಕೂ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಗಾಂಧಿನಗರದ ಹಳೇ ಸೆಂಟ್ರಲ್‌ಜೈಲ್ ಹಿಂಭಾಗ ಅನಿಕೇತನದ ಎದುರು ನಡೆದ ಬಹಿರಂಗಸಭೆ ಅಭೂತಪೂರ್ವವಾಗಿತ್ತು. ಎಲ್ಲೆಲ್ಲೂ ಕೆಂಪು ಕೆಂಪಾದ ಜನಸಾಗರವೇ ಹರಿದಿತ್ತು. ಸಿಐಟಿಯುವಿನ ಸಂಘಟಕರು ಶಿಸ್ತುಬದ್ಧವಾಗಿ ಮೆರವಣಿಗೆಯನ್ನು ತಂದು ಬಹಿರಂಗ ಸಭೆಯಲ್ಲಿ ಕೂಡಿಸಿದ ಪರಿಕಂಡವರಿಗೆ ಆಶ್ಚರ್ಯ, ಶಿಸ್ತಿನ ಸಿಪಾಯಿಯಂತೆ ಕುಳಿತು ಸಿಐಟಿಯು ನಾಯಕರ ಭಾಷಣವನ್ನು ಗದ್ದಲವಿಲ್ಲದೆ ತಮ್ಮ ಆಲಿಸಿದರು.

ಬಹಿರಂಗ ಸಭೆಯನ್ನುದ್ದೇಶಿಸಿ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ:ವಿಜೆಕೆ ನಾಯರ್‌ರವರು ಮಾತನಾಡಿ ಮೂಲೆ-ಮೂಲೆಗಳಿಂದ ಬಂದ ಕಾರ್ಮಿಕರ ಆಶೋತ್ತರಗಳನ್ನು ಈಡೇರಿಸಲು ಹೋರಾಟವೊಂದೇ ಮಾರ್ಗವೆಂದು ಸೂಚಿಸಿ, ನಮ್ಮ ಬೇಡಿಕೆ ಬಜೆಟ್‌ನಲ್ಲಿ ಈಡೇರದಿದ್ದರೆ ಮಾರ್ಚ್‌ನಲ್ಲಿ ಕಾರ್ಮಿಕ ಇಲಾಖೆಗಳಿಗೆ ಮುತ್ತಿಗೆ ಹಾಕುವಂತೆ ಕರೆ ನೀಡಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಬಿ.ಮಾಧವರವರು ಮಾತನಾಡುತ್ತಾ ಮಾಲೀಕ ವರ್ಗದ ಶೋಷಣೆಯ ಸ್ವರೂಪವನ್ನು ತಿಳಿಸುತ್ತಾ ಕಾರ್ಮಿಕರನ್ನು ಸಂಘಟಿತರಾದರೆ ಈ ಶಕ್ತಿಯ ಮುಂದೆ ಎಲ್ಲಾ ಸರ್ಕಾರಗಳು ಮಣಿಯಬೇಕು. ಪಶ್ಚಿಮ ಬಂಗಾಳದ ಮತ್ತು ಕೇರಳ ಸರ್ಕಾರಗಳು ಕಾರ್ಮಿಕರ ಪರವಾದ ಕಾನೂನುಗಳ ರಚನೆ ಬಗ್ಗೆ ತಿಳಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಗಳಾದ ಪ್ರಸನ್ನಕುಮಾರ್‌ರವರು ಮಾತನಾಡುತ್ತಾ ವಿವಿಧ ಜಿಲ್ಲೆಗಳಿಂದ ಸಿಐಟಿಯು ಕರೆಗೆ ಮನ್ನಣೆ ನೀಡಿ ಬಂದ ಕಾರ್ಮಿಕವರ್ಗಕ್ಕೆ ಅಭಿನಂದನೆ ಸಲ್ಲಿಸಿ ಸರ್ಕಾರದ ಕಾರ್ಮಿಕ ವಿರೋಧಿ ನಿಲುವುಗಳ ಬಗ್ಗೆ, ಬೆಂಗಳೂರು ಸುತ್ತಮುತ್ತಲ ರೈತರ ಸಾವಿರಾರು ಎಕರೆ ಭೂಮಿಯನ್ನು ಲಾಬಿ ಮಾಡುತ್ತಿರುವಾಗ ಬಡ ಜನತೆಗೆ ನಿವೇಶನ ನೀಡದಿದ್ದರೆ ಜಮೀನು ಆಕ್ರಮಣ ಮಾಡುತ್ತೇವೆ ಎಂದರು.


ಆವೇಶಭರಿತ ಮೆರವಣಿಗೆ - ರ್‍ಯಾಲಿ, ಬಹಿರಂಗಸಭೆ


ಸಿಐಟಿಯು ರಾಜ್ಯ ಕಾರ್ಯದರ್ಶಿಯವರಾದ ಎಸ್.ವರಲಕ್ಷ್ಮೀ ಯುವರು ಮಾತನಾಡಿ ಕೃಷಿಕೂಲಿಕಾರರ, ಅಂಗನವಾಡಿ ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಸಂಘಟನೆಯೊಂದೇ ದಾರಿ ದೀಪಎಂದರು. ನಮ್ಮ ಆರು ಬೇಡಿಕೆಗಳಲ್ಲಿ ಪ್ರಮುಖ ಬೇಡಿಕೆಯಾದ ಕನಿಷ್ಠ ಕೂಲಿ 6000 ರೂ. ಆಗದಿದ್ದಲ್ಲಿ ನಾವು ಬಿಡುವುದಿಲ್ಲ ಎಂದರು. ದೇಶದ ಸಂಪತ್ತನ್ನು ಸೃಷ್ಟಿಸುವವರು ಕಾರ್ಮಿಕರು ಎಂದರು.

ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಯವರು ಕಾರ್ಮಿಕರ ಪರವಾದ ಶಾಸನ ತಂದಿಲ್ಲದ ಕಾರಣ ಕೇಂದ್ರ ಸರ್ಕಾರಕ್ಕೆ ನಾವು ಕೊಟ್ಟ ಬೆಂಬಲವನ್ನು ವಾಪಸ್ಸು ಪಡೆದವು. ಮಠಮಾನ್ಯರ ಪರವಾದ ಯಡಿಯೂರಪ್ಪ ಬಿಜೆಪಿ ಸರ್ಕಾರ ನಡೆಸುತ್ತಿದೆ. ವಾರ್ಷಿಕ 12,000 ವರಮಾನ ಹೊಂದಿರುವವರಿಗೆ ಬಿಪಿಎಲ್ ಕಾರ್ಡ್ ಕೊಡುವುದಿಲ್ಲ ಎಂಬ ಸರ್ಕಾರದ ನೀತಿ ಖಂಡಿಸಿ, 2 ರೂ.ಗೆ ಒಂದು ಕೇ.ಜಿ ಅಕ್ಕಿ ನೀಡು ವಂತೆ ಸರ್ಕಾರವನ್ನು ಒತ್ತಾಯಿಸಿದರು.

ಕರಾವಳಿ ಅಲೆ ಪತ್ರಿಕೆ ಸಂಪಾದಕರಾದ ಬಿ.ವಿ.ಸೀತಾರಾಮ್‌ರವರು ಮಾತನಾಡಿ ಕೋಮುವಾದಿಗಳ ಅಪಾಯಗಳ ಬಗ್ಗೆ ಲೇಖನ ಬರೆದಿದ್ದಕ್ಕಾಗಿ ನಮ್ಮನ್ನು ಒಂದು ತಿಂಗಳ ಕಾಲ ಬಂಧಿಸಿ ಅನೇಕ ಹಿಂಸೆ ನೀಡಿದ ಬಗ್ಗೆ ವಿವರಿಸಿ, ಕಮ್ಯೂನಿಸ್ಟ್ ಸ್ನೇಹಿತರ ಬೆಂಬಲ ತನಗಿದೆ ಎಂದರು.

ಸಿಐಟಿಯು ಬೆಂಗಳೂರು ಜಿಲ್ಲಾ ಅಧ್ಯಕ್ಷ ಹೆಚ್.ಎನ್.ಗೋಪಾಲಗೌಡರು ಮಾತನಾಡಿ ಬೆಂಗಳೂರು ಸುತ್ತಮುತ್ತಲು ಇರುವ ಕಾರ್ಮಿಕರಿಗೆ 10,000 ರೂ. ಕನಿಷ್ಠ ಕೂಲಿ ನಿಗದಿಪಡಿಸಬೇಕೆಂದರು. ○

ಮನವಿ ಸ್ವೀಕರಿಸುತ್ತಿರುವ ಸಚಿವ ರಾಮಚಂದ್ರಗೌಡ



ಕಮ್ಮಿ ದರ ನಿಗದಿ ಯಾಕೆ?

ಗಂಡ ಹೆಂಡರಿ ಇಬ್ಬರು ಮಕ್ಕಳ ಒಂದು ಸಾಮಾನ್ಯ ಕುಟುಂಬ ಬದುಕುಳಿದು ಕೆಲಸ ಮಾಡಲು ಬೇಕಾಗುವ ಕನಿಷ್ಠ ಅಗತ್ಯಗಳನ್ನು ಲೆಕ್ಕ ಹಾಕಿದರೆ ದಿನಕ್ಕೆ ಕನಿಷ್ಠ ರೂ.68 ಸಿಗಲೇ ಬೇಕಾಗುತ್ತದೆ. ಕರ್ನಾಟಕ ಸರ್ಕಾರದ ಕಾರ್ಮಿಕರ ಇಲಾಖೆಯ ಲೆಕ್ಕದ ಪ್ರಕಾರವೂ ಕನಿಷ್ಠ ರೂ.52 ಬೇಕು. ಮಾಲೀಕರ ಲೆಕ್ಕಾಚಾರದ ಪ್ರಕಾರವೂ ರೂ.55 ಬೇಕು. ಆದರೂ ಸರ್ಕಾರ ಕನಿಷ್ಠ ಕೂಲಿಯನ್ನೇಕೆ ಇನ್ನೂ ಕಮ್ಮಿದರದಲ್ಲಿ ನಿಗದಿಪಡಿಸಬೇಕು? ಕರ್ನಾಟಕದಲ್ಲಿ ಒಬ್ಬ ಕಾರ್ಮಿಕರನ ಕುಟುಂಬ ಬದುಕುಳಿಯಲು ಅಗತ್ಯವಾದ ಕನಿಷ್ಠ ಕೂಲಿಯನ್ನಾದರೂ ಕೊಡದೇ ಯಾವುದೇ ಉದ್ದಿಮೆ ಅಸ್ತಿತ್ವದಲ್ಲಿರಲು ಬಿಡಬಾರದು.

- ವಿ.ಜೆ.ಕೆ.ನಾಯರ್

ಪುಟ 8

...ವಿಧಾನಸೌಧ ಚಲೋ

ಕಾರ್ಮಿಕರಿಗೆ ಕನಿಷ್ಠ ಕೂಲಿಗಾಗಿ ಒತ್ತಾಯಿಸಿ ಮುಷ್ಕರ ನಡೆಸಲಾಯಿತು.

ಆಗಸ್ಟ್ 19ರಲ್ಲಿ ಜೈಲ್ ಭರೋ ಕಾರ್ಯಕ್ರಮ ನಡೆಸಲಾಯಿತು. ಸೆಪ್ಟೆಂಬರ್ 9ರಂದು ಭಾರತ್‌ಬಂದ್‌ಗೆ ಕರೆ ಯಶಸ್ವಿಯಾಯಿತು. ಜುಲೈ 14 ರಂದು ವಿಧಾನಸೌಧದ ಎದುರು ಬೃಹತ್ ರ್‍ಯಾಲಿ ನಡೆಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದಾಗ ಭೇಟಿ ಮಾಡಿದ ಈ ಬಗ್ಗೆ ಚರ್ಚಿಸುವುದಾಗಿ ತಿಳಿಸಿತ್ತು. ಆದರೆ ಚರ್ಚೆ ಆಗಲಿಲ್ಲ. 2009 ಫೆ.5 ರಂದು ಮುಖ್ಯಮಂತ್ರಿಗಳಿಗೆ ಈ ಕುರಿತು ನೀಡಿದ ಮನವಿಯಲ್ಲಿ ಕೂಡಲೇ ಕನಿಷ್ಠ ಕೂಲಿ ಜಾರಿ ಮಾಡದಿದ್ದಲ್ಲಿ ಎಲ್ಲಾ ರಾಜ್ಯಾದಾದ್ಯಂತ ಪಿಕೆಟಿಂಗ್ ನಡೆಸುವುದಾಗಿ ಎಚ್ಚರಿಕೆಯ ಕರೆಗಂಟೆ ನೀಡಿದೆ.

ಹೀಗೆ ಕನಿಷ್ಠ ಕೂಲಿ ಒತ್ತಾಯಕ್ಕಾಗಿ ಸಿಐಟಿಯುನ ಹೋರಾಟದ ಪರಂಪರೆಯೇ ಇದೆ.

ಹೋರಾಟವೊಂದೇ ದಾರಿ: ಕಳೆದ 30 ವರ್ಷಗಳಿಂದ ಕರ್ನಾಟಕದಲ್ಲಿ ಕನಿಷ್ಠ ಸಮರೂಪದ ನಿಗದಿಪಡಿಸಬೇಕೆಂದು ಒತ್ತಾಯಿಸಲಾಗಿದೆ. ಒಂದು ವಿಶಾಲ ಪ್ರದೇಶದ ಕಾರ್ಮಿಕರನ್ನು ಸರ್ಕಾರ ಆಗಾಗ ನೋಟಿಫೈ ಮಾಡಲು ಕನಿಷ್ಠ ಕೂಲಿಗಾಗಿ ಹೋರಾಟ ನಡೆಸಲು ಸಂಘಟಿಸಲೇಬೇಕು. ಸಂಘಟಿತ ವಲಯದ ನಾಯಕರು ಹಾಗೂ ಕಾರ್ಯಕರ್ತರು ಸಹ ದಿನನಿತ್ಯ ಈ ಕೆಲಸಕ್ಕೆ ತೊಡಗಿಸಿಕೊಳ್ಳಬೇಕು. ○

ಬಿ.ಮಾಧವ



ಮಾರುತಿ ಮಾನ್ಪಡೆ



ಎಸ್.ವರಲಕ್ಷ್ಮಿ



ಎಸ್.ಪ್ರಸನ್ನಕುಮಾರ್



ಸ್ಪಂದಿಸದಿದ್ದರೆ ಸರ್ಕಾರಿ ಕಛೇರಿ ಮುತ್ತಿಗೆ ಮಾರ್ಚ್ 3 ರಿಂದ 5

ಅಸಂಘಟಿತ ಕಾರ್ಮಿಕರ ಸಮಸ್ಯೆಗಳ ಬಗೆಗೆ ಸರ್ಕಾರ ಗಮನಿಸುವುದೆಂದು ಕಾರ್ಮಿಕ ಮುಖಂಡರೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು ಎಂದು ಸರ್ಕಾರದ ಪರವಾಗಿ ಬಂದು ಮನವಿ ಸ್ವೀಕರಿಸಿದ ಸಚಿವ ರಾಮಚಂದ್ರೇಗೌಡ ಭರವಸೆ ನೀಡಿದ್ದಾರೆ. ಬೇಡಿಕೆಗಳ ಕುರಿತು ಸರ್ಕಾರ ವಹಿಸುವ ಕ್ರಮವನ್ನು ಕಾದು ನೋಡಲು, ಸೂಕ್ತವಾಗಿ ಸ್ಪಂದಿಸದಿದ್ದಲ್ಲಿ ಮಾರ್ಚ್ 3 ರಿಂದ 5 ರವರೆಗೆ ರಾಜ್ಯವ್ಯಾಪಿ ಸರ್ಕಾರಿ ಕಚೇರಿಗಳ ಮುತ್ತಿಗೆ ಹಾಕುವುದೆಂದು ಸಿಐಟಿಯು ಸಂಘಟನೆ ತೀರ್ಮಾನಿಸಿದೆ.

ಬಳ್ಳಾರಿ ಸಿರಿವಾರ ವಿಮಾನ ನಿಲ್ದಾಣ

ದೂರಾಲೋಚನೆಯೋ, ದುರಾಲೋಚನೆಯೋ?

ಯಾವುದೇ ಒಂದು ರಾಜ್ಯಸರ್ಕಾರಕ್ಕೆ ರಾಜ್ಯದ ಕೃಷಿ ಪರಿಸ್ಥಿತಿ, ಆಹಾರ ಭದ್ರತೆ, ಕೈಗಾರಿಕೆ ಬೆಳವಣಿಗೆಗೆ ಅವಶ್ಯ ಸಂಪನ್ಮೂಲ ಇತ್ಯಾದಿ ಅರಿವು ಇರಬೇಕು. ಇದರ ಆಧಾರದ ಮೇಲೆ ಕೃಷಿನೀತಿ, ಕೈಗಾರಿಕೆ ನೀತಿಗಳು ರೂಪಗೊಳ್ಳುತ್ತಿವೆ. ಆದರೆ ಇಂತಹ ಯಾವುದೇ ನೀತಿಗಳು ಇಲ್ಲದೆ, 'ನಮ್ಮ ನೀತಿ ಎಂದರೆ ಕೋಮುವಾದ ಎಂಬ ಅನೀತಿಯೇ' ಎನ್ನುವ ಯಡಿಯೂರಪ್ಪ ಅವರ ತುಘಲಕ್ ಆಡಳಿತವನ್ನು ನೋಡಬೇಕೆಂದರೆ ನೀವು ಬಳ್ಳಾರಿ ಜಿಲ್ಲೆಗೆ ಬರಲೇ ಬೇಕು.

ಬಳ್ಳಾರಿ ಜಿಲ್ಲೆಯ ಸಿರಿವಾರ ಗ್ರಾಮದ ಬಳಿ ಒಂದು ಸಾವಿರ ಎಕರೆ ನೀರಾವರಿ ಭೂಮಿಯಲ್ಲಿ 'ಅಂತರಾಷ್ಟ್ರೀಯ ವಿಮಾನ ನಿಲ್ದಾಣ' ಸ್ಥಾಪಿಸಲು ರಾಜ್ಯಸರ್ಕಾರ ನಿರ್ಧರಿಸಿರುವುದೇ ನೀತಿಗೆಟ್ಟ ಯೋಜನೆಯಾಗಿದೆ.

ಪ್ರವಾಸೋದ್ಯಮ ಸಚಿವ ಜಿ.ಜನಾರ್ಧನ ರೆಡ್ಡಿ ಹಾಗೂ ಅವರ ಪಟಾಲಂ ವಿಮಾನ ನಿಲ್ದಾಣ ಯಾರು ತಡೆಯಲಾರರು ಎಂದು ಹೇಳುತ್ತಲೆ ರೈತರ ಹೋರಾಟವನ್ನು ವಿರೋಧ ಪಕ್ಷದ ಕುತಂತ್ರ ಎಂದೇ ಜರಿದಿದ್ದಾರೆ.

ಬಳ್ಳಾರಿಯಲ್ಲಿ ಈಗಾಗಲೇ ಒಂದು ವಿಮಾನ ನಿಲ್ದಾಣವಿದೆ. ಅದನ್ನು ಅಭಿವೃದ್ಧಿ ಪಡೆಸಲಾಗುತ್ತಿಲ್ಲ. ತೋರಣಗಲ್ಲಿನಲ್ಲಿ ಜಿಂದಾಲ್ ಕಂಪನಿಯದೆ ಆದ ಖಾಸಗಿ ವಿಮಾನ ನಿಲ್ದಾಣವಿದೆ. ಈ ಹಿಂದೆ ವಿಶ್ವ ಪರಂಪರೆ ಪಟ್ಟಿಯಲ್ಲಿರುವ ಹಂಪಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಜಿಂದಾಲ್, ಕಿರ್ಲೋಸ್ಕರ್, ಕಲ್ಯಾಣಿ ಬೃಹತ್ ಉಕ್ಕು ಉದ್ಯಮಗಳ ಸ್ಥಾಪನೆಯ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಸ್ತಾವನೆ ಮಂಚೂಣಿಗೆ ಬಂತು. ಆಗ ಈ ಬಗ್ಗೆ ಸರ್ವೇಕಾರ್ಯ ನಡೆದ ಪಾಪಿನಾಯಕನಹಳ್ಳಿ ಬಳಿ ಈ ವಿಮಾನ ನಿಲ್ದಾಣ ಸೂಕ್ತ ಪ್ರದೇಶವೆಂದು ಗುರುತಿಸಲಾಯಿತು.


ಆದರೆ ಸಚಿವ ಜನಾರ್ಧನ ರೆಡ್ಡಿ ಹಾಗೂ ಪಟಾಲಂ ಈ ಪ್ರದೇಶವನ್ನು ಕೈ ಬಿಟ್ಟು ಸಿರಿವಾರದ ಸಾವಿರಾರು ಎಕರೆ ನೀರಾವರಿ ಪ್ರದೇಶದಲ್ಲಿ ಸರ್ವೇಕಾರ್ಯ ನಡೆಸುವಂತೆ ಜಿಲ್ಲಾಡಳಿತಕ್ಕೆ ಆದೇಶ ನೀಡಿ ಬಿಟ್ಟಿದ್ದಾರೆ. ಕಾರಣವೇನು ಎಂದು ಹುಡುಕಿದರೆ ಈ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಇವರು ಭೂಮಿಯನ್ನು ಖರೀದಿಸಿಯಾಗಿದೆ. ನಾಳೇ ವಿಮಾನ ನಿಲ್ದಾಣವಾದರೆ ಅದರ ಸುತ್ತಮುತ್ತ ದೊಡ್ಡ ದೊಡ್ಡ ಫೈವ್ ಸ್ಟಾರ್ ಹೊಟೇಲ್‌ಗಳು ನಿರ್ಮಾಣ ಮಾಡಬಹುದಲ್ಲ ಎಂಬ ದುರಾಲೋಚನೆ ಕಾಣಿಸುತ್ತಿದೆ. ಹೀಗಿದೆ ನಮ್ಮ ಪ್ರವಾಸೋದ್ಯಮ ಸಚಿವರ ಸ್ವಂತಹ ಪ್ರಯಾಸೋದ್ಯಮ!!

ತನ್ನ ದರೋಡೆಕೋರ ಸಾಮ್ರಾಜ್ಯ ವಿಸ್ತರಿಸಲು ಹೊರಟಿರುವ ರೆಡ್ಡಿ ರೈತರ ಅಳಲನ್ನು ವಿರೋಧ ಪಕ್ಷಗಳು ಕುತಂತ್ರ ಎಂದು ಕರೆಯುವ ಮಟ್ಟಕ್ಕೆ ಹೋಗಿದ್ದಾನೆ



ಪಾಪಿನಾಯಕನಹಳ್ಳಿ ಬಳಿ ಒಣಭೂಮಿ ಸಾಕಷ್ಟಿದ್ದು, ಇಲ್ಲಿ ರೈತರಿಗೆ ಸೂಕ್ತ ಪರಿಹಾರ ನೀಡಿ ವಿಮಾನ ನಿಲ್ದಾಣ ಮಾಡಬಹುದಿತ್ತು. ಆದರೆ ಸಿರಿವಾರದ ಬಳಿ ಸಾವಿರಾರು ಎಕರೆ ಫಲವತ್ತತೆಯಿಂದ ಕೂಡಿರುವ ನೀರಾವರಿ ಭೂಮಿಯಲ್ಲಿಯೇ ವಿಮಾನ ನಿಲ್ದಾಣ ಮಾಡುವ ಮೂಲಕ ಯಾವ ಸದುದ್ದೇಶ ಹೊಂದಿದ್ದಾರೋ ಗೊತ್ತಿಲ್ಲ. 'ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಹೂವು' ಎನ್ನುವ ಗಾದೆ ಯನ್ನು ನೆನಪಿಗೆ ತಂದು ತಮಗಾಗಿಯೇ ಈ ಸರ್ಕಾರವಿದೆ. ಬಡವರಿಗೆ, ರೈತರಿಗೆ ಅಲ್ಲ ಎಂದು ಹೇಳುತ್ತಿದೆ. ಹಸಿರು ಶಾಲು ಹೊದ್ದು ಪ್ರಮಾಣ ವಚನ ಸ್ವೀಕರಿಸಿದ ರೈತ ಬಿಡ್ಡ ಯಡಿಯೂರಪ್ಪ ಗಣಿ ಬಿಡ್ಡನ ಕಾಲಬೂಡದಲ್ಲಿ ಕುಳಿತು ಕೇಸರಿ ಭಾವುಟ ಹಾರಿಸುತ್ತಿರುವುದು ಹೀಗೆ.

ಒಂದು ಎಕರೆ ಭೂಮಿಯನ್ನು ಸಹ ನೀರಾವರಿ ಮಾಡದ ಸರ್ಕಾರವೊಂದು ಸಾವಿರಾರು ಎಕರೆ ನೀರಾವರಿ ಭೂಮಿಯನ್ನು ವಿಮಾನ ಓಡಾಟ ನಡೆಸುವುದಕ್ಕೆ ಬಂಜರು ಮಾಡುವ ಅಧಿಕಾರವನ್ನು ಯಾರು ಕೊಟ್ಟರು? ರೈತರು ಈ ಪ್ರಶ್ನೆಯನ್ನು ಕೇಳುತ್ತಿದ್ದರೂ ಜಾಗತಿಕ ಆರ್ಥಿಕ ಕುಸಿತ, ಕೃಷಿರಂಗದ ಬಿಕ್ಕಟ್ಟು, ವಿಪರೀತ ಸಾಲದಿಂದಲೂ ಕಂಗೆಟ್ಟಿದ್ದಾರೆ.



ಇಂತಹ ಸಂದರ್ಭವನ್ನು ರೆಡ್ಡಿ ಪಟಾಲಂ ಉಪಯೋಗಿಸಿಕೊಳ್ಳುವ ಚಾಣಕ್ಷತನಕ್ಕೆ ಇಳಿದಿದೆ. ಒಳ್ಳೆಯ ಧರ ಸಿಕ್ಕರೆ ಭೂಮಿ ಕೊಟ್ಟು ಬಿಡೋಣ ಎಂದು ಕೆಲವು ರೈತರನ್ನು ಇದು ನಿರ್ಧರಿಸುವಂತೆ ಮಾಡಿದೆ. ಇದನ್ನೆ ಹಿಡಿದುಕೊಂಡು ರೈತರು ಈ ಯೋಜನೆ ಪರವಾಗಿದ್ದಾರೆಂದು ಢಾಣಾಢಂಗೂರ ಸಾರಲಾಗುತ್ತಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಈ ರೈತರ ಹೋರಾಟಕ್ಕೆ ಬೆಂಬಲಿಸಿ, ಹೋರಾಟದಲ್ಲಿ ಭಾಗವಹಿಸಿತ್ತು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಕಾಂ.ಯು.ಬಸವರಾಜ ಹೇಳುವಂತೆ 'ಬಳ್ಳಾರಿ ವಿಮಾನ ನಿಲ್ದಾಣವನ್ನೇ ಅಭಿವೃದ್ಧಿ ಪಡೆಸುವುದಕ್ಕೆ ಬೇಕಾದಷ್ಟು ಅವಕಾಶಗಳಿವೆ. ಆದರೆ ಸರ್ಕಾರ ಅದನ್ನು ಮಾಡುತ್ತಿಲ್ಲ. ರಾಜ್ಯದಲ್ಲಿ ಶೇ.30ರಷ್ಟು ಮಾತ್ರ ನೀರಾವರಿ ಪ್ರದೇಶವಿದೆ. ಉಳಿದಂತೆ ಶೇ.70ರಷ್ಟು ಪ್ರದೇಶ ಒಣಭೂಮಿಯಾಗಿದೆ. ವಿವೇಚನೆ ಇರುವ ಸರ್ಕಾರ ನೀರಾವರಿ ಪ್ರದೇಶಗಳನ್ನು ಇಂತಹ ಉದ್ದೇಶಕ್ಕೆ ಬಳಸಿಕೊಳ್ಳಲಾರದು. ರೈತ ಸಂಘ ಇದನ್ನು ವಿರೋಧಿಸುತ್ತದೆ' ಎಂದೇ ಹೇಳುತ್ತಾರೆ.

ಗಣಿಗಾರಿಕೆ ಉಬ್ಬರವಿರುವ ಕಾಲಕ್ಕೆ ಸಂಡೂರು, ಹೊಸಪೇಟೆ ತಾಲೂಕಿನಲ್ಲಿ ಸಣ್ಣಪುಟ್ಟ ರೈತರು ತಮ್ಮ ಹೊಲದಲ್ಲಿ ಡಿಗ್ಗಿಂಗ್ ಮಾಡುವ ಮೂಲಕ ಗಣಿಗಾರಿಕೆ ಆರಂಭಿಸಿ ಸ್ವಲ್ಪ ಚೇತರಿಸಿಕೊಂಡಿದ್ದರು. ಅದನ್ನು ಅಕ್ರಮ ಗಣಿಗಾರಿಕೆ ಎಂದು ಕರೆದು ನಿಲ್ಲಿಸಿದ ಗಣಿಧಣಿಗಳು ಈಗ ನೀರಾವರಿ ಕೃಷಿಭೂಮಿಗೂ ಕಣ್ಣಾಕಿದ್ದಾರೆ. ರೈತರು ಭೂಮಿ ಕಳೆದುಕೊಂಡು, ನಿರ್ಗತಿಕರಾಗಿ ಈ ಗಣಿಧಣಿಗಳ ಮುಂದೆ ಮಂಡೆಯೂರಿ ಇವರು ನೀಡುವ ದಾನಗಳಿಗೆ ಕೈಯೊಡ್ಡುತ್ತಾ ಇರಬೇಕೆಂದೆ ಇವರ ಭಾವಿಸಿದಂತಿದೆ.

ಸಿರಿವಾರ, ಚಾಗನೂರು ರೈತರು ಪ್ರತಿಭಟನೆ ಹಾದಿ ಹಿಡಿದಿದ್ದಾರೆ. ಈ ಹೋರಾಟಗಳಿಗೂ ಒಂದು ಸ್ಪಷ್ಟ ಉದ್ದೇಶ, ಗುರಿ ಇಲ್ಲದಿರುವುದರಿಂದ ಹೋರಾಟಗಳನ್ನೇ ಪ್ರಾಯೋಜಿಸುವ ಮಟ್ಟ ಮುಟ್ಟಿರುವ ಜನಾರ್ಧನ ರೆಡ್ಡಿ ಮತ್ತಾವ ರೀತಿಯಲ್ಲಿ ಇಡೀ ಘಟನೆಯನ್ನು ಹೇಗೆ ತಿಪ್ಪೆಸಾರಿಸುತ್ತಾರೆಂದು ಕಾದು ನೋಡುವ ಸ್ಥಿತಿ ಉಂಟಾಗಿದೆ.

ಜಿಲ್ಲೆಯ ರೈತರು ಬಿಜೆಪಿ, ರೆಡ್ಡಿಗಳ ರಾಜಕೀಯ ವನ್ನು ಈಗೀಗ ಅರ್ಥ ಮಾಡಿಕೊಳ್ಳಲಾರಂಭಿಸಿದ್ದಾರೆ. ಇವರ ಜನಪ್ರಿಯತೆಯ ಬಲೂನು ಹೊಡೆಯುತ್ತಿದೆ. ಮಹಾ ಸಾಮ್ರಾಜ್ಯಗಳನ್ನು ಕಟ್ಟ ನಾಪತ್ತೆಯಾಗಿರುವ ಸಾಮ್ರಾಜ್ಯಪತಿಗಳ ಇತಿಹಾಸವಿರುವ ಜಾಗದಲ್ಲಿ ಈ ರೆಡ್ಡಿಗಳು, ಬಿಜೆಪಿ ಸರ್ಕಾರಗಳು ಇತಿಹಾಸದ ಕಸದ ಪುಟ್ಟ ಸೇರಲಿವೆ. ಆ ದಿನಗಳ ಎಣಿಕೆ ಈಗ ಆರಂಭವಾಗಿದೆ.

■ **ಪರುಶರಾಮ ಕಲಾಲ್**

'ಪ್ರಗ್ಯಾಸಿಂಗ್' ಸಂತತಿ...

ಪುಟ 3 ರಿಂದ

ಕೂಡಿ 'ಜಂಟಿ ಕಾರ್ಯಾಚರಣೆ'ಗೆ ರಾಜ್ಯಾದ್ಯಂತ ಇಳಿದಿವೆ. ಅದು ಇನ್ನೂ ವಿಸ್ತೃತಗೊಳ್ಳಬೇಕು, ತೀಕ್ಷ್ಣವಾಗಬೇಕು. ಈ ದಿಕ್ಕಿನಲ್ಲಿ ಒಂದೆಡೆ ಕಾಂಗ್ರೆಸ್ ಇನ್ನೊಂದೆಡೆ ಜೆಡಿ(ಎಸ್), ಸಿಪಿಐ(ಎಂ), ಸಿಪಿಐ ಪಕ್ಷಗಳು ಕೋಮುವಾದೀಕರಣ ವಿರೋಧಿಸಿ, ಜನರ ಸಮಸ್ಯೆಗಳ ಆಧಾರದಲ್ಲಿ ಪ್ರತಿಭಟನೆಗೆ ಇಳಿದಿವೆ. ಇವೆಲ್ಲಾ ಉತ್ತಮ ಬೆಳವಣಿಗೆಗಳು.

ಮುದುಡಿದ ತಾವರೆಗೆ 'ಆಪರೇಷನ್'

ಬಿಜೆಪಿಗೆ ದೆಹಲಿ ಗದ್ದುಗೆ ಹಿಡಿಯುವ ಆಶೆ, ಅದಕ್ಕಾಗಿ ಏನೇನೂ ಕಸರತ್ತು. ಆದರೆ ಅದರ ಲೆಕ್ಕಾಚಾರ ಫಲಿಸುತ್ತಿಲ್ಲ. ಗದ್ದುಗೆ ಅಷ್ಟು ಸುಲಭದಲ್ಲಿ ಸಿಗುವುದೂ ಇಲ್ಲ ಎಂಬಂತಂಹ ಬೆಳವಣಿಗೆ ಕಾಣುತ್ತಿವೆ. ಎನ್‌ಡಿಎಗೆ ಹೊಸ ಗೆಳೆಯರು ಕೂಡುತ್ತಿಲ್ಲ. ಹಳೆ ಗೆಳೆಯರು ನಿಲ್ಲುತ್ತಿಲ್ಲ.ಉಳಿದಂತೆ ಬೇರೆ ರಾಜ್ಯಗಳಲ್ಲಿ ಅಷ್ಟು 'ಹಿತಾನುಭವವಿಲ್ಲ'. ಕರ್ನಾಟಕದಲ್ಲಿಯೂ ಬಿಜೆಪಿಯ ಮೂರು ಸಂಸದರಾದ ಸಾಂಗ್ಲಿಯಾನ, ಮನೋರಮ ಮದ್ವರಾಜ್, ಮಂಜುನಾಥ ಕುನ್ನೂರ್‌ರವರು ಪಕ್ಷ ತೊರೆದಿದ್ದಾರೆ. ಉ.ಕರ್ನಾಟಕದ ಪ್ರಮುಖ ನಾಯಕ ಮಾಜಿ ಸಚಿವ ಬಸವರಾ ಪಾಟೀಲ್ ಯತ್ನಾಳ ಅಪಸ್ವರ ಎತ್ತಿದ್ದಾರೆ. ಸದಾನಂದಗೌಡರು ಮಂಗಳೂರು ಕ್ಷೇತ್ರ ಬಿಟ್ಟು, 'ಸೇಫ್' - ರಕ್ಷಿತ ಕ್ಷೇತ್ರ ಹುಡುಕುತ್ತಿದ್ದಾರೆ. ಬಿಜೆಪಿ ಶಾಸಕರ ಲಂಚ ಪುರಾಣ ಬಿಚ್ಚಿಕೊಳ್ಳುತ್ತಿದೆ. ಇಂತಹ ಬೆಳವಣಿಗೆಗಳು ಬಿಜೆಪಿ ನಾಯಕತ್ವಕ್ಕೆ ಕರ್ನಾಟಕದಿಂದಲೇ ಅತಿ ಹೆಚ್ಚು ಗಳಿಸಬೇಕೆಂಬ ಆಶೆಗೆ ಭಂಗ ತರಲಿವೆ. ಆದ್ದರಿಂದಲೇ ಪುನಃ 'ಆಪರೇಷನ್ ಕಮಲ' ಎಂಬ ಅನೈತಿಕ, ಅಕ್ರಮ, ಆಮಿಷಗಳ ಪಕ್ಷಾಂತರದ ಕಾರ್ಯಕ್ಕೆ ಪುನಃ ಚಾಲನೆ ನೀಡುತ್ತಿದ್ದಾರೆ. ಬಿಜೆಪಿ ಬದುಕುಳಿಯಲು ಬೇರೆ ಪಕ್ಷದವರನ್ನು ಸೆಳೆಯದೇ ವಿಧಿಯಿಲ್ಲ ಎಂದು ಸದಾನಂದಗೌಡ ನಾಚಿಕೆ ಬಿಟ್ಟು ಹೇಳುತ್ತಿದ್ದಾರೆ.

ಅದರಂತೆ ಬೀದರ್‌ನ ಗುರುಪಾದಪ್ಪ ನಾಗಮಾರಪಲ್ಲಿ ಹೊಸ ಸೇರ್ಪಡೆ. (ಸಂಸತ್ ಚುನಾವಣೆಯಲ್ಲಿ ತಾವು ಯಾವುದೇ ಪಾರ್ಟಿಯಲ್ಲಿದ್ದರೂ ಬಹುತೇಕ ಬಿಜೆಪಿಗೆ ಬೆಂಬಲಿಸುತ್ತಾ ಬಂದವರು) ಇನ್ನೂ ಏಳೆಂಟು ಶಾಸಕರೊಂದಿಗೆ ಡೀಲ್ ನಡೆಯುತ್ತಿರುವ ಸುದ್ದಿ ಇದೆ. ಇದು ಬಿಜೆಪಿಯ ಹೀನ ರಾಜಕೀಯ ಸಂಸ್ಕೃತಿ. ಇದು ಮುಚ್ಚಿಹೋಗಲಿ ಎಂದು ಭಾರತೀಯ ಸಂಸ್ಕೃತಿಯ ರಕ್ಷಕರು ತಾವೆ ಎಂಬ ಪೋಜು. ನೈತಿಕತೆ, ಮೌಲ್ಯಗಳ ಬಗ್ಗೆ ಭರ್ಜರಿ ಭಾಷಣ. ಏನೇ ಆಗಲಿ, ಜನತೆಗೆ ಇವೆಲ್ಲಾ ಅರಿಯರೆಂಬ ಅಹಂಕಾರ ಇಟ್ಟುಕೊಂಡಿರುವ ಬಿಜೆಪಿಗೆ ಪಾಠ ಕಲಿಸಬೇಕಲ್ಲ.


ಬೆಳಗಾಂ ಜಿಲ್ಲೆ: ಸಮಸ್ಪರೂಪದ ಕನಿಷ್ಟ ವೇತನಕ್ಕೆ ಒತ್ತಾಯ

ಅಸಂಘಟಿತ ಕಾರ್ಮಿಕರ ವಲಯದಲ್ಲಿ ದುಡಿಯುತ್ತಿರುವ ಎಲ್ಲಾ ಕಾರ್ಮಿಕರಿಗೆ ಕನಿಷ್ಟ ಕೂಲಿ ರೂ.6000/ ವೇತನ ಕೊಡಬೇಕು. ಗುತ್ತಿಗೆ ಪದ್ಧತಿ ನಿಲ್ಲಿಸಬೇಕು. ಎಲ್ಲಾ ಕಾರ್ಮಿಕರಿಗೆ ಕೆಲಸದ ಭದ್ರತೆ ಕೊಡಬೇಕು ಹಾಗೂ ಪೆನ್ಷನ್ ಯೋಜನೆ ಜಾರಿಗೆ ತರಬೇಕೆಂದು ಒತ್ತಾಯಿಸಿ ಸುಮಾರು 3,000 ಜನ ಕಾರ್ಮಿಕರು ವೆಂಕಟೇಶ್ವರ ದೇವಸ್ಥಾನದಿಂದ ಬೃಹತ್ ಮೆರವಣಿಗೆ ಹೊರಡಿಸಿ ಪ್ರಮುಖ ಬೀದಿಗಳಿಂದ ನಡೆದು ತಹಶೀಲ್ದಾರ ಕಚೇರಿ ಆವರಣದಲ್ಲಿ ಸಮಾವೇಶಗೊಂಡು ಬೇರೆ ಬೇರೆ ಕಾರ್ಮಿಕರಿಗೆ ಸಂಬಂಧಪಟ್ಟು ಅವರ ಬೇಡಿಕೆಗಳಿಗೆ ಆಗ್ರಹಿಸಿ ತಹಶೀಲ್ದಾರರವರ ಮೂಲಕ ಮನವಿ ಅರ್ಪಿಸಿದರು. ಈ ಸಂದರ್ಭದಲ್ಲಿ ಬಹಿರಂಗ ಸಭೆ ನಡೆಯಿತು.

ಕಾರ್ಮಿಕ ಮುಖಂಡ ವ್ಹಿ.ಪಿ.ಕುಲಕರ್ಣಿ, ಜೆ.ಎಂ.ಜೈನೇಖಾನರ ರೈತ ಮುಖಂಡರಾದ ಶ್ರೀ ಎಸ್.ಬಿ.ಹುಳ್ಳಿ ಹಾಗೂ ಅಂಗನವಾಡಿ ನೌಕರರ ಸಂಘದ ಪ್ರೇಮಾ ಕಿಲ್ಲೇದಾರ ಈ ಸಂದರ್ಭ ದಲ್ಲಿ ಮಾತನಾಡಿದರು. ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ ನಾಗಪ್ಪ ಸಂಗೊಳ್ಳಿ ಭಾಗವಹಿಸಿದ ಎಲ್ಲಾ ಕಾರ್ಮಿಕರನ್ನು ಸ್ವಾಗತಿಸಿದರು. ಕೊನೆಯಲ್ಲಿ ಪಂಚಾಯತ್ ನೌಕರರ ಸಂಘದ ಅಧ್ಯಕ್ಷರಾದ ಆಯ್.ಎಚ್. ಅಗಸರ ಕೊನೆಯಲ್ಲಿ ವಂದಿಸಿದರು.

ಅಂಗನವಾಡಿ ನೌಕರರ ಸಂಘದ ಶ್ರೀಮತಿ ಸರಸ್ವತಿ ಮಾಳಶೆಟ್ಟಿ, ಬಿಸಿ ಅಡುಗೆ ಕಾರ್ಯಕರ್ತೆಯರ ಸಂಘದ ತುಳಜಾ ಮಾಳದಕರ, ಹಮಾಲಿ ಕಾರ್ಮಿಕರ ಸಂಘದ ಈರಪ್ಪಾ ವಜ್ರಮಟ್ಟಿ, ನಾಗರಾಜ ಮಾದರ, ಕಟ್ಟಡ ಕಾರ್ಮಿಕರ ಸಂಘದ ಸಿದ್ದಪ್ಪ ಕಡಬಿ, ಗಿರಿಪ್ಪ ಬಂಡಿವಡ್ಡರ ಹಾಗೂ ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದರು.

ಗೋಕಾಕ ನಗರದಲ್ಲಿ ಸುಮಾರು 2000 ಜನ ನೌಕರರು ಸೇರಿ ಗೋಕಾಕ ನಗರದ ಜನರ ಗಮನವನ್ನು ಸೆಳೆದಿದ್ದಾರೆ. ನಮ್ಮ ಮೆರವಣಿಗೆಯನ್ನು ನೋಡಿ ನಮ್ಮನ್ನು ತಬ್ಬಿಕೊಂಡ ಸಂಗಾತಿ ಎಸ್.ಬಿ.ಧಾರವಾಡಕರ್‌ರವರು ಗೋಕಾಕ ನಗರದಲ್ಲಿ ಕೆಂಬಾವುಟಗಳ ಹಾರಾಟ ನೋಡಿ ನಿಜಕ್ಕೂ ನನಗೆ ಸಂತೋಷವಾಗಿದೆ ಎಂದು ಕೊಂಡಾಡಿದರು. ಸಂಜೆವಾಣಿ ಪತ್ರಿಕೆ ವರದಿಗಾರರಾದ ಎಸ್.ಬಿ.ಧಾರವಾಡಕರ್‌ರವರು ಗೋಕಾಕ್ ನಗರದ ಬಂಡವಾಳಶಾಹಿಗಳಿಗೆ ಕಾರ್ಮಿಕ ವರ್ಗದ ಎಚ್ಚರಿಕೆ



ಸಭೆಯನ್ನುದ್ದೇಶಿಸಿ ಹಿರಿಯ ನಾಯಕ ವಿ.ಪಿ.ಕುಲಕರ್ಣಿ

ಎಂದು ವರದಿ ಮಾಡಿದ್ದು ನೋಡಿ ನಮಗೂ ಸಂತೋಷವಾಯಿತು. ಕಾರ್ಮಿಕ ಶಕ್ತಿ ಗೋಕಾಕ ನಗರದಲ್ಲಿ ಬೆಳೆಸೋಣ ಎಂದು ಧಾರವಾಡಕರ ಕಾರ್ಮಿಕರಿಗೆ ಧೈರ್ಯ ತುಂಬಿದರು.

ಅದೇ ರೀತಿ ಚಿಕ್ಕೋಡಿಯಲ್ಲಿ 700 ಜನ ಕಾರ್ಮಿಕರು ಬೆಳಗಾಂವ್‌ನಲ್ಲಿ 500 ಜನ, ಹುಕ್ಕೇರಿಯಲ್ಲಿ 300, ರಾಯಬಾಗದಲ್ಲಿ 250 ಜನ ಮತ್ತು ಸವದತ್ತಿಯಲ್ಲಿ 200 ಜನ ಕಾರ್ಮಿಕರು ಸೇರಿ 231 09 ರಂದು ಕನಿಷ್ಠ ವೇತನ ಕೊಡಲು ಒತ್ತಾಯಿಸಿ ಯಶಸ್ವಿ ಹೋರಾಟ ನಡೆಸಿದ್ದಾರೆ.

ವರದಿ : ಜೆ.ಎಂ.ಜೈನೇಖಾನ್

ಪತ್ರಕರ್ತರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

ಕರಾವಳಿ ಅಲೆ ಪತ್ರಿಕೆ ಸಂಪಾದಕ ಸೀತಾರಾಮ ಅವರ ಮೇಲಿನ ಸಂಘ ಪರಿವಾರದವರ ಮಾರಣಾಂತಿಕ ಹಲ್ಲೆ ಮತ್ತು ಹೈದರಾಬಾದಿನಿಂದ ಪ್ರಕಟವಾಗುತ್ತಿರುವ ಸಿಯಾಸತ್ ಉರ್ದು ಪತ್ರಿಕೆ ಸಂಪಾದಕ ಜಾಹಿದ್ ಅಲಿ ಖಾನ್ ಅವರ ಮೇಲಿನ ಇತ್ತೆಹಾದ್ ದುಲ್ ಮುಸಲಿಮಿನ್ ಸಂಘಟನೆಯ ಮೂಲಭೂತವಾದಿಗಳ ದಾಳಿಯನ್ನು ಖಂಡಿಸಿ ಅಖಿಲ ಭಾರತ ಉರ್ದು ಮಂಚ್ ಮತ್ತು ಸೌಹಾರ್ದ ಚಿಂತನಾ ವೇದಿಕೆ ಪದಾಧಿಕಾರಿಗಳು, ಬುದ್ಧಿಜೀವಿಗಳು ಭಾನುವಾರ ಗುಲ್ಬರ್ಗದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಕೋಮುವಾದಿ ಮೂಲಭೂತವಾದಿ ಪ್ರತಿಕೃತಿ ದಹಿಸಿ ಪ್ರಜಾಪ್ರಭುತ್ವ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ಹಲ್ಲೆ ಆತಂಕಕಾರಿ ಬೆಳವಣಿಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶಾದ್ಯಂತ ಹೆಚ್ಚುತ್ತಿರುವ ಎರಡೂ ಕೋಮಿನ ದಾಳಿಗಳಿಗೆ ಜನಸಾಮಾನ್ಯರು ಬಲಿಯಾಗುತ್ತಿದ್ದಾರೆ. ಧರ್ಮಗಳ ನಂಬಿಕೆಯನ್ನು ದುಬಾಳಕೆ ಮಾಡಿಕೊಳ್ಳುತ್ತಿರುವ ಧರ್ಮಾಂಧರ ಹುಸಿ ವಾದಗಳಿಗೆ ಜನರು ಗಮನಹರಿಸಬಾರದು. ಎಲ್ಲ ಧರ್ಮಗಳ ಸಾರವು ಮಾನವೀಯತೆ, ಉನ್ನತ ಆದರ್ಶಗಳಾಗಿವೆ ಎಂದು ಪ್ರತಿಭಟನಾಕಾರರು ಸಾರಿದರು.

ಬಹುಮುಖಿ, ಸಂಸ್ಕೃತಿ, ಅನೇಕತೆಯಲ್ಲಿ ಏಕತೆಯೇ ಈ ದೇಶದ ವೈಶಿಷ್ಟ್ಯವಾಗಿದ್ದು, ಅದನ್ನು ಕಾಪಾಡಬೇಕು ಎಂದು ಪ್ರತಿಪಾದಿಸಿದರು.

ಡಾ.ಕಾಶಿನಾಥ ಅಂಬಲಗಿ, ಉರ್ದು ಮಂಚ್‌ನ ರೌಫ್ ಖಾದ್ರಿ ಮಾತನಾಡಿದರು. ಪ್ರಭು ಖಾನಾಪುರೆ, ಡಾ.ಮೀನಾಕ್ಷಿ ಬಾಳಿ, ಮೆಹರಾಜ್ ಪಟೇಲ್, ಎಂ.ಎ.ಹಕೀಮ್, ಜನವಾದಿ ಮಹಿಳಾ ಸಂಘಟನೆಯ ಕೆ.ನೀಲಾ, ವೀರಭದ್ರ ಸಿಂಪಿ ಇತರರು ಪಾಲ್ಗೊಂಡಿದ್ದರು.

.......ಚುನಾವಣಾ ಆಯೋಗದ ಸುಧಾರಣೆ ಅಗತ್ಯ

ಪುಟ 7 ಕ್ಕೆ

ಸೂಕ್ತ ಸಂವಿಧಾನಿಕ ತಿದ್ದುಪಡಿಗಳನ್ನು ತರಬೇಕು. ಚುನಾವಣಾ ಆಯೋಗ ತನ್ನ ಕೆಲಸಗಳಿಗೆ ಜವಾಬುದಾರನಾಗುವಂತೆ ಮಾಡಬೇಕು.

ಎರಡನೆಯದಾಗಿ, ಚುನಾವಣಾ ಆಯೋಗದ ಅಧಿಕಾರ ವ್ಯಾಪ್ತಿ. ಇದೊಂದು ಪ್ರಮುಖ ಪ್ರಶ್ನೆಯಾಗಿ ಎದ್ದು ಬಂದಿದೆ. ಚುನಾವಣಾ ಸಮಯದಲ್ಲಿ ಆಯೋಗ ಮುಕ್ತ ಮತ್ತು ನ್ಯಾಯಪೂರ್ಣ ಮತದಾನ ನಡೆಸಲು ಅಗತ್ಯ ಎಂದು ಹೇಳಿ ಹೊರಡಿಸುವ ಆದೇಶಗಳನ್ನು ಬಹಿರಂಗವಾಗಿಯೇ ಪ್ರಶ್ನಿಸಲಾಗಿದೆ. ಏಕೆಂದರೆ ಅವು ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರಗಳಲ್ಲಿ ಹಸ್ತಕ್ಷೇಪ ಮಾಡುವಂತವು. ನೈಜ ಮತದಾರರ ಮತದಾನ ಹಕ್ಕನ್ನು ರದ್ದು ಮಾಡಿದ್ದು, ಚುನಾವಣಾ ದಿನಾಂಕಗಳನ್ನು ಪ್ರಕಟಿಸುವ ಮೊದಲೇ ಕೇಂದ್ರ ಮತ್ತು ರಾಜ್ಯ ಸರಕಾರಗಳ ನೌಕರರನ್ನು ಶಿಸ್ತಿಗೊಳಪಡಿಸುವ ನಿರ್ದೇಶನಗಳು, ಒಂದು ರಾಜ್ಯದ ಸಮಸ್ತ ನೌಕರರನ್ನು ಎಲ್ಲಾ ನಿರ್ಣಾಯಕ ಚುನಾವಣಾ ಕರ್ತವ್ಯಗಳಿಂದ ದೂರವಿಡುವ ಕ್ರಮ(2006ರಲ್ಲಿ ಪಶ್ಚಿಮ ಬಂಗಾಳದಲ್ಲಿ ಮಾಡಿದಂತೆ) ಇವೆಲ್ಲಾ ಒಕ್ಕೂಟ ಭಾವನೆಗಳನ್ನು ತಟ್ಟುವ ಅಪಾಯವಿರುತ್ತದೆ. ನೀತಿ ಸಂಹಿತೆ ಜಾರಿಯಾಗುವ ಮೊದಲೇ ಶಾಸಕಾಂಗ ಕೈಗೊಂಡ ನಿರ್ಣಯಗಳನ್ನು ನಂತರ ಕಾರ್ಯಾಂಗ ಜಾರಿ ಮಾಡಲು ಮುಂದಾದಾಗ ಅದನ್ನು ಆಯೋಗ ಪ್ರಶ್ನಿಸಿರುವುದು ಶಾಸಕಾಂಗದ ಸ್ವಾಯತ್ತತೆಯಲ್ಲಿ ಹಸ್ತಕ್ಷೇಪ ಎಂದೇ ಬಗೆಯಬೇಕಾಗುತ್ತದೆ. ಇದನ್ನು ವ್ಯಕ್ತಿನಿಷ್ಠವಾಗಿ ವ್ಯಾಖ್ಯಾನಿಸಲು ಅವಕಾಶವಾಗುತ್ತದೆ. ಆಯವ್ಯಯದ ಅಂದಾಜು ಮತ್ತು ನಿಜವಾಗಿ ಮಾಡಿದ ಖರ್ಚು ಇವುಗಳ ಬಗ್ಗೆ ಆಯೋಗದ ವಿಧಾನ ಸಾಮಾನ್ಯವಾಗಿ ಅನುಸರಿಸುವ ಬಜೆಟ್ ಪ್ರಕ್ರಿಯೆಗಳಿಗೆ ತದ್ವಿರುದ್ಧವಾಗಿದೆ. ಚುನಾವಣಾ ಆಯೋಗದ ಅಧಿಕಾರವ್ಯಾಪ್ತಿಯ ಈ ಕ್ಷೇತ್ರಗಳಲ್ಲಿ ಸ್ಪಷ್ಟತೆ ಮತ್ತು ವಿವರಣೆಗಾಗಿ ಶಾಸನಗಳು ಇರಬೇಕು.

ಮೂರನೆಯದಾಗಿ, ಚುನಾವಣಾ ವೀಕ್ಷಕರ ನಿರೂಪಣೆ ಮತ್ತು ಅವರ ಪಾತ್ರ. ಈ ವೀಕ್ಷಕರಿಗೆ ಕಾರ್ಯಕಾರೀ ಅಧಿಕಾರಗಳು ಇವೆಯೇ ಎಂದು ಹಲವಾರು ಬಾರಿ ಪ್ರಶ್ನಿಸಿದರೂ ಅದನ್ನು ಸ್ಪಷ್ಟೀಕರಿಸಲು ಆಯೋಗಕ್ಕೆ ಸಾಧ್ಯವಾಗಿಲ್ಲ. ಆಯೋಗದ ದಸ್ತಾವೇಜುಗಳು ವೀಕ್ಷಕರ ಅಧಿಕಾರಗಳು ಶಿಫಾರಸಿನ ಸ್ವರೂಪದವು, ಅವನ್ನು ಸಂಬಂಧಪಟ್ಟವರ ಮನವೊಲಿಸಿ ಆಯೋಗದ ನಿಯಮಿತ ವ್ಯವಸ್ಥೆಯ ಮೂಲಕ ಜಾರಿಗೆ ತರಬಹುದು ಎಂದು ಸೂಚಿಸುತ್ತವೆ. ಆದರೆ ವಾಸ್ತವವಾಗಿ ಈ ವೀಕ್ಷಕರು ಹೆಚ್ಚಾಗಿ ಮೌಖಿಕ ನಿರ್ದೇಶನಗಳ ಮೂಲಕವೇ ಕಾರ್ಯಕಾರೀ ಅಧಿಕಾರಗಳನ್ನು ಚಲಾಯಿಸುವುದು ಕಂಡು ಬಂದಿದೆ. ಆದ್ದರಿಂದ ಈ ಪ್ರಶ್ನೆಯಲ್ಲೂ ಜನತಾ ಪ್ರಾತಿನಿಧ್ಯ ಕಾನೂನಿನಲ್ಲಿ ಬಹಳ ನಿರ್ದಿಷ್ಟತೆ ಇರಬೇಕು, ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಮೇಲೆ ಕಾನೂನು ಅಂಶದ ಮೂಲಕ ನಿಯಂತ್ರಣವಿರಬೇಕು ಎಂಬುದು ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ.

ನಾಲ್ಕನೆಯದಾಗಿ, ಕಾನೂನು- ವ್ಯವಸ್ಥೆಯ ಮತ್ತು ಕೇಂದ್ರೀಯ ಪಡೆಗಳನ್ನು ತೊಡಗಿಸುವ ಪ್ರಶ್ನೆ. ಸಂವಿಧಾನದ ಪ್ರಕಾರ ಕಾನೂನು ವ್ಯವಸ್ಥೆ ರಾಜ್ಯ ಸರಕಾರದ ವಿಶೇಷ ಅಧಿಕಾರವ್ಯಾಪ್ತಿಯೊಳಗೆ ಬರುತ್ತದೆ.. ಚುನಾವಣಾ ಸಮಯದಲ್ಲಿ ಈ ಅಧಿಕಾರಗಳನ್ನು ಮೊಟಕುಗೊಳಿಸಬಹುದು ಎಂದೇನೂ ಸಂವಿಧಾನ ರಿಯಾಯ್ತಿ ಕೊಟ್ಟಿಲ್ಲ. ಈ ಹಿಂದೆ ಇಂತಹ ಪ್ರಶ್ನೆಗಳು ಎದ್ದಾಗ ಅವನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಲಾಗಿದೆ. ಆದರೆ ನಂತರ ಈ ವಿಷಯದಲ್ಲಿ ಚುನಾವಣಾ ಆಯೋಗ ಏಕಪಕ್ಷೀಯವಾಗಿ ವರ್ತಿಸುತ್ತಿದೆ, ಒಂದು ಚುನಾಯಿತ ರಾಜ್ಯ ಸರಕಾರ ಸಂವಿಧಾನವನ್ನು ರಕ್ಷಿಸಲು ಬದ್ಧವಾಗಿಲ್ಲ ಎಂಬ ಅವಿಶ್ವಾಸ ಮತ್ತು ತುಚ್ಛೀಕಾರದ ಭಾವನೆ ಅದರಲ್ಲಿ ಕಾಣುತ್ತಿದೆ. ಚುನಾವಣಾ ಆಯೋಗ ಮತ್ತು ಒಂದು ಚುನಾಯಿತ ರಾಜ್ಯ ಸರಕಾರ ಇವೆರಡೂ ಸಂವಿಧಾನಿಕ ಸಂಸ್ಥೆಗಳು. ಇವುಗಳ ನಡುವೆ ಘರ್ಷಣೆ ಅಪೇಕ್ಷಣೀಯವಲ್ಲ, ಅಲ್ಲದೆ ಅದು ಒಕ್ಕೂಟ ವ್ಯವಸ್ಥೆಯಲ್ಲಿ ಅಪಾಯಕಾರಿ ಕೂಡಾ. ಇಂತಹ ಘರ್ಷಣೆಗಳನ್ನು ಸೌಹಾರ್ದಯುತವಾಗಿ ನಿವಾರಿಸುವ ಒಂದು ವ್ಯವಸ್ಥೆ ರೂಪಿಸಲು ಸಂವಿಧಾನದ ತಿದ್ದುಪಡಿ ಅಗತ್ಯ.

ಈ ಮೊದಲೇ ಹೇಳಿದಂತೆ ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಅಂಶಗಳನ್ನು ಗಂಭೀರವಾಗಿ ಪರಿಶೀಲಿಸುವ ಅಗತ್ಯ ಬಂದಿದೆ. ಭಾರತದ ಸಂಸದೀಯ ಪ್ರಜಾಪ್ರಭುತ್ವವನ್ನು ಮತ್ತು ಅದರ ಗಣತಂತ್ರ ಸ್ವರೂಪವನ್ನು ಬಲಪಡಿಸಲು ಇದು ಅಗತ್ಯ. 15ನೇ ಸಾರ್ವತ್ರಿಕ ಚುನಾವಣೆಗಳ ನಂತರ ಅಧಿಕಾರ ವಹಿಸಿಕೊಳ್ಳುವ ಹೊಸ ರಾಜಕೀಯ ಕಾರ್ಯಾಂಗ ಇದನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದೆ.

ಗ್ರಾಮೀಣ ಪ್ರದೇಶದ ಜನತೆಗೆ ಉದ್ಯೋಗದ ಖಾತ್ರಿ ನೀಡುವಂತಹ ಯೋಜನೆಗಳನ್ನು ಜಾರಿಗೊಳಿಸದೇ ಬುಡಮೇಲು ಮಾಡುವ ಪ್ರಯತ್ನ ನಡೆಯುತ್ತಲೇ ಇವೆ. ಆದರೆ ಜನ ಬಿಡಬೇಕಲ್ಲ. ಕೋಲಾರದಲ್ಲಿನ ಹೋರಾಟದ ವರದಿ



ಜನಪ್ರತಿನಿಧಿಗಳು - ಅಧಿಕಾರಶಾಹಿ - ಪಾಳೇಗಾರಿ ಕೂಡಿದ ದುಷ್ಟ ಮುಖ ಅನಾವರಣ

ಉದ್ಯೋಗ ಯೋಜನೆಯ 'ಖಾತರಿ'ಗಾಗಿ ನಡೆದಿದೆ ಸಂಘರ್ಷ

ವಿಶ್ರುತ್

ಬಡಜನರ ಉದ್ಧಾರಕ್ಕೆಂದು ಹೇಳಲಾಗುವ ನೂರಾರು ಯೋಜನೆಗಳು ನಮ್ಮ ದೇಶದಲ್ಲಿವೆ. ಆದರೆ ಸ್ವತಂತ್ರ ಭಾರತಕ್ಕೆ 62ರ ಹರೆಯವಾದರೂ ಬಹುಪಾಲು ಜನತೆ ಬಡತನದ ಅಗ್ನಿಕುಂಡದಲ್ಲಿ ಇನ್ನೂ ಬೇಯುತ್ತಲೇ ಇದ್ದಾರೆ. ಜಾರಿಯಲ್ಲಿರುವ ಕಲ್ಯಾಣ ಕಾರ್ಯಕ್ರಮಗಳು ತಕ್ಕಮಟ್ಟಿಗಾದರೂ ಪ್ರಾಮಾಣಿಕವಾಗಿ ಜಾರಿಯಾಗಿದ್ದರೆ ಪರಿಸ್ಥಿತಿ ಎಷ್ಟೋ ಸುಧಾರಿಸುತ್ತಿತ್ತು.

ಸ್ವರ್ಗವನ್ನೇ ಧರೆಗೆ ಇಳಿಸುವುದನ್ನು ಬಿಡಿ, 'ಮುಳುಗುವವನಿಗೆ ಹುಲ್ಲುಕಡ್ಡಿಯ ಆಸರೆ' ಎಂಬಂತಿರುವ, ಅತಿ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನು' (ರೇಗಾ) ಅನುಷ್ಠಾನಗೊಳ್ಳಬೇಕಾದರೆ ಅದಕ್ಕಾಗಿಯೇ ಇನ್ನೊಂದು ಸಂಘರ್ಷ ನಡೆಸಬೇಕಾಗಿದೆ. ಜನಪ್ರತಿನಿಧಿಗಳ ನಿರ್ಲಜ್ಜ ನಿರ್ಲಕ್ಷ್ಯನ ಹಾಗೂ ಅಧಿಕಾರಶಾಹಿಯ ಜಾಣ ಕುರುಡುತನ ಎಂಥದ್ದೇ ಜನಪರ ಯೋಜನೆಯನ್ನು ಬುಡಮೇಲು ಮಾಡಬಲ್ಲರು ಎನ್ನುವುದಕ್ಕೆ ಕೋಲಾರ ಜಿಲ್ಲೆಯಲ್ಲಿ 'ರೇಗಾ'ಕ್ಕೆ ಬಂದಿರುವ ದುರ್ಗತಿ ಗಮನಿಸಿದರೆ ಗೊತ್ತಾಗುತ್ತದೆ.

ಕಾಟಾಚಾರದ ಕ್ರಮಗಳು

ಚಿನ್ನದ ನಾಡು, ರೇಷ್ಮೆ ಗೂಡು, ಹಾಲಿನ ಹೊಳೆಯಬೀಡು ಎಂಬೆಲ್ಲಾ ವಿಶೇಷಗಳಿಗೆ ಒಳಗಾಗಿರುವ ಕೋಲಾರ ಜಿಲ್ಲೆ ವಾಸ್ತವವಾಗಿ ದಲಿತರೇ ಹೆಚ್ಚಾಗಿರುವ, ಇತ್ತೀಚಿನ ವರ್ಷಗಳಲ್ಲಿ ಬರದಿಂದ ತತ್ತರಿಸಿರುವ ನೆಲವಾಗಿದೆ. ಕೋಲಾರ ಜಿಲ್ಲೆಯ ವಿಭಜನೆಯಿಂದ ರೂಪಗೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯೂ ಇದರಿಂದ ಹೊರತಲ್ಲ. ವಿಶೇಷವಾಗಿ ಇಂಥ ಬರಡು ಪ್ರದೇಶಗಳಿಗೆ ವರದಾನವಾಗಬೇಕಿದ್ದ 'ರೇಗಾ' ಯೋಜನೆ ಜಿಲ್ಲೆಯಲ್ಲಿ ಕಾಟಾಚಾರಕ್ಕೆ ಎಂಬಂತೆ ಮಾತ್ರ ಜಾರಿಯಾಗಿದ್ದು ಕೂಲಿನಾಲಿಯಿಲ್ಲದೆ ತತ್ತರಿಸುವ ಕೃಷಿ ಕಾರ್ಮಿಕರ ಸಮುದಾಯ 'ದುಡಿಯುವ ಕೈಗಳಿಗೆ ಉದ್ಯೋಗ ಕೊಡಿ ಎಂದು ಪರಿಪರಿಯಾಗಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಬೆಂಬಾಪುಟದಡಿಯಲ್ಲಿ ಸಂಘಟಿತರಾಗಿ ಹೋರಾಟಗಳನ್ನು ನಡೆಸುತ್ತಿದ್ದಾರೆ.

'ರೇಗಾ'ದಡಿ ಉದ್ಯೋಗ ಕೊಡಿ ಎಂಬುದು ಒಂದು ಕೂಗಾದರೆ ಮಾಡಿದ ಕೆಲಸಕ್ಕೆ ಕೂಲಿಕೊಡಿ, ತರಾತುರಿಯಾಗಿ ಕೆಲಸ ಮಾಡಲು ಸಾಧನ ಸಲಕರಣೆಗಳನ್ನು ಕೊಡಿ ಎಂಬ ಕೂಗು ಕೂಡ ಬಲವಾಗುತ್ತಿದೆ.

ಆರಂಭಿಕ ಹಂತದಲ್ಲಿ ಕೈಬಿಡಲಾದ ಕೋಲಾರ ಜಿಲ್ಲೆಯಲ್ಲೂ 'ರೇಗಾ' ಜಾರಿ ಮಾಡಬೇಕೆಂದು ಹಿಂದೆ ಚಳುವಳಿಗಳನ್ನು ನಡೆಸಲಾಗಿತ್ತು. ಆದರೆ ಈ ಕಾನೂನು ದೇಶದ ಎಲ್ಲಾ ಜಿಲ್ಲೆಗಳಿಗೆ 2008ರ ಏಪ್ರಿಲ್‌ನಿಂದ ವಿಸ್ತರಣೆಯಾದಾಗ ಸಂಕಷ್ಟದಲ್ಲಿ ತೊಳಲುತ್ತಿರುವ ಸಂಕಷ್ಟದಲ್ಲಿ ಬರದ ನಾಡಿನ ಜನತೆಯಲ್ಲಿ ಆಶಾಕಿರಣವೊಂದು ಟಿಸಿಲೊಡೆದಿತ್ತು. ಆದರೆ ಅದು ಕೇವಲ ಮರೀಚಿಕೆಯಾಗಿ ಪರಿಣಮಿಸಿದೆ.

ಬೊಗಳೆ ಭಾಷಣ!

'ಜಿಲ್ಲಾ ಪಂಚಾಯಿತಿ ವತಿಯಿಂದ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಜಾರಿಯಲ್ಲಿದ್ದು 1,07,528 ಕುಟುಂಬಗಳಿಗೆ ಉದ್ಯೋಗಕ್ಕಾಗಿ ಉದ್ಯೋಗ ಚೀಟಿಗಳನ್ನು ವಿತರಿಸಲಾಗಿದೆ. ಉದ್ಯೋಗ ಬಯಸಿ ಬರುವಂತಹ ಎಲ್ಲಾ ಕೂಲಿಕಾರ್ಮಿಕರಿಗೆ ಉದ್ಯೋಗ ಒದಗಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.' ಇದು 2009ರ ಜನವರಿ 26ರಂದು ಜಿಲ್ಲಾ ಕೇಂದ್ರದಲ್ಲಿ ನಡೆದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ರಾಜ್ಯದ ವಸತಿ ಹಾಗೂ ಮುಜರಾಯಿ ಖಾತೆ ಸಚಿವರು ಮಾಡಿದ ಲಿಖಿತ ಭಾಷಣದ ಒಂದು ಅಂಶ.

ಉದ್ಯೋಗ ಬಯಸಿ ಬರುವ ಎಲ್ಲರಿಗೂ ರೇಗಾ ಯೋಜನೆಯಡಿ ಕೆಲಸ ನೀಡಲಾಗುತ್ತಿದೆ ಎಂಬ ಸಚಿವರ ಮಾತು ಹಸಿ ಹಸಿ ಸುಳ್ಳು ಎಂಬುದಕ್ಕೆ 'ಉದ್ಯೋಗಕ್ಕಾಗಿ' ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಧರಣಿ, ಪ್ರದರ್ಶನಗಳೇ ಸಾಕ್ಷಿಯಾಗಿದೆ.

ಹೋರಾಟದತ್ತ

ಅಖಿಲ ಭಾರತ ಕಿಸಾನ್ ಸಭಾ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಕೋಲಾರ ತಾಲ್ಲೂಕಿನಲ್ಲಿ ತೀವ್ರ ಮುತುವರ್ಜಿಯಿಂದ ಈ ವಿಚಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಶ್ರಮದ ಫಲವಾಗಿ ಗ್ರಾಮೀಣ ಜನರಲ್ಲಿ ಈ ಯೋಜನೆಯ ಬಗ್ಗೆ ಜಾಗೃತಿ ಮೂಡುತ್ತಿದ್ದು ಯೋಜನೆಯ ಫಲಾನುಭವಿಗಳಾಗಲು ಮುಂದೆ ಬರುತ್ತಿದ್ದಾರೆ.

ಸುಮಾರು ಎಂಟು ತಿಂಗಳಿಂದ ತಾಳ್ಮೆಯಿಂದ ಕಾದುನೋಡುವ ತತ್ವಕ್ಕೆ ಶರಣಾದ ರೈತ ಸಂಘ, ಕಳೆದ ವರ್ಷದ ಕೊನೆಯಲ್ಲಿ ಹೋರಾಟದ ಕಣಕ್ಕಿಳಿದು 'ನಿದ್ರಿಸಿದಂತೆ ನಟಿಸುತ್ತಿರುವ' ಅಧಿಕಾರಿಗಳೂ ಹಾಗೂ ಶಾಸಕರನ್ನು ಎಚ್ಚರಿಸಲು ಮುಂದಾಯಿತು. ಇದರ ಫಲವೇ ಡಿಸೆಂಬರ್ 19 ರಂದು ಕೋಲಾರ ತಾಲ್ಲೂಕಿನ ಮದನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿ ಮುಂದೆ ನಡೆದ ಬೃಹತ್ ಪ್ರದರ್ಶನ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವಾರು ಹಳ್ಳಿಗಳಿಂದ ಬಂದು ಸೇರಿದ್ದ ಮಹಿಳೆಯರೇ ಅಧಿಕವಾಗಿದ್ದ ಸುಮಾರು 500ಕ್ಕೂ ಹೆಚ್ಚು ಕೃಷಿಕೂಲಿಕಾರರನ್ನು ಕಂಡು ಅಧಿಕಾರಿಗಳು ಅವಕ್ಕಾದರು ಪತ್ರಿಕೆಗಳಲ್ಲಿ ಈ ಸಂಬಂಧ ಬಂದ ವರದಿಗಳು, ಅದರಲ್ಲೂ ವಿಶೇಷವಾಗಿ 'ದ ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸಲಾದ ವಿಶೇಷ ಸಚಿತ್ರ ವರದಿ ರಾಜ್ಯ ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸಿತು.

ತಕ್ಷಣವೇ ಮದನಹಳ್ಳಿ ಗ್ರಾಮ ಪಂಚಾಯಿತಿಗೆ ದೌಡಾಯಿಸಿದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಖಾತೆ ಕಾರ್ಯದರ್ಶಿ ರವಿಕುಮಾರ್ ಸಂಬಂಧಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು 15 ದಿನಗಳೊಳಗೆ ಉದ್ಯೋಗ ಒದಗಿಸುವಂತೆ ತಾಕೀತು ಮಾಡಿದರು. ಸುಮಾರು 150 ಜನರಿಗೆ ಉದ್ಯೋಗ ನೀಡಲಾಗಿದ್ದು. ವರ್ಷಾಂತ್ಯದಲ್ಲಿ ಕಾಮಗಾರಿಗಳ ಉದ್ಘಾಟನೆಯೂ ನೆರವೇರಿತು.



ಪ್ರತಿಭಟನೆಯ ಉದ್ದೇಶ ವಿವರಿಸುತ್ತಿರುವ ಹೋಳೂರು ಶಂಕರ್

ಇದು ರೈತ ಸಂಘದ ಆರಂಭಿಕ ಹೋರಾಟಕ್ಕೆ ಸಂದ ಜಯವಾಗಿದ್ದು, ಇದರಿಂದ ಸ್ಫೂರ್ತಿ ಪಡೆದ ಇನ್ನೂ ಹಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತ ಕೃಷಿ ಕೂಲಿಕಾರರು ಕೆಪಿಆರ್‌ಎಸ್ ನಾಯಕತ್ವದಲ್ಲಿ ಧರಣಿ ಮುಂತಾದ ಪ್ರತಿಭಟನೆಗಳನ್ನು ನಡೆಸಿದರು.

ಪ್ರತೀಕಾರದ ಕ್ರಮ!

ಜನರು ಹೋರಾಟ ಮಾಡಿದ್ದರಿಂದ ಹಿರಿಯ ಅಧಿಕಾರಿಗಳಿಂದ ತನ್ನ ಮುಖಕ್ಕೆ ಮಂಗಳಾರತಿ ಆಯಿತು ಅಂದುಕೊಂಡಿರುವ ಮದನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ತಿಪ್ಪಾರೆಡ್ಡಿ ಎಂಬ ಭೂಪ ಬಡ ಕೂಲಿಕಾರರ ಮೇಲೆ ಸೇಡುತೀರಿಸಿಕೊಳ್ಳಲು ಹೊರಟಂತೆ ಕಾಣುತ್ತಿದೆ. ಮಹಿಳೆಯರಿಗೆ ತೀರಾ ಕಷ್ಟದ ಕೆಲಸಗಳನ್ನು ನಿಗದಿಪಡಿಸುವುದು, ಕೂಲಿ ನೀಡದಿರುವುದು, ಕೆಲಸಕ್ಕೆ ಅಗತ್ಯವಾದ ಸಲಕರಣೆಗಳನ್ನು ಒದಗಿಸದಿರುವುದು, ಮಹಿಳೆಯರನ್ನು ನಿಂದಿಸುವುದು. ಇವೇ ಮೊದಲಾದ ಕೃತ್ಯಗಳಲ್ಲಿ ತೊಡಗಿರುವ ಕಾರ್ಯದರ್ಶಿ ವಿರುದ್ಧ ರೈತ ಸಂಘ ದೂರು ನೀಡಿದ್ದು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ಎನ್ನುವುದನ್ನು ಕಾದು ನೋಡಬೇಕಿದೆ.

ರೇಗಾ ಯೋಜನೆ ಸಮರ್ಪಕವಾಗಿ ಜಾರಿಯಾಗದಿರುವುದು ಒಂದೆಡೆಯಾದರೆ ನಡೆದಿರುವಂಥ ಕಾಮಗಾರಿಗಳಲ್ಲಿ ಸಾಕಷ್ಟು ಅವ್ಯವಹಾರಗಳನ್ನು ಅಧಿಕಾರಿಗಳು ನಡೆಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮಂಜೂರಾಗಿರುವ ಉದ್ಯೋಗ ಚೀಟಿಗಳನ್ನು ಆಯಾ ವ್ಯಾಪ್ತಿಗೆ ನೀಡದೆ ಅಧಿಕಾರಿಗಳೇ ಇಟ್ಟುಕೊಳ್ಳುತ್ತಿರುವುದು. ಹಿಂದೆ ಹಣ ನುಂಗಿ ಹಾಕುವ ಮರ್ಮ ಅಡಗಿದೆ ಎಂಬುದು ಸೂರ್ಯನ ಬೆಳಕಿನಷ್ಟೆ ಸತ್ಯ. ರೇಗಾ ಯೋಜನೆಯ ಸಂಬಂಧ ಅಗತ್ಯವಾದ ಕಂಪ್ಯೂಟರ್ ಖರೀದಿಯಲ್ಲಿ ಭಾರಿ ಅವ್ಯವಹಾರ ನಡೆದಿದ್ದು ಹಿರಿಯ ಅಧಿಕಾರಿಯೊಬ್ಬರು ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ ಎಂಬ 'ಗಾಳಿಸುದ್ದಿ' ಯ ಸತ್ಯಾಸತ್ಯತೆ ಇನ್ನೂ ಬಯಲಿಗೆ ಬರಬೇಕಾಗಿದೆ ಅಷ್ಟೇ.

ಪಾಳೇಗಾರಿ ಶಕ್ತಿಗಳ ಅಟ್ಟಹಾಸ

ಗ್ರಾಮೀಣ ಪ್ರದೇಶಗಳ ಬಡ ಜನರು ತಮ್ಮ ಹಿಡಿತದಲ್ಲಿದ್ದು ತಮಗೆ ಡೊಗ್ಗು ಸಲಾಮು ಹಾಕುತ್ತಲೇ ಜೀವಮಾನ ಪೂರ್ತಿ ಕಳೆಯಬೇಕೆಂಬ ಪಾಳೇಗಾರಿ ಶಕ್ತಿಗಳ ಅಭಿಲಾಶೆಗೆ 'ರೇಗಾ' ಜಾರಿ ಒಂದು ದೊಡ್ಡ ಅಡ್ಡಿಯಾಗುತ್ತದೆ. ಅಲ್ಲದೆ ತಮ್ಮ ಹೊಲಗಳಿಗೆ ಕಡಿಮೆ ಕೂಲಿಗೆ ಕಾರ್ಮಿಕರು, ವಿಶೇಷವಾಗಿ ಮಹಿಳೆಯರು, ಸಿಗಲಾರರು ಎಂಬ ಆತಂಕವೂ ದೊಡ್ಡ ರೈತರನ್ನು ಕಾಡಲಾರಂಭಿಸಿದೆ. ಈ ಹಿನ್ನೆಲೆಯಲ್ಲಿ ಸದಾ ಲಂಚದ ಹಣಕ್ಕೆ ಹಪಾಹಪಿಸುವ ಸರ್ಕಾರಿ ಅಧಿಕಾರಿಗಳನ್ನು ತಮ್ಮ 'ಕೈವಶ' ಮಾಡಿಕೊಂಡು ಈ ಯೋಜನೆಯನ್ನು ವಿಫಲಗೊಳಿಸಲು ಪಾಳೇಗಾರಿ ಹಿತಾಸಕ್ತಿಗಳು ಕ್ರಿಯಾಶೀಲರಾಗಿರುವುದೂ ಕೋಲಾರ ಜಿಲ್ಲೆಯಲ್ಲಿ ಕಂಡು ಬಂದಿರುವ ಅಂಶವಾಗಿದೆ.

'ರೇಗಾ' ಯೋಜನೆಯಿಂದ ಏನೂ 'ಗಿಟ್ಟುವುದಿಲ್ಲ' ಎಂಬ ನಿರಾಸೆಯಿಂದ ಇದರ ಅನುಷ್ಠಾನದ ಬಗ್ಗೆ ಆಸಕ್ತಿ ತಳೆಯದ ಶಾಸಕ ಮಂತ್ರಿಗಳಾದಿಯಾಗಿ ಜನಪ್ರತಿನಿಧಿಗಳು, ಅವರ ತಾಳಕ್ಕೆ ತಕ್ಕಂತೆ ಕುಣಿಯುವ ಜನಸಾಮಾನ್ಯರನ್ನು ತುಚ್ಛವಾಗಿ ಕಾಣುವ ಅಧಿಕಾರಿ ಹಾಗೂ ಪಾಳೇಗಾರಿ ಪಟ್ಟಭದ್ರ ಹಿತಾಸಕ್ತಿಗಳ ದುಷ್ಟಕೂಟದ ವಿರುದ್ಧ ಇನ್ನಷ್ಟು ಸೆಣಸಿ ಈ ಅಪರೂಪದ ಯೋಜನೆಯ ಲಾಭ ಪಡೆದು ಹಸಿವನ್ನು ಹಿಂಗಿಸಿಕೊಳ್ಳಲು ಜನರು ಇನ್ನಷ್ಟು ಸಂಘರ್ಷ ನಡೆಸುವುದು ಅನಿವಾರ್ಯ.



ರಾಯಚೂರು

ಕಡ್ಡೋಣಿ ಜನ ಕಾಣಲಿಲ್ಲ ರಸ್ತೆ

ರಾಯಚೂರು ಜಿಲ್ಲೆ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಯೆಂದು ಹೆಸರು ಪಡೆದಿದೆ. ಸ್ವಾತಂತ್ರ್ಯ ಬಂದು 6 ದಶಕಗಳಾದರೂ ಬಸ್ಸಿನ ಮುಖವನ್ನೇ ನೋಡದಿರುವ ನೂರಾರು ಹಳ್ಳಿಗಳು ಈ ಜಿಲ್ಲೆಯಲ್ಲಿವೆ. ಆದರೆ ಸರ್ವಸಾಮಾನ್ಯವಾಗಿ ರಸ್ತೆ ಮತ್ತು ವಿದ್ಯುತ್ ಎಲ್ಲಾ ಹಳ್ಳಿಗಳನ್ನು ತಲುಪಿವೆ ಎಂದು ಭಾವಿಸಲಾಗಿತ್ತು. ಆದರೆ ಈ ಭಾವನೆಯನ್ನು ಹುಸಿಗೊಳಿಸುವಂಥ ಹೋರಾಟ ಲಿಂಗಸೂಗೂರು ಪಿಡಬ್ಲೂಡಿ ಇಲಾಖೆ ಕಛೇರಿ ಮುಂದೆ ಕಡ್ಡೋಣಿ ಗ್ರಾಮದ ಪ್ರಾಂತ ರೈತ ಸಂಘದವರು ನಡೆಸಿದ್ದಾರೆ.

ಲಿಂಗಸೂಗೂರು ತಾಲ್ಲೂಕಿನ ರೋಡಲಬಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಈ ಕಡ್ಡೋಣಿ ಗ್ರಾಮ ಬರುತ್ತದೆ. ಈ ಗ್ರಾಮದ 3 ದಿಕ್ಕಿಗೆ ಹಳ್ಳಿಗಳಿದ್ದು ಒಂದು ದಿಕ್ಕಿನಲ್ಲಿ ಹಳ್ಳ ಬರುತ್ತದೆ. ಈ 3 ದಿಕ್ಕಿನಿಂದಲೂ ಸಂಪರ್ಕವಾಗಿ ಬಂಡಿ ರಸ್ತೆಗಳಿವೆ. ಆದರೆ ಒಂದೇ ಒಂದು ಗ್ರಾಮ ರಸ್ತೆಯಿಲ್ಲ. ಮಳೆಗಾಲ ಬಂತೆಂದರೆ ಈ ಗ್ರಾಮಕ್ಕೆ ಉಳಿದ ಹಳ್ಳಿಗಳ ಸಂಪರ್ಕ ಕಡಿದು ಹೋಗುತ್ತದೆ. ಯಾಕೆಂದರೆ ಕಪ್ಪು ಎರೆಮಣ್ಣು ಎಲ್ಲಾ ದಿಕ್ಕಿನಿಂದಲೂ ಆವರಿಸಿದೆ. ಮಳೆ ಬಂದಾಗ ಈ ಮಣ್ಣು ರಾಡಿಯಾಗಿ ಪರಿವರ್ತನೆ ಯಾಗುತ್ತದೆ. ಆಗ ಮನುಷ್ಯರಾಗಲಿ ಅಥವಾ ಪಶುಗಳಾಗಲಿ ತಿರುಗಾಡಲು ಅಸಾಧ್ಯವಾಗುತ್ತದೆ.

ಮಳೆಗಾಲದಲ್ಲಿ ಅನಾರೋಗ್ಯಕ್ಕೆ ಬಲಿಯಾಗಿ ಕೇವಲ 4 ಕಿ.ಮೀ. ದೂರ ಇರುವ ಹಟ್ಟಿಗ್ರಾಮ ತಲುಪಲಾಗದೆ ಸೂಕ್ತ ಚಿಕಿತ್ಸೆ ಸಿಗಲಾಗದೆ ಮರಣವನ್ನಪ್ಪಿ ದವರಿದ್ದಾರೆ. ಬಾಣಂತಿಯರಂತೂ ಮಳೆಗಾಲ ಬಂತೆಂದರೆ ಗಂಡನ ಮನೆ ಬಿಟ್ಟು ತವರುಮನೆ ಸೇರುತ್ತಾರೆ. ಅಷ್ಟೇಕೆ ಈ ರಸ್ತೆ ಕಾರಣಕ್ಕೆ ಈ ಗ್ರಾಮದ ಯುವಕರಿಗೆ ಹೆಣ್ಣು ಕೊಡಲು ಹಿಂದೆ ಮುಂದೆ ನೋಡಿದ ಪ್ರಸಂಗಗಳಿವೆ. ಗ್ರಾಮದ ಮೂರ್ನಾಲ್ಕು ಜನ ಹಟ್ಟಿ ಕಂಪನಿಯಲ್ಲಿ ನೌಕರಿ ಮಾಡುತ್ತಾರೆ. ಅವರು ಮಳೆಗಾಲ ಬಂತೆಂದರೆ ಹಟ್ಟಿ ಸೇರುತ್ತಾರೆ. ಹೀಗಾಗಿ ಎರಡೂ ಊರಲ್ಲಿ ಮನೆ ಮಾಡಿಕೊಂಡಿದ್ದಾರೆ. ಈ ರಸ್ತೆ ಕಾರಣಕ್ಕೆ ಈ ಗ್ರಾಮದ ಬಾಲಕ-ಬಾಲಕಿಯರಲ್ಲಿ ಎಷ್ಟೋ ಜನರ ವಿದ್ಯಾಭ್ಯಾಸ ಕೇವಲ 5ನೇ ತರಗತಿಗೆ ಮೊಟಕುಗೊಂಡಿದೆ.



ಅಹೋ ರಾತ್ರಿ ಹೋರಾಟ ನಿರತರು

ಇಷ್ಟೆಲ್ಲಾ ಅನಾಹುತಗಳಿಗೆ ಕಾರಣವಾದ ಈ ರಸ್ತೆಯನ್ನು ಒಂದು ದಿಕ್ಕಿನಲ್ಲಾದರೂ ನಿರ್ಮಿಸಲು ಯಾವೊಬ್ಬ ಜನಪ್ರತಿನಿಧಿಯಾಗಲಿ ಅಥವಾ ಇಲಾಖೆಯಾಗಲಿ ಕಳೆದ 6 ದಶಕಗಳಲ್ಲಿ ಮುಂದಾಗಲ್ಲ. ಪ್ರತಿ ಚುನಾವಣೆ ಗ್ರಾಮಸ್ಥರೆಲ್ಲಾ ಹನುಮಂತದೇವರ ದೇವಸ್ಥಾನದಲ್ಲಿ ಸೇರುತ್ತಾರೆ. ಬಂದಂತಹ ಪ್ರತಿ ರಾಜಕಾರಣಿ ಒಂದೇ ಡೈಲಾಗ್ ಹೇಳುತ್ತಾರೆ. 'ಅಬ್ಬಾ ಈ ಊರಿಗೆ ಬರಲು ಅಂದರೆ ಹಟ್ಟಿಯಿಂದ ನಿಮ್ಮ ಗ್ರಾಮಕ್ಕೆ ರಸ್ತೆ ನಿರ್ಮಾಣ' ಎನ್ನುತ್ತಾರೆ ಜನ ಖುಷಿಯಿಂದ ಚಪ್ಪಾಳೆ ಹಾಕುತ್ತಾರೆ.

ಕಳೆದ ಮೂರ್ನಾಲ್ಕು ದಶಕಗಳಿಂದ ಯಾರೇ ಆರಿಸಿ ಬರಲಿ ಅವರ ಮನೆಗೆ ವರ್ಷಕ್ಕೆ ಎರಡು-ಮೂರು ಸಾರಿ ಟ್ರಾಕ್ಟರ್‌ನಲ್ಲಿ ಗ್ರಾಮದ ಹಿರಿಯರೆಲ್ಲಾ ಸೇರಿ ಹೋಗುತ್ತಾರೆ, ಮನವಿ ಕೊಡುತ್ತಾರೆ. ಮನವಿ ಪಡೆದ ಶಾಸಕರು ಆಶ್ವಾಸನೆ ಕೊಡುತ್ತಾರೆ. ಜನ ಸಂತೋಷದಿಂದ ರಸ್ತೆ ಆಗುವ ಕನಸು ಕಾಣುತ್ತಾ ಬರುತ್ತಾರೆ. ಇದು ವಿಕ್ರಮಾದಿತ್ಯ ಬೇತಾಳವನ್ನು ಮರಳಿ-ಮರಳಿ ಹೊತ್ತ ಘಟನೆಯಂತಿದೆ. ಕಳೆದ ಐದಾರು ದಶಕಗಳಿಂದ ಶಾಸಕರುಗಳು ಸುಳ್ಳಾಡ್ತಾ ಬರುತ್ತಿದ್ದರೂ ಜನರಿಗೆ ಅನ್ಯ ಮಾರ್ಗ ಗೊತ್ತಿಲ್ಲದೆ ಇರುವುದರಿಂದ ಮರಳಿ ಯತ್ನವ ಮಾಡೋಣ ಎಂಬಂತೆ ಅದನ್ನೇ ಮಾಡುತ್ತಿದ್ದರು.

ಆದರೆ ಕಳೆದ ಆಗಸ್ಟ್‌ನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ನಂದವಾಡಗಿ ಏತ ನೀರಾವರಿ ಮಂಜೂರಾತಿಗಾಗಿ ತಿಂಗಳುಗಟ್ಟಲೆ ಅಹೋರಾತ್ರಿ ಹೋರಾಟ ನಡೆಸುತ್ತಿದ್ದಾಗ ತಮ್ಮ ಸುತ್ತಲಿನ ಜನತೆ ಈ ಯೋಜನೆ ಕೈಬಿಡಲಾಗಿದೆ, ಮಂಜೂರಿಯಾಗುವುದಿಲ್ಲ ಎಂದೆಲ್ಲಾ ಮಾತನಾಡಿಕೊಳ್ಳುತ್ತಿರುವಾಗ ಹೋರಾಟದಿಂದ ಯೋಜನೆಯ ಮಂಜೂರಾತಿ ಆದೇಶ ಪಡೆಯ ಲಾಯಿತು. ಆ ಕ್ರಿಯೆ ಗ್ರಾಮಸ್ಥರಿಗೆ ಒಂದು ಪರ್ಯಾಯ ದಾರಿ ಕಲ್ಪಿಸಿ ಕೊಟ್ಟಿತು.

ಆಗ ಗ್ರಾಮದ ರೈತರು ಒಂದು ರೈತ ಮುಖಂಡರ ಮುಂದೆ ತಮ್ಮ ಗೋಳಿನ ಕತೆ ಹೇಳಿದರು. ಗ್ರಾಮದಲ್ಲಿ ಸಂಘ ಕಟ್ಟಿದರು. ರಸ್ತೆಗಾಗಿ ಒಂದು ಮೆರವಣಿಗೆ ತೆಗೆದು ಮನವಿ ಪತ್ರ ಕೊಟ್ಟಿತು. ಮತ್ತೆ ಆಶ್ವಾಸನೆ ಸಿಕ್ಕಿತು. ರಸ್ತೆ ಆಗಲಿಲ್ಲ. ಆದರೆ ಈಗ 29-01-2009ರಿಂದ ಪಿಡಬ್ಲ್ಯೂಡಿ ಇಲಾಖೆ ಮುಂದೆ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆದಿದೆ. 15 ದಿನಕ್ಕಾಗುವಷ್ಟು ಅಕ್ಕಿ, ಬ್ಯಾಳಿ ಇತರ ಪದಾರ್ಥಗ ಜೊತೆಗೆ ಚೀಲಗಟ್ಟಲೆ ರೊಟ್ಟಿಗಳನ್ನು ಮಾಡಿಸಿಕೊಂಡು ಬಂದಿದ್ದಾರೆ. ಕಛೇರಿ ಮುಂದೆಯ ಅಡುಗೆ ಮಾಡಿಕೊಳ್ಳುತ್ತಾರೆ. ಈಗ ಸುಳ್ಳಾಡುತ್ತ ಬಂದಿರುವ ಅಧಿಕಾರಿಗಳಿಗೆ ಪಜೀತಿಗೆ ಇಟ್ಟುಕೊಂಡಿದೆ ರೈತರು ಮಾಡಿಕೊಂಡು ಬಂದಿರುವ ತಯಾರಿ ನೋಡಿದರೆ ಅಹೋರಾತ್ರಿ ಧರಣಿ ತಿಂಗಳುಗಟ್ಟಲೆ ಕಳೆದರೂ ನಡೆಸುವ ತಾಕತ್ತು ಅಧೀರಗೊಳಿಸಿದೆ. ಪತ್ರಿಕೆಗಳು ಸ್ವಾತಂತ್ರ್ಯ ಬಂದು 6 ದಶಕ ಕಳೆದರೂ ರಸ್ತೆ ಕಾಣದ ಗ್ರಾಮವೊಂದಿದೆ ಎಂಬುದಕ್ಕೆ ಹೆಚ್ಚು ಪ್ರಚಾರ ಕೊಡುತ್ತಲೇ ಆಳಿ ಹೋದ ಶಾಸಕರ, ಮಂತ್ರಿಗಳ ಮತ್ತು ಅಧಿಕಾರಿಗಳ ಬಣ್ಣ ಬಯಲು ಮಾಡುತ್ತಿದ್ದಾರೆ. ಹೋರಾಟಗಾರರಿಗೆ ಹಲವು ದಿಕ್ಕಿನಿಂದ ರೈತರಿಂದ, ಮಹಿಳೆಯರಿಂದ, ಕಾರ್ಮಿಕರಿಂದ, ವಿದ್ಯಾರ್ಥಿಗಳಿಂದ ಬೆಂಬಲ ಸಿಗುತ್ತಿದೆ ಹೋರಾಟ ಮುನ್ನಡೆದಿದೆ.

ವರದಿ : **ಮಲ್ಲಯ್ಯಜಾಲಹಳ್ಳಿ**

.....ಬೆಂಗಳೂರು ಫಿಲಂ ಉತ್ಸವ

ಪುಟ 16 ರಿಂದ

(ಅತ್ಯಂತ ದಡ್ಡರಿಗಾಗಿ ಇರುವ ವಿಶೇಷ ಸ್ಕೂಲಿನ ವಿದ್ಯಾರ್ಥಿಗಳು ಮತ್ತು ಅವರನ್ನು ಹಾಗೆ ಇರುವಂತೆ ಮಾಡಲು ಶ್ರಮಿಸುತ್ತಿರುವ) ಪರಿಚಯ ಆಯ್ತು. ಇವುಗಳಲ್ಲಿ (ಮಾತ್ರವಲ್ಲ ನಾನು ನೋಡಿದ ಎಲ್ಲಾ ಫಿಲಂಗಳಲ್ಲಿ) ಇರಾನಿನ ಮಜೀದ್ ಮಜೀದಿಯ 'ಗುಬ್ಬಿಗಳ ಹಾಡು' ಅತ್ಯಂತ ಉತ್ತಮ ಫಿಲಂ ಆಗಿತ್ತು.

ಚಿತ್ರಭಾರತಿ ವಿಭಾಗದಲ್ಲಿ ನೋಡಿದ್ದು ಒಂದೇ ಆದರೂ 'ಸಮ್ಮರ್ 2007' ಅತ್ಯುತ್ತಮ ಆಯ್ಕೆಯಾಗಿತ್ತು. ಮಹಾರಾಷ್ಟ್ರದ ವಿದರ್ಭ ಪ್ರದೇಶಕ್ಕೆ ಕಡ್ಡಾಯ 'ಗ್ರಾಮೀಣ ಸೇವೆ' ಗೆ ಹೋದ ಶ್ರೀಮಂತ ಸಾಮಾಜಿಕ ಪ್ರಜ್ಞೆ ಇಲ್ಲದ ವೈದ್ಯಕೀಯ ವಿದ್ಯಾರ್ಥಿಗಳು ಗ್ರಾಮೀಣ ಪರಿಸ್ಥಿತಿಯ ಭೀಕರತೆ ಅರಿವಾಗುವ ಪ್ರಕ್ರಿಯೆಯನ್ನು ಸುಂದರವಾಗಿ ಜನಪ್ರಿಯ ಶೈಲಿಯಲ್ಲಿ ಚಿತ್ರಿಸಲಾಗಿದೆ. 'ಸಮ್ಮರ್ 2007' ವಿಧರ್ಭದ ರೈತರ ಆತ್ಮಹತ್ಯೆಯ ಭೀಕರ ಸಮಸ್ಯೆಯನ್ನು ಎರಡು ಭಾರತ (ಬೆಳಗುತ್ತಿರುವ ಮತ್ತು ಸುಡುತ್ತಿರುವ) ಗಳ ನಡುವಿನ ಕಂದಕದ ಹಿನ್ನೆಲೆಯಲ್ಲಿ ಸಶಕ್ತವಾಗಿ ನಮ್ಮ ಮುಂದೆ ಇಡುವ ಎಲ್ಲರೂ ನೋಡಲೇಬೇಕಾದ ಚಿತ್ರ. ತಮ್ಮದೇ 'ಪಾರಿವಾಳಗಳು' ಎಂಬ ಕಥೆ ಆಧರಿಸಿ ತಾವೇ ನಿರ್ದೇಶಿಸಿ ತಯಾರಿಸಿದ ಎ.ಎನ್.ಪ್ರಸನ್ನ ಅವರ 'ಹಾರು ಹಕ್ಕಿಯನೇರಿ' ಒಬ್ಬ ವ್ಯಕ್ತಿ ನಿಧಾನವಾಗಿ ಭ್ರಷ್ಟನಾಗುವ ಕಥೆಯನ್ನು ನವಿರಾಗಿ ಹೇಳುವ ಚಿತ್ರ.

ಫಿನ್‌ಲ್ಯಾಂಡಿನ ಅಕಿ ಕೌರಿಸ್ಮಾಕಿ ಅವರು ಅಲ್ಲಿನ ದಟ್ಟ ದರಿದ್ರ ಕಾರ್ಮಿಕರ ಬದುಕಿನ ಸುತ್ತ ಮೂರು ಚಿತ್ರಗಳನ್ನು ಮಾಡಿದ ಖ್ಯಾತಿ ಹೊಂದಿರುವವರು. ಫಿನ್‌ಲ್ಯಾಂಡಿನ ನಾವು ಕಾಣದ ಮುಖವನ್ನು ಹಾಗೆ ನಮ್ಮ ಮುಂದೆ ಇಡುತ್ತಾರೆ. ಇತ್ತೀಚಿನ ಆರ್ಥಿಕ ಬಿಕ್ಕಟ್ಟಿನ ಛಾಯೆ ದಟ್ಟವಾಗಿರುವ ಅಪರೂಪದ ಚಿತ್ರಗಳು ಅವರವು.

ಇಂತಹ ಫಿಲಂ ಉತ್ಸವಗಳು ಬೇರೇ ರೀತಿಯ ಫಿಲಂ ನೋಡುವ ಹುಚ್ಚನ್ನು ಕೆಲವರಿಗಾದರೂ ಹತ್ತಿಸಬಹುದು. ಫಿಲಂ ಸೊಸೈಟಿ ಚಳುವಳಿಯನ್ನು ಬಲ ಪಡಿಸಬಹುದು. ಸರಾಸರಿ ಫಿಲಂ ಅಭಿರುಚಿ ನೆಲ ಕಚ್ಚಿರುವ ಸ್ಥಿತಿಯನ್ನು ಸ್ವಲ್ಪವಾದರೂ ಸುಧಾರಿಸಬಹುದು ಎಂದು ಆಶಿಸಬೇಕಾಗಿದೆ. ಫಿಲಂ ಸೊಸೈಟಿಗಳ ಒಕ್ಕೂಟದ ಸುವರ್ಣ ಉತ್ಸವದ ಆಚರಣೆ ಕೆಲವು ಹಿರಿಯರನ್ನು ಸನ್ಮಾನಿಸುವುದಕ್ಕೆ ಸೀಮಿತವಾಯಿತು. ಫಿಲಂ ಸೊಸೈಟಿಗಳನ್ನು ಬಲಪಡಿಸಿ ವಿಸ್ತರಿಸಲು ಈ ಸಂದರ್ಭದ ಬಳಕೆ ಅಷ್ಟಾಗಿ ಆಗಲಿಲ್ಲ ಎಂದು ಹೇಳದೇ ವಿಧಿಯಿಲ್ಲ. ಇನ್ನು ಮುಂದೆ ಆದರೂ ಆಗಬೇಕಾದ ಕೆಲಸ ಇದು.

ನಾನು ನೋಡಿದ ಫಿಲಂಗಳು

ಜಾಗತಿಕ ಸಿನಿಮಾ

'ಧೂಳಿನ ಕನಸುಗಳು' - (ಆಫ್ರಿಕಾದ ಬರ್ಕಿನಾ ಫಾಸೋ)

'ಸಮೂಹಗಾನ' - ಫ್ರಾನ್ಸ್

'ಗುಬ್ಬಿಗಳ ಹಾಡು' - ಇರಾನ್

'ತುಲ್‌ಪಾನ್' - ಕಝಾಕಿಸ್ತಾನ್

'ಮೂರು ಕೋತಿಗಳು' - ತುರ್ಕಿ

ಚಿತ್ರಭಾರತಿ

'ಸಮ್ಮರ್ 2007' - ಹಿಂದಿ

ದೇಶದ ಮೇಲೆ ಬೆಳಕು

ಮಿರುಶ್ - ನಾರ್ವೆ

ಕಾಟಿನ್ - ಪೋಲೆಂಡ್

ವಾರ್ಸಾ - ಪೋಲೆಂಡ್

ಮೇಯುವವರು - ಇಟಲಿ

ಜಾಗತಿಕ ನಿರ್ದೇಶಕರ ವಿಶೇಷ ಸಿಂಹಾವಲೋಕನ

ಸ್ವರ್ಗದಲ್ಲಿ ನೆರಳುಗಳು- ಅಕಿ ಕೌರಿಸ್ಮಾಕಿ

ಮ್ಯಾಚ್ ಫ್ಯಾಕ್ಟರಿ ಹುಡುಗಿ-ನಿನ್ನೆಗಳಿಲ್ಲದ ಮನುಷ್ಯ

ಕಟ್ಟಿದ ಕೈಗಳು - ಡಾನ್ ವೊಲ್ಮನ್

ಡಿವಿಡಿ - ಜರ್ಮನ್ ಫಿಲಂಗಳ ಅಧ್ಯಯನ

'ಗುಡ್ ಬೈ ಲೆನಿನ್'- ವೊಲ್ಫ್ ಗಾಂಗ್ ಬೆಕರ್

ಶಬ್ದದಿಂದ ಬಿಂಬ

ಹಾರು ಹಕ್ಕಿಯನೇರಿ - ಎ.ಎನ್.ಪ್ರಸನ್ನ

ಪ್ರೇಮಿಗಳ ದಿನಾಚರಣೆ : ಶ್ರೀರಾಮಸೇನೆಯ ಗೂಂಡಾ ಬೆದರಿಕೆ ಡಿವೈಎಫ್ಐ ಖಂಡನೆ

ಪ್ರೀತಿಸುವುದು, ಪ್ರೇಮಿಗಳು ಒಟ್ಟಾಗಿ ...ಾಡುವುದು, ಪ್ರೇಮಿಗಳ ದಿನಾಚರಣೆ ...ರಿಸುವುದು ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ...ರ ಮತ್ತು ವೈಯಕ್ತಿಕ ವಿಚಾರ. ಭಾರತೀಯ ...ಸ್ಕೃತಿ ರಕ್ಷಣೆಯ ಹೆಸರಿನಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ... ಮಾಡಲು ಹಾಗೂ ದೈಹಿಕವಾಗಿ ಧಾಳಿ ಮಾಡಲು ...ರಿಗೂ ಹಕ್ಕಿಲ್ಲ. ಈ ವಿಚಾರದಲ್ಲಿ ಪ್ರೇಮಿಗಳ ...ಚರಣೆಯನ್ನು ಆಚರಿಸುವ ಯುವ ಜೋಡಿಗಳನ್ನು ...ತ್ಕಾರವಾಗಿ ತಾಳಿ ಕಟ್ಟಿಸಿ ಮದುವೆ ...ಡಿಸುವುದು, ಒಪ್ಪದಿದ್ದರೆ ರಾಖಿ ಕಟ್ಟಿಸುವುದಾಗಿ ...ದರಿಕೆ ಒಡ್ಡುತ್ತಿರುವ ಶ್ರೀರಾಮಸೇನೆಯ ...ಕ್ತಿಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ...ೇಷನ್(ಡಿವೈಎಫ್ಐ) ಕರ್ನಾಟಕ ರಾಜ್ಯ ...ುತಿ, ಎಸ್ಎಫ್ಐ, ಮಹಿಳಾ ಸಂಘಟನೆಗಳು ...ವ್ರವಾಗಿ ಖಂಡಿಸುತ್ತದೆ.

ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಧಾರ್ಮಿಕ ...ೂಲಭೂತವಾದವನ್ನು ಸಮಾಜದ ಮೇಲೆ ...ೇರಲು ಪ್ರಯತ್ನಿಸುತ್ತಿರುವ ಶ್ರೀರಾಮಸೇನೆಗೆ ಪ್ರೀತಿ-ಪ್ರೇಮಕ್ಕೆ ಸ್ಥಾನ ನೀಡಿರುವ ವೈವಿಧ್ಯಮಯವಾದ ಭಾರತೀಯ ಸಂಸ್ಕೃತಿ-ಪರಂಪರೆಯ ಪರಿಚಯವಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇಲ್ಲದೆ, ಪ್ರೇಮ ವಿವಾಹಗಳಿಂದ ಅಂತರ್ ಜಾತಿಯ ವಿವಾಹಗಳು ಹೆಚ್ಚಾಗಿ ಮೇಲು-ಕೀಳೆಂಬ ಜಾತಿ ವ್ಯವಸ್ಥೆಗೆ ಧಕ್ಕೆಯಾಗುತ್ತದೆಂದು ಹಾಗೂ ಹಿಂದೂ ಮೂಲಭೂತವಾದಿಗಳ ವೈದಿಕ ಪರಂಪರೆಗೆ ಹಾನಿಯಾಗುತ್ತದೆಂದು ಇಂತಹ ಗೂಂಡಾಗಿರಿಗೆ ಇಳಿದಿದೆ. ನಿಜವಾಗಲೂ ಶ್ರೀರಾಮಸೇನೆಗೆ ನೈಜ ಕಾಳಜಿ ಇದ್ದರೆ ಜಾಗತೀಕರಣದ ದುಷ್ಪರಿಣಾಮಗಳಿಂದಾಗಿ ಶೇ.77ಕ್ಕಿಂತ ಹೆಚ್ಚಿನ ಜನತೆ ದಿನಕ್ಕೆ ರೂ.20ಕ್ಕಿಂತ ಕಡಿಮೆ ಆದಾಯದ ಅಭದ್ರತೆಯಿಂದ ಬದುಕುತ್ತಿದ್ದಾರೆ. ಹೀಗಾಗಿ ಆಹಾರ-ವಸತಿ-ಆರೋಗ್ಯ-ಶಿಕ್ಷಣ-ಉದ್ಯೋಗದಿಂದ ವಂಚಿತರಾಗಿರುವ ವಿಭಾಗದ ಬಗ್ಗೆ ಶ್ರೀರಾಮಸೇನೆ ಹೋರಾಡಲಿ. ಜೊತೆಗೆ ಇದೇ ಜಾಗತೀಕರಣದ ನೀತಿಗಳಿಂದ ಮಾಧ್ಯಮಗಳಲ್ಲಿನ ಅಶ್ಲೀಲತೆಯ ವಿರುದ್ಧ ಹೋರಾಡಲಿ ಎಂದು ಸಂಘಟನೆಗಳು ಶ್ರೀರಾಮಸೇನೆಗೆ ತಿಳಿ ಹೇಳಿವೆ.

ಶ್ರೀರಾಮಸೇನೆಯ ಸಾಂಸ್ಕೃತಿಕ ಗೂಂಡಾಗಿರಿಯ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಂಡು ಮುನ್ನೆಚರಿಕೆಯ ಕ್ರಮವಾಗಿ ಈ ರೀತಿ ಬೆದರಿಕೆಯೊಡ್ಡುವವರನ್ನು ಬಂಧಿಸಬೇಕು. ಇಲ್ಲವಾದಲ್ಲಿ ಫೆ.14ರಂದು ಸಂಭವಿಸಬಹುದಾದ ಅವಘಡಗಳಿಗೆ ಸರ್ಕಾರವೇ ನೇರ ಹೊಣೆ ಹೊರಬೇಕಾಗುತ್ತದೆ ಎಂದೂ ಎಚ್ಚರಿಸಿವೆ.

ಫೆಬ್ರವರಿ 17 ಅಭಿಯಾನದ ವಿರುದ್ಧ ಕೋಮುವಾದ - ಭಯೋತ್ಪಾದನೆ ವಿರೋಧಿಸಿ ಪ್ರತಿಭಟನೆ

...ಇದು ರಾಜ್ಯದ ಕೋಮುಸೌಹಾರ್ದತೆ, ಜಾತ್ಯಾತೀತ ...ರಂಪರೆ, ಸಂವಿಧಾನಾತ್ಮಕ ನಿಯಮಾವಳಿಗಳಿಗೆ ಧಕ್ಕೆ ...ತ್ತದೆ. ಇನ್ನೂ ಮುಖ್ಯವಾಗಿ ಯುವಶಕ್ತಿಯ ನಡುವೆ ...ಿದ್ರಕಾರಿ ಪ್ರವೃತ್ತಿಗಳನ್ನು ಹುಟ್ಟುಹಾಕಿ ದೇಶದ ...ವೃದ್ಧಿಗೆ ಮಾರಕವಾಗುತ್ತದೆ. ಹೀಗಾಗಿ ...ವೇಕಾನಂದರ ಹೆಸರಿನಲ್ಲಿ ಕೊಂಡೊಯ್ಯುತ್ತಿರುವ ...ೋಮುದ್ವೇಷ ಬೆಳೆಸುವ 'ಹಿಂದುತ್ವ ಸಂದೇಶ'ದ ...ಭಿಯಾನವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ...ಾಗೆಯೇ ಎಲ್ಲಾ ಬಗೆಯ ಭಯೋತ್ಪಾದನೆಯನ್ನು ...ರೋಧಿಸಿ ವಿಆರ್ಶ್ವರ್ಥಿ ಯುವಜನರ ನಡುವೆ ...ಕ್ಯತೆ ಮತ್ತು ಸೌಹಾರ್ದತೆಯನ್ನು ನೆಲೆಗೊಳಿಸುವ ...ಕ್ಯತೆ ನಿಟ್ಟಿನಲ್ಲಿ ವಿವಿಧ ವಿದ್ಯಾರ್ಥಿ,ಯುವಜನ ...ಂಘಟನೆಗಳು ಜೊತೆಗೂಡಿ ಜಂಟಿ ...ಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಫೆ.17 ರಂದು ಬೆಂಗಳೂರಿನಲ್ಲಿ ಕರ್ನಾಟಕ ಪ್ರದೇಶ ...ುವ ಕಾಂಗ್ರೆಸ್, ಎನ್.ಎಸ್.ಯು.ಐ; ...ಸ್.ಎಫ್.ಐ, ಡಿ.ವೈ.ಎಫ್.ಐ, ...ಐ.ಎಸ್.ಎಫ್, ಎ.ಐ.ವೈ.ಎಫ್, ...ಯುವಜನತಾದಳ (ಜಾತ್ಯಾತೀತ) ...ವಿದ್ಯಾರ್ಥಿಜನತಾದಳ(ಜಾತ್ಯಾತೀತ),ದಲಿತ ...ವಿದ್ಯಾರ್ಥಿ ಒಕ್ಕೂಟ (ಅಂಬೇಡ್ಕರ್ ವಾದ) ...ಂತಾದ ಪ್ರಗತಿಪರ ಸಂಘಟನೆಗಳ ವತಿಯಿಂದ ...ಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ...ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಇದ್ದದ್ದು ಇದ್ಹಾಂಗ

'ಕಾವ್ಯ ಅಸಹಾಯಕನ ಬೆಚ್ಚನೆಯ ಕಣ್ಣೀರು ಆಗಬೇಕೇ ಹೊರತು, ಸುಖದ ಜನರ ಝಲಕ್ ಆಗಬಾರದು ಅದು ಹೊಟ್ಟೆ ತುಂಬಿದವರ ವಾಕರಿಕೆಯಾಗದೆ ಹಸಿದವರ ಎರಡು ಅಗುಳು ಅನ್ನವಾಗಬೇಕಾಗಿದೆ. ಆಗ ಕಾವ್ಯ ತನ್ನ ಸಾರ್ಥಕತೆ ಪಡೆಯುತ್ತದೆ'

ಡಾ: ಎಲ್.ಹನುಮಂತಯ್ಯ, ಕವಿಗಳು, ಚಿತ್ರದುರ್ಗ ಸಾಹಿತ್ಯ ಸಮ್ಮೇಳನದಲ್ಲಿ

★

'ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಮೊದಲು ಮದುವೆಯಾಗಿ ಮನುಷ್ಯನಾಗಿ ಬಾಳಲಿ. ಬಳಿಕ ಪ್ರೇಮಿಗಳಿಗೆ ಮದುವೆ ಮಾಡಿಸಲಿ'

-ಪ್ರೊ: ಬಿ.ಕೆ. ಚಂದ್ರಶೇಖರ್

ಚುಚ್ಚುಮದ್ದು

ಗಾಂಧಿ ಸಿದ್ಧಾಂತ ಜಾರಿ - ರಾಮಮಂದಿರ ಖಚಿತ!!

■ "ಇದೀಗ ಜಗತ್ತು ಕಮ್ಯುನಿಸಂ ಪತನ ಮತ್ತು ಬಂಡವಾಳಶಾಹಿಯ ಬಿಕ್ಕಟ್ಟಿನಲ್ಲಿ ನಲುಗುತ್ತಿದೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಗಾಂಧೀ ಪ್ರಣೀತ ಅರ್ಥಶಾಸ್ತ್ರ ನಮಗೆ ವರದಾನವಾಗಬಲ್ಲುದು. ನೂರು ವರ್ಷಗಳ ಹಿಂದೆ ಗಾಂಧೀಜಿ ಹೇಳಿದ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವ ಕಾಲ ಇದೀಗ ಸನ್ನಿಹಿತವಾಗಿದೆ. ಬಿಜೆಪಿ ಪಕ್ಷಕ್ಕೆ ಬಹುಮತ ಬಂದರೆ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಖಚಿತ"

■ **ರಾಜನಾಥಸಿಂಗ್**
ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

▶ ಗೊತ್ತು, ಗೊತ್ತಾಯ್ತು, ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ.

ಸಾದರ ಸ್ವೀಕಾರ



1. 'ಕಮ್ಯೂನಿಸ್ಟ್ ಚಳುವಳಿಯ ರೂವಾರಿ ಪೂರಣ್‌ಚಂದ್ರ ಜೋಶಿ'
ಲೇಖಕರು: ಅನಿಲ್‌ರಾಜಿಮ್ ವಾಲ್
ಕನ್ನಡಕ್ಕೆ : ಬಿ.ವಿ.ಕಕ್ಕಿಲಾಯ
ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ.
ಬೆಲೆ ರೂ.25.00



2. 'ಸ್ಟೀಫನ್ ಹಾಕಿಂಗ್ ಬದುಕು ಮತ್ತು ವಿಚಾರ
ಲೇಖಕರು: ಬಿ.ಎಸ್.ಮಯೂರ
ಬೆಲೆ ರೂ.60.00
ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ.

3. 'ಚಾರ್ವಾಕ' ನಾಟಕ
ಲೇಖಕರು : ಸತ್ಯನಾರಾಯಣರಾವ್ ಅಣತಿ
ಬೆಲೆ : 40 ರೂ.
ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ.

4. 'ಪೂರ್ವೇತಿಹಾಸ'
ಲೇಖಕರು: ಇರ್ಫಾನ್‌ಹಬೀಬ್
ಕನ್ನಡಕ್ಕೆ : ಪ್ರದೀಪ್ ಬೆಳಗಲ್
ಬೆಲೆ ರೂ:80.00




ಭಾರತ ಜ್ಞಾನ ವಿಜ್ಞಾನ ಸಮಿತಿ : ಪ್ರಕಟಣೆಗಳು

5. ಪ್ರವಾಸಿಗರಿಗೆ ಒಂದು ಪತ್ರ
ಬೆಲೆ : 25 ರೂ.

6. ಬೆಲ್ಲಬುಟ್ಟಿ
ಬೆಲೆ : 25 ರೂ.

7. ಚಂದ್ರಯಾನ
ಬೆಲೆ 10 ರೂ.
ಲೇಖಕರು : ಎಚ್. ಆರ್. ರಾಮಕೃಷ್ಣರಾವ್



8. ಚಿಟ್ಟೆಗಳು
ಪದ್ಯಗಳು ವೀರಭದ್ರ ನಾಯ್ಕ
ಬೆಲೆ 10 ರೂ.

ಕವಿತೆ

ನನ್ನೂರಿನ ಮೂರು ಚಿತ್ರಗಳು

ಸದ್ದಿಲ್ಲ ಪದ್ದಿಲ್ಲ
ದಹಿಸುತಿದೆ ಮೌನ

ಧೂಳು ಮೆತ್ತಿ ನಿಂತ
ನೆರಿಕೆಯಲ್ಲಿ
ಅಂಗಾತ ಮಲಗಿದಾತನ
ತಲೆಯ ಬದಿಯಲೊಂದು
ಉರಿವ ದೀಪವಿದೆ
ಆ ಬೆಳಕಿನಲ್ಲಿ
ಅವಳು
ಬಾಯಿಗೆ ಸೆರಗಚ್ಚಿ
ಅಳುವ ಚಿತ್ರವಿದೆ.

ಹೊರಗೆ
ಮಕ್ಕಳು 'ಮಣ್ಣು ತೂರುವ ಆಟ'
ಆಡಿಕೊಂಡಿದ್ದಾರೆ.

ನಾಲ್ಕು ಹೆಗಲುಗಳೊತ್ತ
ಚಟ್ಟದಲ್ಲಿ
ಧೂಳು ಕುಡಿದು ಕ್ಷಯಡಿ
ಸತ್ತ ಮಗನ ಹೆಣವಿದೆ.

ಗುದ್ದಲಿ ಪಿಕಾಸಿಗಳ
ಹೆಗಲಿಗೇರಿಸಿ
ಕೆಲಸಕೆಂದು ಹೊಂಟು ನಿಂತವರು
'ಗುದ್ದು' ತೆಗೆಯಲು
ಮಸಣದೆಡೆಗೆ
ದಾರಿ
ಬದಲಿಸಿದ ಸುದ್ದಿಯಿದೆ.

ಸುದ್ದಿಲ್ಲ... ಸುಡುಗಾಡಿಲ್ಲ...
ಅನ್ನುವಂತಿಲ್ಲ,
ಮುಂಜಾನೆಯೆದ್ದು ತಂಗಳರೊಟ್ಟಿಗೆ
ಕೆಂಪು ಮೆಣಸಿನಕಾಯಿ ಹಚ್ಚಿಟ್ಟು
ತೆರೆದ ಬಾಗಿಲು ತೆರೆದೇ ಇರಿಸಿ
ಕಂದನನು ಅಂಗಳದಲ್ಲಿ
ಬಿಟ್ಟು ಹೋದವಳು
ಚಟ್ಟದಲ್ಲಿ ಮೆರವಣಿಗೆ
ಹೊಂಟು ನಿಂತಾಗ
ಝುಡ್ಡಿಣಕ... ಝುಡ್ಡಿಣಕ....
ಹಲಗೆಯ ನಾದಕೆ
ಕುಣಿವ ಮಕ್ಕಳ ಗುಂಪಿನಲ್ಲಿ
ತಂಗಳರೊಟ್ಟಿಯ ಅವಳ ಕಂದ
ಕುಣಿಯುತ್ತಿದ್ದಾನೆ.

ಸುದ್ದಿಲ್ಲ... ಸುಡುಗಾಡಿಲ್ಲ....
ಅನ್ನುವಂತಿಲ್ಲ...

■ ಬಿ.ಶ್ರೀನಿವಾಸ



ದಿಟ್ಟ ಹೆಜ್ಜೆ ಹಾಕಿ ನಡೆಯಲು ಆರಂಭಿಸಿದ 3ನೇ ಬೆಂಗಳೂರು ಫಿಲಂ ಉತ್ಸವ

ಜನವರಿ 16 ರಿಂದ 22 ವರೆಗೆ ಒಂದು ವಾರ ನಡೆದ ಬೆಂಗಳೂರು ಅಂತರ್ರಾಷ್ಟ್ರೀಯ ಫಿಲಂ ಉತ್ಸವ ಮೂರನೇಯದು. ಎಲ್ಲಾ ರೀತಿಗಳಲ್ಲೂ - ಫಿಲಂಗಳ ಗುಣಮಟ್ಟ- ವೈವಿಧ್ಯತೆ, ಅಂತರ್ರಾಷ್ಟ್ರೀಯ ಸಿನಿಮಾದ ಪ್ರಾತಿನಿಧಿಕತೆ, ಜನರ ಸ್ಪಂದನದ ಪ್ರಮಾಣ, ಉತ್ಸವದ ಜತೆಗೆ ನಡೆದ ಫಿಲಂಗೆ ಸಂಬಂಧಿಸಿದ ಇತರ ಕಾರ್ಯಕ್ರಮಗಳು (ಪ್ರದರ್ಶನ, ಪುಸ್ತಕ ಸಿ.ಡಿ. ಬಿಡುಗಡೆ, ಸೆಮಿನಾರುಗಳು ಇತ್ಯಾದಿ) - ಈ ಬಾರಿಯ ಉತ್ಸವ ಬೆಳೆದಿದೆ. ಭಾರತದ ಇತರ ನಗರಗಳು ನಡೆಸುವ ಇಂತಹ ಉತ್ಸವಗಳ ಜತೆ ಸರಿಸಾಟಿಯಾಗಿ ನಿಲ್ಲುವ, ಫಿಲಂ ತಯಾರಕರು ನಿರ್ದೇಶಕರೂ ಪ್ರೇಕ್ಷಕರೂ ಎದುರು ನೋಡುವ ಒಂದು ಅಂತರ್ರಾಷ್ಟ್ರೀಯ ಫಿಲಂ ಉತ್ಸವವಾಗಿ ಮಾಗಿದೆ. ತನ್ನದೇ ಸ್ವಂತಿಕೆ ರೂಪಿಸಿಕೊಡಿದೆ. ಮೊದಲ ಎರಡು ವರ್ಷಗಳಲ್ಲಿ ಅಂಬೆಗಾಲಿಟ್ಟು ಹೆಜ್ಜೆ ಹಾಕಲು ಆರಂಭಿಸಿದ್ದ ಉತ್ಸವ ದಿಟ್ಟ ಹೆಜ್ಜೆ ಹಾಕಿ ನಡೆಯಲು ಆರಂಭಿಸಿದೆ.

ಉತ್ಸವದಲ್ಲಿ 175 ಕ್ಕೂ ಹೆಚ್ಚು ಫಿಲಂಗಳ ಪ್ರದರ್ಶನ ನಡೆಯಿತು. ಡಬಲ್ ರಸ್ತೆಯಲ್ಲಿರುವ ವಿಶನ್ ಸಿನೇಮಾಸ್‌ನ ಮೂರು ಹಾಲುಗಳಲ್ಲಿ, ಕೆ.ಎಚ್.ಪಾಟೀಲ್ ಸಭಾಂಗಣದಲ್ಲಿ, ಬಾದಾಮಿ ಹೌಸ್ ಮತ್ತು ಬನಶಂಕರಿಯ ಸುಚಿತ್ರ ಹಾಲ್ ನಲ್ಲಿ ಪ್ರತೀ ದಿನ ಐದು ಶೋಗಳಲ್ಲಿ ತೋರಿಸಲಾಯಿತು. ಎಲ್ಲಾ ಡಾಕ್ಯುಮೆಂಟರಿಗಳನ್ನು ವಿಶನ್ ಸಿನೇಮಾಸ್ ಹಾಲ್-3 ರಲ್ಲಿ, ಎಲ್ಲಾ ಡಿಜಿಟಲ್ ಫಿಲಂಗಳನ್ನು ಕೆ.ಎಚ್.ಪಾಟೀಲ್ ಸಭಾಂಗಣದಲ್ಲಿ ಮತ್ತು ಕನ್ನಡ ಸಿನಿಮಾದ ಸಿಂಹಾವಲೋಕನವನ್ನು ಪ್ರಮುಖವಾಗಿ ಬಾದಾಮಿ ಹೌಸ್ ನಲ್ಲಿ ಪ್ರದರ್ಶಿಸಲಾಯಿತು.

ಉತ್ಸವದಲ್ಲಿ ಹಲವು ವಿಭಾಗಗಳು ಇದ್ದವು. 'ಜಾಗತಿಕ ಸಿನಿಮಾ' ವಿಭಾಗದಲ್ಲಿ 19 ದೇಶಗಳಿಂದ ಬಂದ 27 ಫಿಲಂಗಳು ಇದ್ದವು. ಈ ಉತ್ಸವದಲ್ಲಿ ಮೂರು ದೇಶಗಳ - ಇಟಲಿ (8), ನಾರ್ವೇ(4), ಪೋಲೆಂಡ್ (5) -ಮೇಲೆ ವಿಶೇಷ ಬೆಳಕು ಬೀರುವ 17 ಫಿಲಂಗಳ ವಿಭಾಗವಿತ್ತು. ನಾಲ್ಕು ಖ್ಯಾತ ನಿರ್ದೇಶಕರ - ಅಲನ್ ರೆನಾಯ್ (ಫ್ರಾನ್ಸ್), ಅಕಿ ಕೌರಿಸ್ಮಾಕಿ (ಫಿನ್ ಲ್ಯಾಂಡ್), ಡಾನ್ ಉಲ್ಮನ್ (ಇಸ್ರೇಲ್), ಕಿಮ್ ಕಿ ಡುಕ್ (ದ. ಕೊರಿಯಾ) - ಒಟ್ಟು 27 ಫಿಲಂಗಳ ವಿಶೇಷ ಸಿಂಹಾವಲೋಕನ ಇತ್ತು. ಅಗಲಿದ ಆರು - ಯೂಸೋಫ್ ಚಾಹೀನ್, ಕೊನ್ ಇಚಿಕಾವಾ, ವಿಜಯ್ ತೆಂಡುಲ್ಕರ್, ಎಂ.ಪಿ.ಶಂಕರ್, ಕೆ.ವಿ.ಜಯರಾಂ, ಆರ್.ಎನ್.ಜಯಗೋಪಾಲ್ - ಖ್ಯಾತ ನಿರ್ದೇಶಕರಿಗೆ ಶ್ರದ್ಧಾಂಜಲಿಯ ವಿಭಾಗದಲ್ಲಿ ಎಂಟು ಫಿಲಂಗಳು ಇದ್ದವು. ಚಿತ್ರಭಾರತಿ ಎಂಬ 10 ಹೊಸ ಉತ್ತಮ ಭಾರತೀಯ ಚಿತ್ರಗಳ ವಿಭಾಗ ಇತ್ತು. ಇವಲ್ಲದೆ ಫಿಲಂ ಆಗರದಿಂದ ಆಯ್ದ ಮೂರು ವಿಶೇಷ ಜಾಗತಿಕ ಫಿಲಂಗಳೂ ಇದ್ದವು.

ಇವಲ್ಲದೆ ಡಿವಿಡಿ ವಿಭಾಗದಲ್ಲಿ ಪೋರ್ಚುಗಲ್ ನಿರ್ದೇಶಕ ಮೆನುವೆಲ್ ಡಿ ಒಲಿವೇರಾ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ವಿಶೇಷ ಸಿಂಹಾವಲೋಕನ (9), ಜರ್ಮನಿಯ ಫಿಲಂಗಳ ಅಧ್ಯಯನ (5 ಫಿಲಂಗಳು), ಐದು ದೇಶಗಳ 'ಜಾಗತಿಕ ಸಿನಿಮಾ' (6) ಸಹ ಇದ್ದವು. ಡಾಕ್ಯುಮೆಂಟರಿ ವಿಭಾಗದಲ್ಲಿ 29 ಫಿಲಂಗಳು ಇದ್ದವು. ಸಾಹಿತ್ಯ ಕೃತಿ ಆಧರಿಸಿ ಮಾಡಿದ 10 ಭಾರತೀಯ ಫಿಲಂಗಳ ವಿಶೇಷ ವಿಭಾಗ 'ಶಬ್ದದಿಂದ ಬಿಂಬದತ್ತ' ಸಹ ಇತ್ತು, ಕನ್ನಡ ಸಿನಿಮಾದ ಅಮೃತ ಮಹೋತ್ಸವದ (75 ನೇ ವಾರ್ಷಿಕ) ಸಂದರ್ಭದಲ್ಲಿ ಅದರ ಸಿಂಹಾವಲೋಕನ ಮಾಡುವ 27 ಫಿಲಂಗಳನ್ನು ತೋರಿಸಲಾಯಿತು.

ಕನ್ನಡ ಸಿನಿಮಾದ 75 ವರ್ಷಗಳ ಚರಿತ್ರೆಯ ಹಿನ್ನೋಟ ಮತ್ತು ಇಂದಿನ ಸ್ಥಿತಿಗತಿಗಳ ಬಗ್ಗೆ ವಿಚಾರ ಸಂಕಿರಣ, ಭಾರತದ ಫಿಲಂ ಸೊಸೈಟಿಗಳ



ಒಕ್ಕೂಟದ ಸುವರ್ಣ ಉತ್ಸವ ಮೂರನೆ ಫಿಲಂ ಉತ್ಸವಕ್ಕೆ ವಿಶೇಷ ಕಳೆ ನೀಡಿತು. ಕನ್ನಡ ಸಿನಿಮಾದಲ್ಲಿ ಸಂಗೀತದ ಬೆಳವಣಿಗೆಯ ಹೆಜ್ಜೆಗಳನ್ನು ಗುರುತಿಸಿದ ಡಿವಿಡಿ ಬಿಡುಗಡೆ ಇನ್ನೊಂದು ವಿಶೇಷ. ಸುಚಿತ್ರ ಅಕಾಡೆಮಿ ತಯಾರಿಸಿದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪ್ರಶಸ್ತಿ ವಿಜೇತ ಕನ್ನಡ ಚಿತ್ರಗಳ ಕಿರುನೋಟ ನೀಡುವ ಇನ್ನೊಂದು ಡಿವಿಡಿ ಸಹ ಬಿಡುಗಡೆ ಆಯಿತು.



ಕನ್ನಡದಲ್ಲಿ ಪರ್ಯಾಯ ಸಿನಿಮಾದ ಪ್ರವರ್ತಕರಲ್ಲಿ ಒಬ್ಬರೆಂದು ಹೆಸರಾದ ಎನ್. ಲಕ್ಷ್ಮೀನಾರಾಯಣ್ ಅವರ ಬಗ್ಗೆ ಪ್ರೊ. ಮನು ಚಕ್ರವರ್ತಿ ಬರೆದ ಪುಸ್ತಕ (ಇಂಗ್ಲೀಷ್ ಮತ್ತು ಕನ್ನಡ ಎರಡರಲ್ಲೂ) ಬಿಡುಗಡೆ ಮಾಡಲಾಯಿತು. ಉತ್ಸವದ ಅಧಿಕೃತ ಕಾರ್ಯಕ್ರಮದ ಭಾಗ ಅಲ್ಲದಿದ್ದರೂ ಚಿಂತನ ಪುಸ್ತಕ ಹೊರತಂದ ಎ.ಎನ್.ಪ್ರಸನ್ನರವರ 'ಚಿತ್ರ-ಕತೆ' ಎಂಬ 1940 ರಿಂದೀಚೆಗೆ ಬಂದ 32 ಜಾಗತಿಕ ಸಿನಿಮಾಗಳ ಅವಲೋಕನದ ಬಗೆಗಿನ ಅಪರೂಪದ ಪುಸ್ತಕ ಉತ್ಸವದಲ್ಲಿ ಬಿಡುಗಡೆ ಆಯಿತು. ಅನಿಮೇಶನ್ ಮತ್ತು ಸಿನೆಮಟೊಗ್ರಫಿ ಬಗ್ಗೆ ಎರಡು ಕಾರ್ಯಾಗಾರಗಳೂ ನಡೆದವು. ಕನ್ನಡ ಸಿನಿಮಾದ 75 ವರ್ಷಗಳ ಚರಿತ್ರೆಯನ್ನು ಬಿಂಬಿಸುವ ಒಂದು ಫೋಟೋ ಪ್ರದರ್ಶನ ಸಹ ಇತ್ತು.

ಉತ್ಸವದ ಫಿಲಂ ನೋಡಲು ಒಂದೇ ರೀತಿಯ ಪಾಸ್. ಅದು 500 ರೂ. ಪಾಸ್. ಬಹುಶಃ ದುಬಾರಿ. ಫಿಲಂ ಸೊಸೈಟಿ (ಅದೂ ಸುಚಿತ್ರ ಸೊಸೈಟಿಯವರಿಗೆ ಮಾತ್ರ) ಸದಸ್ಯರಿಗೆ, ವಿದ್ಯಾರ್ಥಿಗಳಿಗೆ ರಿಯಾಯಿತಿ (200 ರೂ.) ಇದ್ದರೂ, ಹಲವು ವರ್ಗಗಳ ಫಿಲಂ ಆಸಕ್ತರು ಉತ್ಸವದಲ್ಲಿ ಪಾಲುಗೊಳ್ಳುವುದು ಸಾಧ್ಯವಾಗಲಿಲ್ಲ. ನಿರ್ದಿಷ್ಟ ಫಿಲಂ ಅಥವಾ ನಿರ್ದಿಷ್ಟ ದಿನ ನೋಡ ಬಯಸುವವರಿಗೆ ದಿನದ ಪಾಸ್ ಬಹುಶಃ ಉತ್ಸವ ಮಾಡಿಕೊಳ್ಳಬೇಕಾದ ಅಗತ್ಯ ಬದಲಾವಣೆ. ಆದರೂ ಉತ್ಸವ ನಡೆದ ಫಿಲಂ ಹಾಲುಗಳು (ಕನಿಷ್ಠ ವಿಶನ್ ಸಿನೆಮಾದ ಮುಖ್ಯ ಹಾಲು 1 ಮತ್ತು 2) ಕಿಕ್ಕಿರಿದು ತುಂಬಿರುತ್ತಿದ್ದವು. ಹಲವು ಪ್ರಸಿದ್ಧ ಫಿಲಂಗಳನ್ನು ಜನ ನೆಲದ ಮೇಲೆ ಕೂತು, ನಿಂತು ನೊಡಿದರು.

ನೋಡುಗರ ಜನವಿಭಾಗದಲ್ಲಿ ವಿಸ್ತಾರ ಕಂಡು ಬಂತು. ಹಿಂದೆ ಫಿಲಂ ಸೊಸೈಟಿ ಸದಸ್ಯರು, ಫಿಲಂನಲ್ಲಿ ತೊಡಗಿಸಿಕೊಂಡವರು ಮತ್ತು ಫಿಲಂ ಗೀಳು ಇರುವವರಿಗೆ ಸೀಮಿತವಾಗಿದ್ದದ್ದು ಈ ಬಾರಿ ಹಲವು ಯುವ ಉದ್ಯೋಗಸ್ತರು, ವಿದ್ಯಾರ್ಥಿಗಳು, ಮೊದಲ ಬಾರಿ ಜಾಗತಿಕ ಮತ್ತು ಬೇರೆ ರೀತಿಯ ಸಿನಿಮಾಕ್ಕೆ ತೆರೆದುಕೊಳ್ಳುತ್ತಿರುವ ಉತ್ಸಾಹಿಗಳು ಕಂಡು ಬಂದರು. ಹಾಲಿವುಡ್, ಬಾಲಿವುಡ್ ಮತ್ತು ಸ್ಯಾಂಡಲ್‌ವುಡ್ ಫಿಲಂ ಬಿಟ್ಟು ಬೇರೆ ಫಿಲಂನ ಪರಿಚಯವಿಲ್ಲದ ಇವರು 'ಹೀಗೂ ಉಂಟೆ' ಅಂತ ಸಂಭ್ರಮ ಪಟ್ಟರು. ಬೆರಗಾದರು.

ಒಂದೇ ಸಮಯದಲ್ಲಿ ನಾಲ್ಕು ಬೇರೆ ಬೇರೆ ಜಾಗದಲ್ಲಿ ಪ್ರದರ್ಶಿತವಾಗುವ ಆರು ಫಿಲಂಗಳಲ್ಲಿ ಯಾವುದನ್ನು ಆಯ್ಕೆ ಮಾಡುವುದು ? ಹೇಗೆ ? ಎಂಬುದು ದೊಡ್ಡ ಸಮಸ್ಯೆಯಾಗಿತ್ತು. ಮೊದಲ ಒಂದೆರಡು ದಿನದ ನಂತರ ಪಾಸ್ ಖರೀದಿ ಮಾಡಿದ ಕೆಲವರಿಗೆ ಫಿಲಂ ವಿವರಗಳಿದ್ದ ಕೈಪಿಡಿ ಸಹ ಸಿಗದೆ, ಹೆಚ್ಚಿನವರು ಫಿಲಂ ಬದಲು ಸೀಟು ಅಥವಾ ಆಪ್ತರು (ಅಥವಾ ಆಪ್ತರು ಆಗಬಹುದಾದವರು) ಇರುವ ಹಾಲು ಆಯ್ಕೆ ಮಾಡಿಕೊಳ್ಳುತ್ತಿದ್ದರು! ನಾನು ಕೈಪಿಡಿ ನೋಡಿ ಹಲವು ಫಿಲಂ ಆಯ್ಕೆ ಮಾಡಿದರೂ, ಕೆಲವೊಮ್ಮೆ ಸೀಟು ಇರುವ ಹಾಲು ಆಯ್ಕೆ ಮಾಡಿದ್ದೂ ಇದೆ. ಆದರೂ ಒಂದೆರಡು ಅಪವಾದ ಬಿಟ್ಟರೆ ಯಾವ ಫಿಲಂ ಸಹ ನಿರಾಶಾದಾಯಕವಾಗಿರಲಿಲ್ಲ. ಫಿಲಂ ಸೊಸೈಟಿಗಳ ಮೂಲಕ ಅಷ್ಟಿಷ್ಟು ಜಾಗತಿಕ ಫಿಲಂ ಪರಿಚಯ ಇರುವ ನಾನು ಸಹ 'ಹೀಗೂ ಉಂಟೆ' ಅಂತ ಸಂಭ್ರಮ ಪಟ್ಟದ್ದು ಬೆರಗಾದದ್ದೇ ಹೆಚ್ಚು. ನಾನು ನೋಡಿದ ಫಿಲಂಗಳ ಪಟ್ಟಿ ಇಲ್ಲಿದೆ.

ಜಾಗತಿಕ ಸಿನಿಮಾಗಳ ವಿಭಾಗದ ಸಿನಿಮಾಗಳಲ್ಲಿ ಫ್ರಾನ್ಸ್ ಬಿಟ್ಟರೆ ಇತರ ಎಲ್ಲಾ ದೇಶಗಳ ಫಿಲಂ (ಬರ್ಕಿನಾ ಫಾಸೋ, ತುರ್ಕಿ, ಕಝಾಕಿಸ್ತಾನ, ಇರಾನ್) ಒಂದನ್ನು ಮೊದಲ ಬಾರಿಗೆ ನೋಡುತ್ತಿದ್ದೆ. ಈ ಪ್ರತಿ ಒಂದು ಫಿಲಂ ನೊಡಿದಾಗಲೂ ನನಗೆ ಪರಿಚಯವಿಲ್ಲದ ಒಂದು ಹೊಸ ಜಗತ್ತು ತೆರೆದುಕೊಂಡಂತೆ ಅನಿಸುತ್ತಿತ್ತು. 'ತಾರೇ ಜಮೀನ್ ಪರ್' ಹೋಲುವ 'ಸಮೂಹಗಾನ' ಸಹ ಫ್ರಾನ್ಸ್ ನ ಫಿಲಂನಲ್ಲಿ ಸಹ ಹಿಂದೆಂದೂ ನೊಡಿರದ ಒಂದು ವಿಭಾಗದ

ಪುಟ 14ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH